# ನಮ್ಮ ಸುತ್ತಮುತ್ತಲಿನ ಜಗತ್ತು

## ಭಾಗ 2

## ಇಯತ್ತೆ - ಮೂರನೆಯ



Tele MANAS

National Tele Mental Health Programme

14416

# ಟೆಲಿ ಮಾನಸ ಸಹಾಯವಾಣಿ

**Tele MANAS (Tele Mental Health Assistance and Networking Across States)**

**(14416/1800-89-14416)**

ರಾಷ್ಟ್ರೀಯ ಮಾನಸಿಕ ಆರೋಗ್ಯದ ಕಾರ್ಯಕ್ರಮದಡಿಯ ಕೇಂದ್ರ ಪುರಸ್ಕೃತ ಟೆಲಿಮಾನಸ ಈ ಯೋಜನೆಯನ್ನು ಅಕ್ಟೋಬರ 2022ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಟೆಲಿಮಾನಸ ಕಾರ್ಯಕ್ರಮದಡಿಯಲ್ಲಿ 24 x 7 ಉಚಿತ, ಏಕಾತ್ಮಿಕ ಮತ್ತು ಸಮಗ್ರ ಮಾನಸಿಕ ಸೇವೆಯನ್ನು 14416 ಈ ಸಹಾಯವಾಣಿ ಮೂಲಕ ನೀಡಲಾಗುತ್ತದೆ. ಇದರಲ್ಲಿ ವಿವಿಧ ಮಾನಸಿಕ ಸಮಸ್ಯೆಗಳಿಗಾಗಿ ತಜ್ಞರ ಮೂಲಕ ಚಿಕಿತ್ಸೆ ಹಾಗೂ ಸಮಾಲೋಚನೆ ನೀಡಲಾಗುತ್ತದೆ. ಟೆಲಿಮಾನಸ ಸಹಾಯವಾಣಿ ಕರೆ ಮಾಡಿದ ನಂತರ ತಾವು ನೀಡುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ರೀತಿಯ ಸಂಕೋಚವಿಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಹೇಳಬೇಕು ಮತ್ತು ಮನಸ್ಸಿನಲ್ಲಿರುವ ಅನುಮಾನಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದು ಮತ್ತು ಇತರರಿಗೂ ಸಹಾಯ ಪಡೆಯಲು ತಿಳಿಸಬೇಕು.

# ಮನೋದರ್ಪಣ

**ಮನೋದರ್ಪಣ (8448440632)** ಇದು ಉಚಿತ ದೂರವಾಣಿ ಸೇವೆಯಾಗಿದ್ದು, ಜುಲೈ 2020ರಿಂದ ಶಿಕ್ಷಣ ಮಂತ್ರಿಮಂಡಳದ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನಲ್ಲಿ ಮನೋದರ್ಪಣ ಕಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅದರಂತೆಯೇ ಶಿಕ್ಷಕರಿಗೆ ಮನೋವಿಜ್ಞಾನದ ಮಾರ್ಗದರ್ಶನ ಹಾಗೂ ಸಹಾಯವನ್ನು ಪಡೆಯುವುದಾಕ್ಕಾಗಿ ಬೆಳಿಗ್ಗೆ 8 ರಿಂದ ಸಾಯಂಕಾಲ 8.00 ಈ ಕಾಲಾವಧಿಯಲ್ಲಿ ವಾರದಲ್ಲಿರುವ ಎಲ್ಲಾ ದಿವಸಗಳಲ್ಲಿ ಉಪಲಬ್ಧ ಮಾಡಿಕೊಡಲಾಗಿದೆ. ವಿದ್ಯಾರ್ಥಿ, ಪಾಲಕರು ಹಾಗೂ ಶಿಕ್ಷಕರು ಅವಶ್ಯಕವಿರುವ ಮಾರ್ಗದರ್ಶನ ಹಾಗೂ ಸಮಾಲೋಚನೆ ದೊರಕಿಸಲು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು.

ಈ ಪಠ್ಯಪುಸ್ತಕವನ್ನು ಮಹಾರಾಷ್ಟ್ರ ಪುಣೆ ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ ಮಹಾರಾಷ್ಟ್ರ, ಪುಣೆ ಇವರು ಸಿದ್ಧಪಡಿಸಿದ ಪಠ್ಯಕ್ರಮ ಮತ್ತು ಅಭ್ಯಾಸಕ್ರಮದ ಪ್ರಕಾರ ಸಿದ್ಧಪಡಿಸಲಾಗಿದ್ದು ಅವರ ಮೂಲಕ ಈ ಪಠ್ಯ ಪುಸ್ತಕವನ್ನು ಪರಿಶೀಲಿಸಲಾಗಿದೆ. ಶಾಸನ ನಿರ್ಣಯ ಸಂಖ್ಯೆ ಅಭ್ಯಾಸ-2116 / (ಪ್ರ.ಕ್ರ.42 / 16) ಎಸ್ ಡಿ-4 ದಿನಾಂಕ 25-04-2016ರ ಅಡಿಯಲ್ಲಿ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿನಾಂಕ 01.04.2026ರ ಸಭೆಯಲ್ಲಿ ಈ ಪಠ್ಯ-ಪುಸ್ತಕವನ್ನು ಶೈಕ್ಷಣಿಕ ವರ್ಷ 2026-2027ರಿಂದ ನಿಗದಿಪಡಿಸಲು ಅನುಮತಿ ನೀಡಲಾಗಿದೆ.



# ನಮ್ಮ ಸುತ್ತಮುತ್ತಲಿನ ಜಗತ್ತು

## ಭಾಗ 2

## ಇಯತ್ತೆ - ಮೂರನೆಯ



ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411 014.

ಇಲ್ಲಿರುವ ಚೌಕಟ್ಟಿನಲ್ಲಿಯ Q.R. Code ಸ್ಮಾರ್ಟ್‌ಫೋನ ಮೂಲಕ ಸ್ಕ್ಯಾನ ಮಾಡಿದರೆ ನಿಮಗೆ ಡಿಜಿಟಲ್ ಪಠ್ಯಪುಸ್ತಕ ಹಾಗೂ ಪಠ್ಯಪುಸ್ತಕದಲ್ಲಿಯ ಘಟಕಗಳಿಗೆ ಸಂಬಂಧಿಸಿದ ದೃಕ್, ಶ್ರಾವ್ಯ ಮತ್ತು ದ್ರಕ್ ಶ್ರಾವ್ಯ ಸ್ವರೂಪದಲ್ಲಿಯ ಅಧ್ಯಯನ - ಅಧ್ಯಾಪನ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ ಜೂನ್
2026

© ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411014.

ಮಹಾರಾಷ್ಟ್ರ ರಾಜ್ಯ ಪಾಠ್ಯ-ಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.


## ಇತಿಹಾಸ ಸಮಿತಿ

ಡಾ. ಗಣೇಶ ರಾವೂತ (ಅಧ್ಯಕ್ಷ)
ಡಾ. ಮಂಜೀರಿ ಭಾಲೇರಾವ (ಸದಸ್ಯ)
ಶ್ರೀ. ಬಾಪೂಸಾಹೇಬ ಶಿಂದೆ (ಸದಸ್ಯ)
ಶ್ರೀ. ವೈಜನಾಥ ಕಾಳೆ (ಸದಸ್ಯ)
ಶ್ರೀ. ಸುಭಾಷ ರಾಠೋಡ (ಸದಸ್ಯ)
ಸೌ. ಉಷಾ ಖೋಪಡೆ (ಸದಸ್ಯ)
ಶ್ರೀ. ವಿಜಯಕುಮಾರ ಇಂಗವಲೆ (ಸದಸ್ಯ)
ಶ್ರೀಮತಿ ಪಲ್ಲವಿ ಘರಣೀಕರ (ಸದಸ್ಯ)
ಶ್ರೀ. ರಾಮಕುಮಾರ ರಾಯ (ಸದಸ್ಯ)
ಶ್ರೀ. ನಾಗೇಷ ಶಿಂಗಣೆ (ಸದಸ್ಯ)
ಶ್ರೀ. ರವಿಂದ್ರ ಭಾಪಕರ (ಸದಸ್ಯ)
ಶ್ರೀ. ಸಂತೋಷ ತಳೇಕರ (ಸದಸ್ಯ)
ಶ್ರೀ. ನಿತೀನ ಬಢೆ (ಸದಸ್ಯ)
ಶ್ರೀ. ರಾಜನ ಗರುಡ (ಸದಸ್ಯ)
ಶ್ರೀ. ನಿಲೇಶ ಪೂರೆ (ಸದಸ್ಯ
ಶ್ರೀ. ಸುನೀಲ ಮೆಶ್ರಾಮ (ಸದಸ್ಯ)
ಶ್ರೀ. ಹನುಮಂತ ಜಾಧವ (ಸದಸ್ಯ)
ಕು. ಪ್ರಾಜಕ್ತಾ ಅಂಬುಲಕರ (ಸದಸ್ಯ)
ಶ್ರೀ. ದತ್ತಾತ್ರಯ ಚೌಧರಿ (ಸದಸ್ಯ)
ಶ್ರೀ. ಸದಾನಂದ ಡೊಂಗರೆ (ಸದಸ್ಯ)
ಶ್ರೀ. ರಾಮದಾಸ. ಠಾಕರ (ಸದಸ್ಯ)
ಶ್ರೀಮತಿ ಮನಿಷಾ ಸೋನವಣೆ (ಸದಸ್ಯ)
ಶ್ರೀ. ಸೋಮನಾಥ ರೋಡೆ (ನಿಮಂತ್ರಿತ)
ಶ್ರೀ. ಮೊಗಲ ಜಾಧವ (ನಿಮಂತ್ರಿತ)
ಶ್ರೀ. ಅರುಣ ಜಾಧವ (ಅಭ್ಯಾಸಕ್ರಮ ಸಮನ್ವಯಕ)
ಶ್ರೀ. ರಾಮೇಶ್ವರ ಲೊಟಕೆ (ಅಭ್ಯಾಸಕ್ರಮ ಸಮನ್ವಯಕ)
ಸೌ. ವರ್ಷಾ ಸರೋದೆ (ಸದಸ್ಯ ಕಾರ್ಯದರ್ಶಿ)

## ನಾಗರೀಕ ಶಾಸ್ತ್ರಸಮಿತಿ

ಡಾ. ಸಂಜ್ಯೋತ ಆಪಟೆ (ಅಧ್ಯಕ್ಷ)
ಪ್ರಾ. ರಾಜೇಂದ್ರ ಭೋಯಿವಾರ (ಸದಸ್ಯ)
ಶ್ರೀ ಇರಫಾನ ಸಯ್ಯದ (ಸದಸ್ಯ)
ಶ್ರೀ. ವಿಕ್ರಮ ಅಡಸೂಳ (ಸದಸ್ಯ)
ಶ್ರೀ. ರಾಜೇಂದ್ರ ಟೆಕಾಡೆ (ಸದಸ್ಯ)
ಶ್ರೀಮತಿ ರೋಹಿಣಿ ಗವ್ಹಾಣೆ (ಸದಸ್ಯ)
ಡಾ. ಅಶೋಕ ಬಾಂಗರ (ಸದಸ್ಯ)
ಶ್ರೀಮತಿ ಭಾರತಿ ಅವಟಿ (ಸದಸ್ಯ)
ಶ್ರೀ. ಶ್ಯಾಮಕಾಂತ ರುಲೆ (ಸದಸ್ಯ)
ಶ್ರೀ. ಚಾಂದಖಾನ ಪಠಾಣ (ಸದಸ್ಯ)
ಶ್ರೀ. ನಾಗನಾಥ ವಿಭೂತೆ (ಸದಸ್ಯ)
ಶ್ರೀ. ಆಕಾಶ ಝೂಡೆ (ಸದಸ್ಯ)
ಶ್ರೀ. ವಿನೋದ ಅವರಾದಿ (ಸದಸ್ಯ)
ಶ್ರೀ. ಶ್ರೀನಿವಾಸ ಮೊರೆ (ಸದಸ್ಯ)
ಶ್ರೀಮತಿ ಸ್ಪೃಹಾ ಇಂದೂ (ಸದಸ್ಯ)
ಶ್ರೀ. ಅನಿಲ ರಾಜಗುರು (ಸದಸ್ಯ)
ಶ್ರೀ. ಪ್ರಮೋದ ವಾಘಮೊಡೆ (ಸದಸ್ಯ)
ಡಾ. ಪರಿಮಲ ಸುಧಾಕರ (ನಿಯಂತ್ರಿತ)
ಡಾ. ವಿರಾಜ ಮಹಾಜನ (ನಿಯಂತ್ರಿತ)
ಡಾ. ಅಜಿಂಕ್ಯ ಗಾಯಕವಾಡ (ನಿಯಂತ್ರಿತ)
ಪ್ರಾ. ವೀಣಾ ಕೆಂಚಿ (ನಿಯಂತ್ರಿತ)
ಶ್ರೀಮತಿ ವರ್ಷಾರಾಣಿ ಭೊಪಳೆ (ಅಭ್ಯಾಸಕ್ರಮ ಸಮನ್ವಯಕ)
ಸೌ. ವರ್ಷಾ ಸರೋದೆ (ಸದಸ್ಯ ಕಾರ್ಯದರ್ಶಿ)

## ಗಾಭಾ ಸಮಿತಿ ಸದಸ್ಯ

ಡಾ. ಮಹೇಶ್ವರ ಕಳಲಾವೆ
ಶ್ರೀ ಪ್ರಶಾಂತ ದಿವೆಕರ
ಶ್ರೀ ಮೋಹನ್ ಶೇಟೆ
ಶ್ರೀಮತಿ ಪ್ರತಿಮಾ ಗುಪ್ತೆ

## ಇತಿಹಾಸ ವ ನಾಗರಿಕ ಶಾಸ್ತ್ರ

ಪಠ್ಯಪುಸ್ತಕ ಮಂಡಳ, ಪುಣೆ

## ಸಮಿಕ್ಷಕ

ಡಾ. ಸದಾನಂದ ಮೋರೆ (ಗುಣವತ್ತಾ ಪರೀಕ್ಷಕರು)
ಡಾ. ನೀತಾ ಬೊಕಿಲ (ಗುಣವತ್ತಾ ಪರೀಕ್ಷಕರು)
ಆಡ. ಶ್ರೀಕಾಂತ ದಳವಿ (ವಿಧಿತಜ್ಞ)
ಡಾ. ಶರ್ಮಿಷ್ಠಾ ಓಕ (CWSN ತಜ್ಞ)

**ಮುಖಪುಟ ಚಿತ್ರಕಾರ :** ಶ್ರೀ ದೇವದತ್ತ ಬಲಕವಡೆ

**ಅಕ್ಷರ ಜೋಡಣೆ :** ಕೇಸನ್ ಲ್ಯಾಂಗ್ವೇಜ್ ಬ್ಯುರೋ, ಮುಂಬಯಿ

**ಕಾಗದ :** 70 ಜಿ. ಎಸ್. ಎಮ್. ಕ್ರಿಮವೋವ್ಹ

**ಮುದ್ರಣಾದೇಶ :**

**ಮುದ್ರಕ :**

## ಲೇಖಕ

ಶ್ರೀಮತಿ ಇಂದ್ರಾಯಣಿ ಚವ್ಹಾಣ
ಡಾ. ಗಾಯತ್ರಿ ಲೆಲೆ

## ನಿರ್ಮಿತಿ

**ಶ್ರೀಮತಿ ಮಿತಾಲಿ ಶಿತಪ**
ಪ್ರಾ. ಮುಖ್ಯ ನಿರ್ಮಿತಿ ಅಧಿಕಾರಿ

**ಶ್ರೀ ಶಶಾಂಕ ಕಣಿಕದಳೆ**
ನಿರ್ಮಾಣ ಅಧಿಕಾರಿ

## ಕನ್ನಡ ಸಂಯೋಜನೆ

**ಶ್ರೀಮತಿ ಕೇತಕಿ ಜಾನಿ**
ಪ್ರಭಾರಿ ವಿಶೇಷಾಧಿಕಾರಿ
ಕನ್ನಡ ಮತ್ತು ವಿದ್ಯಾಸಚಿವ (ಭಾಷಾ) ಪಾಠಪುಸ್ತಕ ಮಂಡಳ, ಪುಣೆ-4
**ಭಾಷಾಂತರಕಾರ -** ಶ್ರೀ ರಾಜಕುಮಾರ ನ ಕೋರಿ
**ಸಮಿಕ್ಷಕ -** ಶ್ರೀ ಗುಲಾಬ. ಸು. ಕೋರಿ

## ಪ್ರಕಾಶಕ

**ಶ್ರೀ ಹೇಮಂತ್ ಬಾಬರ**
ಪ್ರಾ. ನಿಯಂತ್ರಕ
ಪಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ - 25

## ಸಂಯೋಜನ

ಸೌ. ವರ್ಷಾ ಸರೊದೆ
ಪ್ರ. ವಿಶೇಷಾಧಿಕಾರಿ, ಇತಿಹಾಸ ಮತ್ತು ನಾಗರಿಕಶಾಸ್ತ್ರ



ಭಾರತದ ಸಂವಿಧಾನ

ಪೀಠಿಕೆ

ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ
ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ
ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ಭಾರತದ ಸಂವಿಧಾನ

ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು-ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು.
(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡುವ ಆದರ್ಶಗಳನ್ನು ಪಾಲಿಸಬೇಕು.
(ಗ) ದೇಶದ ಸಾರ್ವಭೌಮತ್ವ ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.
(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.
(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.
(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.
(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಬೇಕು.
(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.
(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.
(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.
(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಒದಗಿಸಿಕೊಡಬೇಕು.

# ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

# ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# राज्यगीत

जय जय महाराष्ट्र माझा, गर्जा महाराष्ट्र माझा
जय जय महाराष्ट्र माझा, गर्जा महाराष्ट्र माझा ।।धृ।।

भिती न आम्हा तुझी मुळी ही गडगडणाऱ्या नभा
अस्मानाच्या सुलतानीला जबाब देती जिभा
सह्याद्रीचा सिंह गर्जतो शिव शंभू राजा
दरी दरीतून नाद गुंजला महाराष्ट्र माझा
जय जय महाराष्ट्र माझा, गर्जा महाराष्ट्र माझा ।।१।।

काळ्या छातीवरी कोरली, अभिमानाची लेणी
पोलादी मनगटे खेळती, खेळ जीवघेणी
दारिद्र्याच्या उन्हात शिजला
निढळाच्या घामाने भिजला
देश गौरवासाठी झिजला
दिल्लीचे ही तख्त राखितो, महाराष्ट्र माझा
जय जय महाराष्ट्र माझा, गर्जा महाराष्ट्र माझा
जय जय महाराष्ट्र माझा ।।२।।

# ಪ್ರಸ್ತಾವನೆ

ಆತ್ಮೀಯ
ಮಕ್ಕಳೇ,

ಇಪ್ಪತ್ತೊಂದನೆಯ ಶತಮಾನದ ಮೊದಲ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ ಮಹಾರಾಷ್ಟ್ರ ರಾಜ್ಯವು ಸಿದ್ಧಪಡಿಸಿದ ಪಠ್ಯಕ್ರಮದ ಪ್ರಕಾರ ಇತಿಹಾಸ ಹಾಗೂ ನಾಗರಿಕಶಾಸ್ತ್ರದ ವಿಷಯಗಳನ್ನು ಪರಿಚಯಿಸುವ 'ನಮ್ಮ ಸುತ್ತಮುತ್ತಲಿನ ಜಗತ್ತು ಭಾಗ 2' ಎಂಬ ಪಠ್ಯಪುಸ್ತಕವನ್ನು ನಿಮಗೆ ಪ್ರಸ್ತುತಪಡಿಸಲು ನಮಗೆ ತುಂಬಾ ಸಂತೋಷವಾಗುತ್ತದೆ. ನೀವು 3ನೇ ತರಗತಿಯ ನಂತರ ಮೊದಲ ಬಾರಿಗೆ ಈ ವಿಷಯವನ್ನು ಅಧ್ಯಯನ ಮಾಡುತ್ತಿದ್ದೀರಿ. ಈ ವಿಷಯವನ್ನು ಅಧ್ಯಯನ ಮಾಡುವುದರಿಂದ, ನಿಮ್ಮ ಸುತ್ತಮುತ್ತಲಿನ ವಿವಿಧ ವಿಷಯಗಳಿಗೆ ಹೊಸದಾಗಿ ಪರಿಚಯವಾಗುತ್ತದೆ.

ಈ ಪಾಠ್ಯಪುಸ್ತಕದ ಆಶಯವು ನಿಮ್ಮ ಕುಟುಂಬದಿಂದ ಆರಂಭವಾಗುತ್ತದೆ. ಸಂಬಂಧಿಕರು, ಸಂಬಂಧಗಳು, ನಮ್ಮ ನೆರೆಹೊರೆಯವರು ಮತ್ತು ನಂತರ ನಿಮ್ಮ ನೆಚ್ಚಿನ ಶಾಲೆಯ ಬಗ್ಗೆ ನೀವು ಹೆಚ್ಚಿನ ಮಾಹಿತಿಯನ್ನು ಪಡೆಯುತ್ತೀರಿ. ನಿಮ್ಮ ಪರಿಸರದಲ್ಲಿಯ ನೆರೆಯುವ ಮಾರುಕಟ್ಟೆಗಳ ಬಗ್ಗೆ ಮಾಹಿತಿ ಪಡೆಯುವರಿದ್ದಿರಿ, ಹಾಗೆಯೇ ನಿಮ್ಮ ಅಗತ್ಯತೆಗಳು ಮತ್ತು ಸಮಸ್ಯೆಗಳನ್ನು ತಿಳಿದುಕೊಳ್ಳುವರಿದ್ದಿರಿ. ನೀರಿನ ಮಹತ್ವ, ಉಳಿತಾಯ, ಪರಿಸರದಲ್ಲಿಯ ವಿವಿಧ ಐತಿಹಾಸಿಕ ವಾಸ್ತುಗಳು, ಸಾರಿಗೆ ಸೌಲಭ್ಯಗಳು, ಪ್ರಕೃತಿಯ ರಕ್ಷಣೆ ಹಾಗೂ ಸಂವರ್ಧನೆ ಇವುಗಳ ಬಗ್ಗೆ ಮಾಹಿತಿಯಾಗುವುದು. ನಾವು ಭಾರತ ದೇಶದಲ್ಲಿ ವಾಸಿಸುತ್ತೇವೆ, ಆದ್ದರಿಂದ ಇಲ್ಲಿನ ಸಂಪ್ರದಾಯ, ಇಲ್ಲಿನ ವೈವಿಧ್ಯತೆ, ಸಮಾಜದಲ್ಲಿಯ ಮಹಾನ್ ವ್ಯಕ್ತಿಗಳು ಮತ್ತು ಸಮಾಜ ಸುಧಾರಕರ ಬಗ್ಗೆಯೂ ಕಲಿಯುವವರಿದ್ದೇವೆ. ನಮ್ಮ ದೇಶದಲ್ಲಿ ನಾವು ಒಗ್ಗಟ್ಟಿನಿಂದ ಇರಬೇಕೆಂಬುದು ನಿಮ್ಮ ಗಮನಕ್ಕೆ ಬರುವುದು.

ಈ ಪಾತ್ರವನ್ನು ಸಚಿತ್ರವಾಗಿ ವ್ಯಕ್ತಪಡಿಸುವ ಪಠ್ಯಪುಸ್ತಕದ ಮುಖಪುಟವು ಭಾರತದ ವೈವಿಧ್ಯತೆಯನ್ನು ತೋರಿಸಲು ಭಾರತದ ದೊಡ್ಡ ನಕಾಶೆಯ ಉಪಯೋಗ ಮಾಡಲಾಗಿದೆ.

ಪಠ್ಯಪುಸ್ತಕದಲ್ಲಿಯ ವಿವಿಧ ಕೃತಿ ಮಾಡುವಾಗ ನಿಮಗೆ ಅತ್ಯಂತ ಆನಂದವಾಗುವುದು. ಈ ಪುಸ್ತಕದ ಚರ್ಚೆ, ಲೇಖನ, ಚಿತ್ರನಿರೀಕ್ಷಣೆ, ತಿಳಿದುಕೊಳ್ಳುವುದು, ಅಭಿಪ್ರಾಯಗಳನ್ನು ಪಡೆಯುವುದು, ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಮುಂತಾದ ವಿವಿಧ ಚಟುವಟಿಕೆಗಳ ಮೂಲಕ ನಿಮಗೆ ವಿಷಯವನ್ನು ಸುಲಭ ರೀತಿಯಲ್ಲಿ ಪರಿಚಯಿಸಿಮಾಡಿಕೊಳ್ಳುವಿರಿ. ಪಠ್ಯಪುಸ್ತಕದಲ್ಲಿ ಆಕರ್ಷಿತ ಚಿತ್ರಗಳನ್ನು ಕೊಡಲಾಗಿದೆ. ಚಿತ್ರಗಳಿಂದಲೂ ವಿಷಯವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುವದು. ಪುಸ್ತಕದಲ್ಲಿ ನಲಿ-ಕಲಿಯ ಮೂಲಕ ಕಲಿಯುದರ ಮೇಲೆ ಒತ್ತು ನೀಡಲಾಗಿದೆ. ಈ ಹೊಸ ವಿಷಯದ ಜಗತ್ತಿನಲ್ಲಿ ನಿಮ್ಮೆಲ್ಲರಿಗೂ ಆತ್ಮೀಯ ಸ್ವಾಗತ ಮತ್ತು ಮೂರನೆಯ ತರಗತಿಯಲ್ಲಿ ನಿಮ್ಮ ಅಧ್ಯಯನಕ್ಕೆ ಶುಭಾಶಯಗಳು!

ಇತಿಹಾಸ ಹಾಗೂ ನಾಗರಿಕಶಾಸ್ತ್ರ ಸಮಿತಿ, ಲೇಖಕ, ಚಿತ್ರಕಾರ ಹಾಗೂ ಛಾಯಾಚಿತ್ರಕಾರರು ತುಂಬಾ ಶ್ರದ್ಧೆಯಿಂದ ಮತ್ತು ಕಠಿಣ ಪರಿಶ್ರಮದಿಂದ ಸಿದ್ಧಪಡಿಸಿದ್ದಾರೆ. ಮಂಡಳಿಯು ಅವರೆಲ್ಲರಿಗೂ ಪ್ರಾಮಾಣಿಕವಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ಪಾಠ್ಯಪುಸ್ತಕದ ವಿಷಯದ ಬಗ್ಗೆ ಪೋಷಕ, ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಯಾವುದೇ ಸಮಸ್ಯೆಯಿದ್ದಲ್ಲಿ ಪಠ್ಯಪುಸ್ತಕ ಮಂಡಳಿಗೆ ವರದಿ ತಿಳಿಸಬೇಕು.

ಪುಣೆ

ದಿನಾಂಕ: 19 ಎಪ್ರೀಲ್ 2026

ಭಾರತೀಯ ಸೌರ ದಿನಾಂಕ: ವೈಶಾಖ ಶು. 2, ಶಕೆ 1948,
ಅಕ್ಷಯ ತೃತೀಯಾ

(ಅನುರಾಧಾ ಓಕ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಾಣ ಮತ್ತು
ಪಠ್ಯಕ್ರಮ ಸಂಶೋಧನಾ ಮಂಡಳಿ, ಪುಣೆ.

# ನಮ್ಮ ಸುತ್ತಮುತ್ತಲಿನ ಪ್ರಪಂಚ ಭಾಗ - 2

| ಅಭ್ಯಾಸಕ್ರಮ ಧ್ಯೇಯ: CG-1 ವಿದ್ಯಾರ್ಥಿಗಳು ತಮ್ಮ ಸುತ್ತಲಿನ ನೈಸರ್ಗಿಕ ಮತ್ತು ಸಾಮಾಜಿಕ-ಸಾಂಸ್ಕೃತಿಕ ಪರಿಸರವನ್ನು ಅನ್ವೇಷಿಸಲು ಮತ್ತು ಅದರಲ್ಲಿ ತೊಡಗಿಸಿ ಇಡುವುದು. | | | | |
|---|---|---|---|---|
| ಅ.ನಂ | ಪಾಠದ ಹೆಸರು | ಅಭ್ಯಾಸಕ್ರಮದ ಕ್ಷಮತೆ | ಅಧ್ಯಯನದ (ನಿಷ್ಪತ್ತಿ)ಗಳು | ಪುಟ ಕ್ರಮಾಂಕ |
| 1 | ನಮ್ಮ ಕುಟುಂಬ | C-1.2 - ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳು (ಮನುಷ್ಯ, ಪ್ರಾಣಿ/ಪ್ರಕೃತಿ) ಮತ್ತು ಸಂಪ್ರದಾಯ (ಕಲೆ, ಹಬ್ಬ ಉತ್ಸವಗಳು) ಇವುಗಳನ್ನು ವರ್ಣಿಸುತ್ತಾನೆ. | • ಕುಟುಂಬದ ವಿವಿಧ ಪ್ರಕಾರಗಳು ಮತ್ತು ಸ್ವರೂಪಗಳನ್ನು ವಿವರಿಸಿ ಸಂಬಂಧಗಳನ್ನು ಹೇಳುವನು.<br>i) ಕುಟುಂಬದಲ್ಲಿಯ ಸಂಬಂಧಗಳನ್ನು ಸ್ಪಷ್ಟಪಡಿಸುತ್ತಾನೆ.<br>ii) ಕುಟುಂಬಗಳ ಪ್ರಕಾರಗಳು ಮತ್ತು ಸ್ವರೂಪವನ್ನು ಸ್ಪಷ್ಟಪಡಿಸುತ್ತಾನೆ. | 1,2,3,5,6<br>2,3,4,5,6 |
| 2 | ಕುಟುಂಬದ ವಂಶಾವಳಿ | C-1.5 - ಸ್ಥಾನಿಕ ಸಂಸಾಧನಗಳ ಬಳಕೆ ಮಾಡಿ ಸ್ವತಃ ವಸ್ತುಗಳ ನಿರ್ಮಿತಿ (ವಂಶಾವಳಿ, ಲಕೋಟೆಗಳು, ಕಾಗದದ ಪ್ರಾಣಿಗಳು) ಸ್ವತಃದ ಮನೆಯಲ್ಲಿ ಅಥವಾ ವರ್ಗ ಕೋಣೆಯ ಅಲಂಕಾರಕ್ಕಾಗಿ ಮಾಡುತ್ತಾನೆ. | • ತನ್ನ ಸ್ವಂತ ಕುಟುಂಬದ ವಂಶಾವಳಿಯನ್ನು ಸ್ಪಷ್ಟಪಡಿಸುತ್ತಾನೆ. | 7,8,9,10 |
| 3 | ನನ್ನ ಶಾಲೆ | C-1.4 - ಸ್ಥಾನಿಕ ಸಂಸ್ಥೆಗಳು (ಕುಟುಂಬ, ಶಾಲೆ, ಬ್ಯಾಂಕ್, ಅಂಚೆ ಕಚೇರಿ, ಮಾರುಕಟ್ಟೆ ಮತ್ತು ಗ್ರಾಮ ಪಂಚಾಯತಿ) ವಿವಿಧ ಸ್ವರೂಪಗಳಲ್ಲಿ (ಕಥೆಗಳು, ಚಿತ್ರಗಳು, ಕೋಷ್ಟಕ ಮಾಹಿತಿ, ವರದಿಗಳು) ಕಾರ್ಯ ಸ್ಪಷ್ಟ ಮಾಡುತ್ತಾನೆ ಮತ್ತು ಅವುಗಳ ಪಾತ್ರಗಳನ್ನು ವಿಶ್ಲೇಷಿಸುತ್ತಾನೆ. | • ಸ್ಥಾನಿಕ ಸಂಸ್ಥೆಗಳ ಕಾರ್ಯಗಳನ್ನು ಹೇಳಿ ಅವುಗಳ ಪಾತ್ರಗಳನ್ನು ವಿಶ್ಲೇಷಿಸುತ್ತಾನೆ.<br>i) ಶಾಲೆಯ ಕಾರ್ಯಗಳನ್ನು ಸ್ಪಷ್ಟ ಮಾಡಿ ಅವುಗಳ ಪಾತ್ರಗಳನ್ನು ವಿಶ್ಲೇಶಿಸುತ್ತಾನೆ. | 11,12,13,14, 15,16,17<br>11,12,13,14, 15,16,17 |
| 4 | ಮಾರುಕಟ್ಟೆ | C-1.4 - ಸ್ಥಾನಿಕ ಸಂಸ್ಥೆಗಳ (ಕುಟುಂಬ, ಶಾಲೆ, ಬ್ಯಾಂಕ್, ಪೋಸ್ಟ್ ಆಫೀಸ, ಮಾರುಕಟ್ಟೆ ಮತ್ತು ಗ್ರಾಮ ಪಂಚಾಯತಿ) ವಿವಿಧ ಸ್ವರೂಪಗಳಲ್ಲಿ (ಕಥೆಗಳು, ಚಿತ್ರಗಳು, ಕೋಷ್ಟಕ ಮಾಹಿತಿ, ವರದಿಗಳು) ಕಾರ್ಯ ಸ್ಪಷ್ಟಮಾಡುತ್ತಾನೆ ಮತ್ತು ಅವುಗಳ ಪಾತ್ರಗಳನ್ನು ವಿಶ್ಲೇಷಿಸುತ್ತಾನೆ. | • ಮಾರುಕಟ್ಟೆಯ ಕಾರ್ಯ ನಿರ್ವಹಣೆಯನ್ನು ಸ್ಪಷ್ಟಪಡಿಸಿ ಅವುಗಳ ಪಾತ್ರಗಳನ್ನು ವಿಶ್ಲೇಶಿಸುತ್ತಾನೆ. | 18,19,20,21, 22,23,24,25 |
| ಅಭ್ಯಾಸಕ್ರಮದ ಧ್ಯೆಯ: CG-6 ಸುತ್ತಮುತ್ತಲಿನ ಪರಿಸರದ ಬಗ್ಗೆ ವಿವಿಧ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಲು ವಿವಿಧ ಮೂಲಗಳಿಂದ ಪಡೆದ ಮಾಹಿತಿಯನ್ನು ಬಳಸುವುದು.<br>CG-4 ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದ ಬಗ್ಗೆ ಸಂವೇದನಶೀಲತೆಯನ್ನು ವಿಕಸಿತಗೊಳಿಸುವದು.<br>CG-9 ಭಾರತದ ಗೌರವಶಾಲಿ ಇತಿಹಾಸದ ಮಹಾನ್ ವ್ಯಕ್ತಿಗಳ (ವಿಶೇಷವಾಗಿ ಮಹಾರಾಷ್ಟ್ರಕ್ಕೆ ಸಂಭಂಧಿಸಿದಂತೆ) ಜೀವನ ಕಾರ್ಯದ ಬಗ್ಗೆ ಅಭಿರುಚಿ ನಿರ್ಮಾಣ ಮಾಡವುದು. ರಾಷ್ಟ್ರ ನಿರ್ಮಾಣಕ್ಕೆ ಅವರ ಕೊಡುಗೆ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಅವರ ಪಾತ್ರವನ್ನು ವಿವರಿಸುವದು. | | | | |
| 5 | ನಿಮ್ಮ ಅಗತ್ಯಗಳು ಮತ್ತು ಸಮಸ್ಯೆಗಳು | C-4.3<br>ಸುತ್ತಮುತ್ತಲಿನ ಪರಿಸರದಲ್ಲಿಯ ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಬಗ್ಗೆ ವರ್ಣಿಸುತ್ತದೆ.<br>C-4.6<br>ವಿಭಿನ್ನ ಪರಿಸ್ಥಿತಿಯಲ್ಲಿ ಜನರ ಅಗತ್ಯಗಳನ್ನು ಗುರುತಿಸುತ್ತದೆ. ಹೀಗೆ: ಸಂಪನ್ಮೂಲಗಳ ಉಪಲಬ್ದತೆಯ ನಿಯಮಗಳು, ಸಮಾನ ಅವಕಾಶ, ಕಾರ್ಯ ವಿಭಜನೆ ಮತ್ತು ಆಸರೆ ಇ.<br>C-6.1<br>ನಿರ್ದಿಷ್ಟ ಪ್ರಶ್ನೆಗಳಿಗೆ, ಪ್ರತ್ಯೇಕವಾಗಿ ಅಥವಾ ಗುಂಪುಗಳಲ್ಲಿ ಸಾಮಾನ್ಯ ವಿಚಾರಣೆ ಮಾಡುತ್ತಾನೆ.<br>C-9.2<br>ಚತುರತೆ, ಧೈರ್ಯ ಮತ್ತು ವಿವೇಕ ಇವುಗಳಿಂದ ಪ್ರತಿಕೂಲತೆಯನ್ನು ಜಯಿಸಬಹುದು. ಇದನ್ನು ಮಹಾನ ವ್ಯಕ್ತಿಗಳ ಚರಿತ್ರೆಗಳಿಂದ ಅಳವಡಿಸಿಕೊಳ್ಳುತ್ತಾನೆ. | • ಸುತ್ತಮುತ್ತಲಿನ ಪರಿಸರದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಬಗ್ಗೆ ಮಾಹಿತಿಯನ್ನು ಹೇಳುತ್ತಾನೆ.<br>• ಮಾನವನ ಮೂಲಭೂತ ಅಗತ್ಯಗಳ ಪಟ್ಟಿ ಮಾಡಿ, ಅವುಗಳ ಮಹತ್ವವನ್ನು ಹೇಳುತ್ತಾನೆ.<br>• ಲಭ್ಯವಿರುವ ಸಂಪನ್ಮೂಲಗಳು ಮತ್ತು ಕೌಶಲ್ಯಗಳಿಗೆ ಅನುಗುಣವಾಗಿ ಜನರಲ್ಲಿ ಕಾರ್ಯ ವಿಭಜನೆಯಾಗುತ್ತವೆ ಎಂಬುದು ಹೇಳುತ್ತಾನೆ.<br>• ಪರಿಸರಿದಲ್ಲಿಯ ಜನರ ಸಮಸ್ಯೆಗಳು ಹಾಗೂ ಅಗತ್ಯಗಳ ಯೋಗ್ಯ ಪ್ರಶ್ನೆಗಳ ಮೂಲಕ ತಿಳಿದುಕೊಂಡು ಮಾಡಬೇಕಾದ ಉಪಾಯ ಯೋಜನೆಗಳನ್ನು ಸೂಚಿಸುತ್ತಾನೆ.<br>• ಪ್ರಶ್ನೆಯ ಆಧಾರದ ಮೇಲೆ, ಅಂಗವಿಕಲರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಪಡೆಯುತ್ತಾನೆ.<br>i) ಪರಿಸರದಲ್ಲಿಯ ಜನರ ಅಗತ್ಯತೆಗಳು ಮತ್ತು ಸಮಸ್ಯೆಗಳನ್ನು ಪಟ್ಟಿ ಮಾಡಿ ಅವುಗಳನ್ನು ವರ್ಗೀಕರಿಸುತ್ತಾನೆ.<br>• ಜಾಣ್ಮೆ, ಧೈರ್ಯ ಹಾಗೂ ಬುದ್ಧಿವಂತಿಕೆ ಇವುಗಳ ಮೂಲಕ ಸಮಸ್ಯೆಗಳನ್ನು ನಿವಾರಿಸಲು ಬರುತ್ತದೆ. ಇವುಗಳ ಉದಾಹರಣೆಗಳನ್ನು ಹೇಳುತ್ತಾನೆ. | 26,27,28,29,30<br>26,27,28, 29, 30,33,34<br>31,32,33,34, 35,36<br>31,32,33,34, 35,36<br>13,14,32,33, 34,35,36,83<br>26,28,29<br>34,36 |

| | | | | |
|---|---|---|---|---|
| 6 | ಜಲ ಸಾಕ್ಷರತೆ | C-9.3<br>ಮಹಾನ ವ್ಯಕ್ತಿಗಳ ಜೀವನ ಚರಿತ್ರೆಗಳಿಂದ ಸಮಾನತೆ, ನ್ಯಾಯ, ಪರಿಸರ ಸಂರಕ್ಷಣೆ, ಜಲ ಸಾಕ್ಷರತೆ ಇತ್ಯಾದಿಗಳ ಬಗ್ಗೆ ತಿಳಿದುಕೊಂಡು ಅದಕ್ಕೆ ತಕ್ಕಂತೆ ವರ್ತಿಸುತ್ತೇವೆ. | • ಜಲ ಸಾಕ್ಷರತೆಯ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವ ಮೂಲಕ, ಜಲ ಸಾಕ್ಷರತೆಯ ಕುರಿತು ಮಹಾನ ವ್ಯಕ್ತಿಗಳು ಮಾಡಿದ ಕೆಲಸಗಳನ್ನು ತಿಳಿದುಕೊಳ್ಳುತ್ತಾನೆ ಮತ್ತು ಆಚರಣೆಯಲ್ಲಿ ತರುತ್ತಾನೆ. | 37,38,39,40, 41,42,43 |
| **ಅಭ್ಯಾಸ ಕ್ರಮದ ಧ್ಯೇಯ: CG-4 ಸಾಮಾಜಿಕ ಮತ್ತು ನೈಸರ್ಗಿಕ ಪರಿಸರಗಳ ಬಗ್ಗೆ ಸಂವೇದನ ಶೀಲತೆಯನ್ನು ಬೆಳೆಸುವುದು.**<br>**CG-2 ಪರಿಸರದಲ್ಲಿನ ಪರಸ್ಪರ ಸಂಬಂಧಗಳ ನೀರಿಕ್ಷಣೆ ಮತ್ತು ಅನುಭವದ ಮೂಲಕ ಅರ್ಥಮಾಡಿಕೊಂಡು 'ವಸುಧೈವ ಕುಟುಂಬಕಂ' ಎಂಬ ಸಂಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು.**<br>**CG-6 ಸುತ್ತಮುತ್ತಲಿನ ಪರಿಸರದ ಬಗ್ಗೆ ವಿವಿಧ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಲು ವಿವಿಧ ಮೂಲಗಳಿಂದ ಪಡೆದ ಮಾಹಿತಿಯನ್ನು ಬಳಸುವದು.**<br>**CG-8 ಮಾನವ ಉತ್ಕ್ರಾಂತಿಯ ಹಂತಗಳು ಮತ್ತು ಪ್ರತಿ ಹಂತದಲ್ಲಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದಲಾವಣೆಗಳ ಆಕಲನ ಮಾಡುವುದು.** | | | | |
| 7 | ಭಾರತೀಯ ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆ | C-2.2<br>ಸುತ್ತಮುತ್ತಲಿನ ಪರಿಸರದಲ್ಲಿಯ ನೈಸರ್ಗಿಕ ಪರ್ಯಾವರಣ ಮತ್ತು ಸಾಂಸ್ಕೃತಿಕ ಆಚರಣೆಗಳ (ಕೆಲಸದ ಪ್ರಕಾರಗಳು, ಆಹಾರ, ಹಬ್ಬಗಳು, ಸಂಪ್ರದಾಯಗಳು) ನಡುವಿನ ಸಂಬಂಧವನ್ನು ವಿವರಿಸುತ್ತಾನೆ. | • ಬೆಳೆ, ಋತು ಹಾಗೂ ಅದಕ್ಕೆ ಸಂಬಂಧಿಸಿದ ಹಬ್ಬಗಳು ಮತ್ತು ಆಚರಣೆಗಳ ಬಗ್ಗೆ ಮಾಹಿತಿಯನ್ನು ಹೇಳುತ್ತಾನೆ.<br>• ಪರಿಸರದಲ್ಲಿಯ ನೈಸರ್ಗಿಕ ಪರ್ಯಾವರಣ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳ ಸಹ ಸಂಬಂಧವನ್ನು ಜೋಡಿಸುತ್ತಾನೆ.<br>• ಪರಿಸರದಲ್ಲಿಯ ಪರ್ಯಾವರಣದ ಘಟಕಗಳ ಮಾಹಿತಿ ಹೇಳುತ್ತಾನೆ.<br>• ಸುತ್ತಮುತ್ತಲಿನ ಪರಿಸರದೊಂದಿಗೆ ಸಾಂಸ್ಕೃತಿಕ ಆಚರಣೆಗಳು/ಸಂಪ್ರದಾಯಗಳನ್ನು ಪರಸ್ಪರ ಸಂಬಂಧಿಸುತ್ತಾನೆ. | 44,45,51<br>46,48<br>46,47,49<br>46,49,50,51 |
| | | C-4.2<br>ಸುತ್ತಮುತ್ತಲಿನ ಪರಿಸರದಲ್ಲಿಯ ಸಾಂಸ್ಕೃತಿಕ ವೈವಿಧ್ಯತೆಯನ್ನು (ಆಹಾರ, ವೇಷಭೂಷಣಗಳು, ಆಟಗಳು, ವಿವಿಧ ಋತುಗಳು, ಕೊಯ್ಲು ಮತ್ತು ಬಿತ್ತನೆಗೆ ಸಂಬಂಧಿಸಿದ ಹಬ್ಬಗಳು) ನಿರೀಕ್ಷಣೆ ಮಾಡಿ ವರ್ಣನೆ ಮಾಡುತ್ತಾನೆ.<br>C-6.2<br>ನಿರೀಕ್ಷಣೆ ಮತ್ತು ನಿಷ್ಕರ್ಷೆಗಳ ಸೃಜನಾತ್ಮಕ ವಿಧಾನಗಳ ಮೂಲಕ (ಚಿತ್ರಗಳು, ರೇಖಾಚಿತ್ರಗಳು, ಕವಿತೆಗಳು, ನಾಟಕಗಳು, ಲಿಪಿಗಳು, ಆಟಗಳು, ಮೌಖಿಕ ಅಥವಾ ಲಿಖಿತ ಅಭಿವ್ಯಕ್ತಿ) ಪ್ರಸ್ತುತಪಡಿಸುತ್ತದೆ.<br>C-8.2<br>ಭೂತಕಾಲ ಹಾಗೂ ವರ್ತಮಾನದಲ್ಲಿಯ ಪದ್ಧತಿಗಳು, ಸಂಪ್ರದಾಯಗಳು ಮತ್ತು ತಂತ್ರಗಳ ನಡುವಿನ ಬದಲಾವಣೆಗಳನ್ನು ಮಾಹಿತಿ ಪಡೆದು ಸ್ಪಷ್ಟ ಮಾಡುತ್ತಾನೆ. | • ಪರಿಸರದಲ್ಲಿಯ ಜನರ ಅನ್ನ ಹಾಗೂ ವೇಷಭೂಷಗಳಲ್ಲಿಯ ವೈವಿಧ್ಯತೆಯನ್ನು ಹೇಳುತ್ತಾನೆ.<br>• ಪರಿಸರದಲ್ಲಿ ಆಟಗಳ ಮಾಹಿತಿ ಹೇಳುತ್ತಾನೆ.<br>• ಪಾರಂಪರಿಕ ಆಟಗಳ ನಿರೀಕ್ಷಣೆ ಮತ್ತು ನಿಷ್ಕರ್ಷೆ ಇವುಗಳನ್ನು ಸಾದರಪಡಿಸುತ್ತಾನೆ.<br>• ಸಾಂಪ್ರದಾಯಿಕ ಜಾನಪದ ಕಲೆಯ ಬಗ್ಗೆ ನಿರೀಕ್ಷಣೆ ಮತ್ತು ನಿಷ್ಕರ್ಷೆಗಳನ್ನು ಸಾದರಪಡಿಸುತ್ತಾನೆ.<br>• ಹಿಂದಿನ ಮತ್ತು ಆಧುನಿಕ ಕಾಲದ ಪದ್ಧತಿಗಳು ಮತ್ತು ಸಂಪ್ರದಾಯಗಳ ಬಗ್ಗೆ ಮಾಹಿತಿ ಸ್ಪಷ್ಟಮಾಡುತ್ತಾನೆ. | 48,49,50<br>44,45,47,50<br>47,49,50,51 |
| 8 | ಸಂವಹನ / ಸಾರಿಗೆ ಸಂಪರ್ಕ | C-2.3<br>ಪರಿಸರದಲ್ಲಿಯ ಬದಲಾವಣೆ, ಕೌಟುಂಬಿಕ ಮತ್ತು ಸಾಮಾಜಿಕ ಬದಲಾವಣೆಗಳ ಪೂರ್ವಜರು ಹೇಳಿದ ಸಂಗತಿಗಳಿಂದ (ವ್ಯವಸಾಯದಲ್ಲಿಯ ಬದಲಾವಣೆ, ಆಹಾರದಲ್ಲಿಯ ರೂಪ, ಸಂಪನ್ಮೂಲಗಳು, ಸಾರಿಗೆ ಸಂಪರ್ಕ, ಸಮಾರಂಭಗಳು) ಸಂಬಂಧಗಳನ್ನು ಪ್ರಸ್ಥಾಪಿಸುತ್ತಾನೆ. | • ಸಾಂಪ್ರದಾಯಿಕ ಮತ್ತು ಆಧುನಿಕ ಸಾರಿಗೆ ಸಂಪರ್ಕದ ಸಾಧನಗಳ ಪರಿಕಲ್ಪನೆ ಸ್ಪಷ್ಟ ಮಾಡುತ್ತಾನೆ.<br>i) ಸಾರಿಗೆ ಸಂಪರ್ಕ ಸ್ವಕಲ್ಪನೆಯನ್ನು ಹೇಳಿ ಪ್ರಕಾರಗಳನ್ನು ಸ್ಪಷ್ಟ ಮಾಡುತ್ತಾನೆ.<br>ii) ಪಾರಂಪರಿಕ ಮತ್ತು ಆಧುನಿಕ ಸಾರಿಗೆ ಸಂಪರ್ಕದ ಸಾಧನಗಳನ್ನು ಹೇಳುತ್ತಾನೆ.<br>iii) ಸಾರಿಗೆ ಸಂಪರ್ಕದ ಸಾಧನಗಳಲ್ಲಿ ಕಾಲಕ್ಕೆ ತಕ್ಕಂತೆ ಆಗಿರುವ ಬದಲಾವಣೆಗಳನ್ನು ಹೇಳುತ್ತಾನೆ. | 52,53,55,57<br>53,54,55,56, 57,58<br>53,54,55,56, 57,58<br>53,54,55,56, 57, 58 |
| **ಅಭ್ಯಾಸಕ್ರಮದ ಧ್ಯೇಯ: CG-9 ಭಾರತದ ಗೌರವಶಾಲಿ ಇತಿಹಾಸದಲ್ಲಿಯ ಮಹಾನ ವ್ಯಕ್ತಿಗಳ (ವಿಶೇಷವಾಗಿ ಮಹಾರಾಷ್ಟ್ರದ ಸಂದರ್ಭದಲ್ಲಿ) ಜೀವನ ಕಾರ್ಯದ ಬಗ್ಗೆ ಆಸಕ್ತಿ ಮೂಡಿಸುವುದು. ರಾಷ್ಟ್ರನಿರ್ಮಾಣದಲ್ಲಿ ಅವರ ಕೊಡುಗೆ ಮತ್ತು ಸಾಮಾಜಿಕ ಪರಿವರ್ತನೆಯ ಪಾತ್ರವನ್ನು ಸ್ಪಷ್ಟಪಡಿಸುವುದು.** | | | | |
| 9 | ಐತಿಹಾಸಿಕ ವಾಸ್ತುಗಳು | C-9.5<br>ಸ್ಥಾನಿಕ ಪರಿಸರದಲ್ಲಿಯ ಐತಿಹಾಸಿಕ ಘಟನೆಗಳು, ಪ್ರಸಂಗಗಳು, ಸ್ಥಳಗಳು, ಸ್ಮಾರಕಗಳ ಇವುಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಾನೆ. | • ಸ್ಥಾನಿಕ ಪರಿಸರದಲ್ಲಿಯ ಐತಿಹಾಸಿಕ ಕಟ್ಟಡಗಳು, ಸ್ಥಳಗಳು, ಸ್ಮಾರಕಗಳಿಗೆ ಭೇಟಿ ಕೊಟ್ಟು ಐತಿಹಾಸಿಕ ಘಟನೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಘಟನೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ವರ್ಣನೆ ಮಾಡುತ್ತಾನೆ. | 55,59,60, 61, 62,63,64 |

| | | | | |
|---|---|---|---|---|
| **ಅಭ್ಯಾಸಪ್ರಮದ ಧ್ಯೇಯ: CG-9 ಭಾರತದಲ್ಲಿ ಗೌರವಶಾಲಿ ಇತಿಹಾಸದಲ್ಲಿಯ ಮಹಾನ ವ್ಯಕ್ತಿಗಳ (ವಿಶೇಷವಾಗಿ ಮಹಾರಾಷ್ಟ್ರದ ಸಂದರ್ಭದಲ್ಲಿ) ಜೀವನ ಕಾರ್ಯದ ಬಗ್ಗೆ ಅಸಕ್ತಿ ಮೂಡಿಸುವುದು. ರಾಷ್ಟ್ರ ನಿರ್ಮಾಣಕ್ಕೆ ಅವರ ಕೊಡುಗೆ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಅವರ ಪಾತ್ರವನ್ನು ಸ್ಪಷ್ಟಪಡಿಸುವದು.** | | | | |
| 10 | **ಶೌರ್ಯ ಮತ್ತು ಕ್ರಾಂತಿಯ ಸಾಹಸ ಕಥೆ** | C-9.4<br>ಸಾಮಾಜಿಕ ಸಮತೆ, ಬಂಧುತ್ವ ಮತ್ತು ಸಮರಸತ ಈ ಮೌಲ್ಯಗಳನ್ನು ಪ್ರಸ್ಥಾಪಿಸಲು ಸಂತರು ಹಾಗೂ ಸಮಾಜಸುಧಾರಕರು ಮಾಡಿದ ಪ್ರಯತ್ನಗಳಿಂದ ಪ್ರೇರಣೆ ಪಡೆಯುತ್ತಾನೆ ಹಾಗೂ ಈ ಮೌಲ್ಯಗಳನ್ನು ಅಂಗೀಕರಿಸಲು ಪ್ರಯತ್ನಿಸುತ್ತಾನೆ.<br>C-9.6<br>ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾಪುರುಷರು ಮತ್ತು ಕ್ರಾಂತಿಕಾರಿಗಳ ಶೌರ್ಯದ ಕಥೆಗಳನ್ನು ಹೇಳುತ್ತಾನೆ. ಹಾಗೂ ಪಾತ್ರವನ್ನು ನಿರ್ವಹಿಸುತ್ತಾನೆ.<br>C-9.2<br>ಚತುರತೆ, ಧೈರ್ಯ ಮತ್ತು ವಿವೇಕಯಿಂದ ಸಮಸ್ಯೆಗಳನ್ನು ಜಯಸುತ್ತಾನೆ ಇದನ್ನು ಮಹಾನ್ ವ್ಯಕ್ತಿಗಳ ಚರಿತ್ರೆಯಿಂದ ಅಳವಡಿಸಿ ಕೊಳ್ಳುತ್ತಾನೆ.<br>C-9.1<br>ಇತಿಹಾಸದಲ್ಲಿ ಮಹಾನ ವ್ಯಕ್ತಿಗಳು : ಛತ್ರಪತಿ ಶಿವಾಜಿ ಮಹಾರಾಜರ ವ್ಯಕ್ತಿಮತ್ವದಲ್ಲಿನ ವಿವಿಧ ಸ್ಫೂರ್ತಿದಾಯಕ ಘಟನೆಗಳನ್ನು ಹೇಳುತ್ತಾನೆ ಹಾಗೂ ವಿಶ್ಲೇಷಣೆ ಮಾಡುತ್ತಾನೆ. | • ಸಾಮಾಜಿಕ ಸಮತೆ, ಬಂಧುತ್ವ ಮತ್ತು ಸಮಾನತೆ ಈ ಮೌಲ್ಯಗಳನ್ನು ರೂಢಿಸುವಂತಹ ಪ್ರಯತ್ನ ಮಾಡುವ ಮಹಾನ ವ್ಯಕ್ತಿಗಳ ಹಾಗೂ ಸಮಾಜಸುಧಾರಕರ ಮಾಹಿತಿಯನ್ನು ಹೇಳಿ ಸ್ಫೂರ್ತಿದಾಯಕ ಪ್ರಸಂಗದಿಂದ ಪ್ರೇರಣೆ ತೆಗೆದುಕೊಂಡು ನಡೆದುಕೊಳ್ಳುತ್ತಾನೆ.<br>• ನಕಾಶೆಗಳ ಕುರಿತು ಟಿಪ್ಪಣಿ-ಈ ಪಾಠ್ಯಪುಸ್ತಕದಲ್ಲಿ ಉಪಯೋಗಿಸಲಾದ ನಕಾಶೆಗಳನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ತಯಾರಿಸಲಾಗಿದೆ. ಅವುಗಳ ರಾಜಕೀಯ ಹಾಗೂ ಭೌಗೋಲಿಕ ಪ್ರಮಾಣತೆಯ ಸಲುವಾಗಿ ಉಪಯೋಗಿಸಲು ಪರಿಗಣಿಸಬಾರದು, ಆದಾಗ್ಯೂ ಯಾವುದೇ ದೋಷ ಕಂಡುಬಂದಲ್ಲಿ ಅವು ತಾಂತ್ರಿಕ ಮರ್ಯಾದೆಯಿಂದಾಗಿ ಇರಬಹುದು.<br>• ನಮ್ಮ ಪರಿಸರದಲ್ಲಿಯ ಮಹಾಪುರುಷರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕ್ರಾಂತಿಕಾರರ ಶೌರ್ಯದ ಕಥೆಗಳನ್ನು ಹೇಳಿ ಅವರು ಮೂಲಕ ಕೊಟ್ಟ ಯೋಗದಾನದ ಮಾಹಿತಿ ಹೇಳುತ್ತಾನೆ.<br>• ಚತುರತೆ, ಧೈರ್ಯ ಮತ್ತು ಬುದ್ಧಿವಂತಿಕೆಯನ್ನು ಬಳಸಿಕೊಂಡು ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾನೆ.<br>• ಮಹಾನ ವ್ಯಕ್ತಿಗಳ ಜೀವನದಲ್ಲಿಯ ಸ್ಫೂರ್ತಿದಾಯಕ ಘಟನೆಗಳನ್ನು ವಿವರಿಸುತ್ತಾನೆ. | 65,66, 67,68<br>65,66,67,68<br>66,67,68<br>65,67,68,69 |
| 11 | **ಪರಿಸರ ಸಂರಕ್ಷಣೆ: ನನ್ನ ಜವಾಬ್ದಾರಿ** | C-10.5<br>ಸ್ವಚ್ಛತಾ ಅಭಿಯಾನ, ವೃಕ್ಷಾರೋಪಣ ಹಾಗೂ ಇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾನೆ. ತನ್ನದೇ ಆದ ಜವಾಬ್ದಾರಿಯನ್ನು ಗುರುತಿಸುತ್ತಾನೆ. | • ಪರಿಸರ ಸ್ವಚ್ಛತೆಯ ಅಭಿಯಾನದಲ್ಲಿ ಸಹಭಾಗಿಯಾಗಿ ಅವರ ಮಹತ್ವವನ್ನು ಹೇಳುತ್ತಾನೆ.<br>• ವೃಕ್ಷಾರೋಪಣೆಯ ಉಪಕ್ರಮದಲ್ಲಿ ಸಹಭಾಗಿಯಾಗಿ ವೃಕ್ಷಸಂವರ್ಧನೆ ಉಪಕ್ರಮಗಳ ವರ್ಣನೆ ಮಾಡುತ್ತಾನೆ. | 70,71,72<br>70,71,72,73, 74,75 |
| **ಅಭ್ಯಾಸಪ್ರಮದ ಧ್ಯೇಯ: CG-9 ಭಾರತದ ಗೌರವಶಾಲಿ ಇತಿಹಾಸದಲ್ಲಿನ ಮಹಾನ ವ್ಯಕ್ತಿಗಳ (ವಿಶೇಷವಾಗಿ ಮಹಾರಾಷ್ಟ್ರದ ಸಂದರ್ಭದಲ್ಲಿ) ಜೀವನ ಕಾರ್ಯ ವಿಷಯದ ಬಗ್ಗೆ ಆಸಕ್ತಿ ಮೂಡಿಸುವುದು. ರಾಷ್ಟ್ರ ನಿರ್ಮಾಣದಲ್ಲಿ ಅವರ ಕೊಡುಗೆ ಮತ್ತು ಸಾಮಾಜಿಕ ಪರಿವರ್ತನೆಯ ಪಾತ್ರವನ್ನು ಸ್ಪಷ್ಟಪಡಿಸುವದು.<br>CG-10 ಸಂವಿಧಾನಾತ್ಮಕ ಜವಾಬ್ದಾರಿಗಳ ಅರಿವು ಮೂಡಿಸಲು ಮತ್ತು ಪ್ರಜಾಪ್ರಭುತ್ವದ ಸಂಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು.** | | | | |
| 12 | **ರಾಷ್ಟ್ರೀಯ ಏಕಾತ್ಮತೆ** | C-10.3<br>ಭಾರತದ ರಾಷ್ಟ್ರೀಯ ಏಕತೆಯನ್ನು ಬೆಳೆಸುವ ದೃಷ್ಟಿಕೋನದಿಂದ ಮೂಲ ಅಂಶಗಳ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಮೂಲ ಅಂಶಗಳನ್ನು ಅರ್ಥೈಸುತ್ತಾನೆ ಹಾಗೂ ವಿಶ್ಲೇಷಣೆ ಮಾಡುತ್ತಾನೆ. | • ರಾಷ್ಟ್ರೀಯತೆಯ ಮೂಲ ಅಂಶದ ಮಹತ್ವವನ್ನು ಗುರುತಿಸುತ್ತಾನೆ. | 76,77,78, 79 |
| 13 | **ಕೇಳೋಣ, ಮಾತನಾಡೋಣ ಮತ್ತು ಅರ್ಥ ಮಾಡಿ ಕೊಳ್ಳೋಣ.** | C-9.2<br>ಚಾತುರ್ಯ ಧೈರ್ಯ ಮತ್ತು ವಿವೇಕ ಇವುಗಳಿಂದ ಸಮಸ್ಯೆಗಳನ್ನು ಜಯಿಸಬಹುದು ಎಂಬುದನ್ನು ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳಿಂದ ಅಳವಡಿಸಿಕೊಳ್ಳುತ್ತಾನೆ.<br>C-10.6 ತನ್ನ ಆಲೋಚನೆಗಳು ಮತ್ತು ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುತ್ತಾನೆ, ಇತರರ ಅಭಿಪ್ರಾಯಗಳನ್ನು ಗೌರವಿಸುತ್ತಾನೆ ಮತ್ತು ಎಲ್ಲರೊಂದಿಗೆ ಸಮಾನವಾಗಿ ನಡೆದುಕೊಳ್ಳುತ್ತಾನೆ. | • ಚಾತುರ್ಯ ಧೈರ್ಯ ಮತ್ತು ವಿವೇಕ ಇವುಗಳಿಂದ ಸಮಸ್ಯೆಗಳನ್ನು ಜಯಿಸಬಹುದು ಇವರ ಉದಾಹರಣೆಗಳನ್ನು ಹೇಳುತ್ತಾನೆ.<br>• ವಿವಿಧ ವಿಷಯಗಳ ಕುರಿತು ತನ್ನ ಆಲೋಚನೆಗಳನ್ನು ವ್ಯಕ್ತಪಡಿಸುತ್ತಾನೆ ಮತ್ತು ಇತರರ ಅಭಿಪ್ರಾಯಗಳನ್ನು ಗೌರವಿಸುತ್ತಾನೆ. | 80,81,82,83, 84<br>80,81,82,83, 84 |

**ಟಿಪ್ಪಣಿ: ಪಠ್ಯಪುಸ್ತಕದಲ್ಲಿ ಉಪಯೋಗಿಸಿದ ನಕಾಶೆಗಳನ್ನು ಶೈಕ್ಷಣಿಕ ಉದ್ದೇಶದಿಂದ ತಯಾರಿಸಲ್ಪಟ್ಟಿದೆ. ಇದರ ರಾಜಕೀಯ ಮತ್ತು ಭೌಗೋಲಿಕ ಉಪಯೋಗಕ್ಕಾಗಿ ಬಳಸಬಾರದು. ನಕಾಶೆ ತಯಾರಿಸುವಾಗ ಅದಷ್ಟು ಚೊಕ್ಕವಾಗಿ ಸ್ಪಷ್ಟವಾಗಿ ಮಾಡಲು ಪ್ರಯತ್ನಿಸಲಾಗಿದೆ. ಏನಾದರು ತಪ್ಪಾಗಿದ್ದರೆ ಅದು ತಾಂತ್ರಿಕ ದೋಷದಿಂದ ಆಗಿರಬಹುದು.**

## ಶಿಕ್ಷಕರು ಪಠ್ಯಪುಸ್ತಕವನ್ನು ಬಳಸುವಾಗ

- ರಾಷ್ಟ್ರೀಯ ಶಿಕ್ಷಣ ನೀತಿಯ ಮುಖ್ಯ ಉದ್ದೇಶ ರಾಜ್ಯದ ಎಲ್ಲಾ ವಿದ್ಯಾರ್ಥಿಗಳ ಅಧ್ಯಯನ ನಿಷ್ಪತ್ತಿಗಳನ್ನು ಸುಧಾರಿಸುವುದು. ಆಗಿರುವುದರಿಂದ ಪಠ್ಯಪುಸ್ತಕದ ಆರಂಭಿಕ ಪ್ರಾಥಮಿಕ ಪುಟಗಳಲ್ಲಿ ಸಮಾವಿಷ್ಟವಿರುವ ಅಧ್ಯಯನ ನಿಷ್ಪತ್ತಿಗಳನ್ನು ಅಧ್ಯಾಪನದ ಸಮಯದಲ್ಲಿ ಎಲ್ಲರ ಮುಂದೆ ಇಡುವುದು ಅವಶ್ಯಕವಾಗಿದೆ.
- ಪ್ರತಿಯೊಂದು ಪಾಠದ ಅಧ್ಯಾಪನದ ನಿಯೋಜನೆಯನ್ನು ಮಾಡುವಾಗ ಅಧ್ಯಯನ ಫಲಿತಾಂಶಗಳಿಗನುಸಾರವಾಗಿ ಪಾಠದಲ್ಲಿನ ಅಧ್ಯಯನ ಅನುಭವಗಳು ಮತ್ತು ವಿವಿಧ ಕೃತಿ ಇವುಗಳ ಬಗ್ಗೆ ನಿಯೋಜನೆ ಮಾಡಬೇಕು.
- ಪಾಠಗಳಲ್ಲಿ ವಿವಿಧ ಅಧ್ಯಯನ ಅನುಭವಗಳನ್ನು ಬಹುಶಿಸ್ತೀಯ ದೃಷ್ಟಿಕೋನದಿಂದ ನಿಯೋಜಿಸಲಾಗಿದೆ ಎಂಬುದನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು. ವಿದ್ಯಾರ್ಥಿಗಳು ವಿವಿಧ ವಿಷಯಗಳ ಸಹಾಯದಿಂದ ಏಕಾತ್ಮಿಕ ಪದ್ಧತಿಯಿಂದ ಸುಲಭವಾಗಿ ಅಧ್ಯಯನ ಮಾಡಬಹುದು ಎಂದು ಅವರಿಗೆ ಅರಿವು ಮೂಡಿಸಬೇಕು.
- ವಿವಿಧ ಕೃತಿಗಳ ಆಧಾರದಿಂದ ವಿಷಯದ ತಿಳುವಳಿಕೆಯನ್ನು ಹೆಚ್ಚಿಸಲು ಬರುತ್ತದೆ.
- ವಿದ್ಯಾರ್ಥಿಗಳಿಗೆ ವಿವಿಧ ಅನುಭವಗಳನ್ನು ಒದಗಿಸುವುದರ ಜೊತೆಗೆ, ಭಾರತೀಯ ಜ್ಞಾನದ ವ್ಯವಸ್ಥೆ, ಪಂಚಕೋಶಗಳ ಬಗ್ಗೆಯೂ ಮಾಹಿತಿ ದೊರೆಯುವಂತೆ ಎಚ್ಚರ ವಹಿಸುವುದು ಅವಶ್ಯಕವಾಗಿದೆ.
- ಪರಿಸರದಲ್ಲಿಯ ವಿವಿಧ ಘಟಕಗಳ ಸಂರಕ್ಷಣೆ, ಸಂವರ್ಧನೆ, ಭಾರತೀಯ ಸಂಸ್ಕೃತಿ, ಸಂಪ್ರದಾಯಗಳು ಮತ್ತು ವೈವಿಧ್ಯತೆಯ ಬಗ್ಗೆ ಪರಿಚಯ ಮಾಡಿಕೊಡುವುದು ಅವಶ್ಯಕವಾಗಿದೆ. ಪಠ್ಯಪುಸ್ತಕದಲ್ಲಿಯ ಈ ಪಾತ್ರವನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸಲು ಮುಖಪುಟದ ಮೇಲಿನ ಭಾರತದಲ್ಲಿಯ ವೈವಿಧ್ಯತೆಯನ್ನು ತೋರಿಸುವ ಸಲುವಾಗಿ ಭಾರತದ ಸ್ಥೂಲ ನಕಾಶೆಯನ್ನು ಬಳಸಲಾಗಿದೆ. ದೇಶದ ಪ್ರಗತಿಗಾಗಿ ರಾಷ್ಟ್ರೀಯ ಏಕಾತ್ಮತೆಯನ್ನು ಕಾಪಾಡುವುದು ಅತ್ಯಂತ ಮಹತ್ವದ್ದಾಗಿದೆ. ಅಧ್ಯಯನ ಅನುಭವಗಳನ್ನು ರಚನೆ ಮಾಡುವಾಗ ಈ ಅರಿವನ್ನು ಇಟ್ಟುಕೊಳ್ಳುವುದು ಅವಶ್ಯಕವಾಗಿದೆ.
- ಪುಸ್ತಕದಲ್ಲಿ ಸ್ಥಳೀಯ ಪರಿಸರದಲ್ಲಿಯ ಎಲ್ಲ ಐತಿಹಾಸಿಕ ಕಟ್ಟಡಗಳು, ಮಹಾನ ವ್ಯಕ್ತಿಗಳು ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಪುಟದ ಮಿತಿಯಿಂದಾಗಿ ನೀಡುವುದು ಸಾಧ್ಯವಿಲ್ಲ, ಆದ್ದರಿಂದ, ಅಧ್ಯಯನದಲ್ಲಿ ಸ್ಥಾನಿಕ ಪರಿಸರದಲ್ಲಿಯ ವಿವಿಧ ಉದಾಹರಣೆಗಳನ್ನು ಸೇರಿಸಿಕೊಳ್ಳಬೇಕು. ಉಪಕ್ರಮ ಕೃತಿ ಇವುಗಳಲ್ಲಿ ಸ್ಥಾನಿಕ ವಿಷಯಗಳನ್ನು ಸಮಾವೇಶ ಮಾಡುವುದು ಅವಶ್ಯಕವಾಗಿದೆ.
- ನಮ್ಮ ಅವಶ್ಯತೆಗಳನ್ನು ಪೂರೈಸುವಾಗ ಬರುವ ಸಮಸ್ಯೆಗಳನ್ನು, ಹಾಗೆಯೇ ಪರಿಸರದ ಸಂರಕ್ಷಣೆ, ಜಲ ಸಾಕ್ಷರತೆಯಂತಹ ಪ್ರಮುಖ ವಿಷಯಗಳ ಬಗ್ಗೆ ಸರಳ ಭಾಷೆಯಲ್ಲಿ, ವಿವಿಧ ಅನುಭವಗಳ ಆಧಾರದ ಮೇಲೆ ಅರಿವು ಮೂಡಿಸುವುದು ಅವಶ್ಯಕವಾಗಿದೆ.
- ನಮ್ಮ ಪರಿಸರದಲ್ಲಿಯ ಐತಿಹಾಸಿಕ ವಸ್ತುಗಳನ್ನು ಗುರುತಿಸುವುದು ಮತ್ತು ಅವುಗಳ ಸಂರಕ್ಷಣೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು.
- ಆಶಯಗಳ ಹೊರೆ ಹೆಚ್ಚಾಗಬಾರದೆಂದು ಪಠ್ಯಪುಸ್ತಕದಲ್ಲಿಯ ಪ್ರತ್ಯೇಕ ಅಂಶಗಳ ವಿವರವಾದ ಮಾಹಿತಿಯನ್ನು ಉದಾಹರಣೆಳೊಂದಿಗೆ ಮತ್ತು ವಿವರಣೆಗಳೊಂದಿಗೆ ಪಾಠದಲ್ಲಿ ಕೊಡಲು ಸಾಧ್ಯವಿಲ್ಲ, ಶಿಕ್ಷಕರು ಅಧ್ಯಯನಕ್ಕೆ ಮೊದಲು ವಿವಿಧ ಉಲ್ಲೇಖಗಳ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಆಶಯವನ್ನು ಸರಳವಾಗುವ ದೃಷ್ಟಿಕೋನದಂತಹ ಅವಶ್ಯಕವಿರುವ ಮಾಹಿತಿಯನ್ನು ಆಯಾ ಸ್ಥಳದಲ್ಲಿ ಕೊಡುವುದು ಅವಶ್ಯಕವಾಗಿರುತ್ತದೆ.
- ಶಿಕ್ಷಕರು ಪ್ರವಾಸಗಳ ಮೂಲಕ ಕ್ಷೇತ್ರ ಭೇಟಿ ಮಾಡಿಸಬೇಕು. ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಅನುಭವ ಮಾಡಿಕೊಡಬೇಕು. ಉದಾಹರಣೆಗೆ, ಬಾಲಆನಂದ ಸಂಮ್ಮೇಳ, ವಾಸ್ತುಶಿಲ್ಪದ ಸ್ಮಾರಕಗಳಿಗೆ ಭೇಟಿ ನೀಡುವುದು, ವಿವಿಧ ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡುವುದು. ಪರಿಸರದ ಪ್ರವಾಸಗಳು, ಇತ್ಯಾದಿ.
- ವಿದ್ಯಾರ್ಥಿಗಳ ವ್ಯಕ್ತಿಮತ್ವದ ವಿಕಾಸದ ಸಲುವಾಗಿ ಉಪಯುಕ್ತವಾದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಬೇಕು.
- ಶಿಕ್ಷಕರಿಗೆ ವಿಶೇಷ ಅಗತ್ಯಗಳಿರುವ ವಿದ್ಯಾರ್ಥಿಗಳ ಕುರಿತು ಅಧ್ಯಯನ – ಅಧ್ಯಾಪನ ಪ್ರಕ್ರಿಯೆಯನ್ನು ಮಾಡುವಾಗ ಸಾಂಕೇತಿಕ ಭಾಷೆ (Sign Language ) ಹಾಗೂ ಇತರ ಪೂರಕ ಅಧ್ಯಾಪನ-ಶಾಸ್ತ್ರಿಯ ಪದ್ಧತಿಗಳನ್ನು (ವಿಧಾನಗಳನ್ನು) ಬಳಸಬೇಕು. ವಿಶೇಷ ಅಗತ್ಯಗಳಿರುವ ವಿದ್ಯಾರ್ಥಿಗಳಿಗೆ; ಯಾವ ಪದ್ಧತಿಯಲ್ಲಿ ಸಾಧ್ಯವೋ ಆ ಪದ್ಧತಿಯಲ್ಲಿ ವ್ಯಕ್ತಪಡಿಸಲು ಅವಕಾಶ ನೀಡಬೇಕು.

# ಅನುಕ್ರಮಣಿಕ


| ಪಾಠದ ಹೆಸರು | ಪುಟ ಸಂಖ್ಯೆ |
|---|---|
| 1. ನಮ್ಮ ಕುಟುಂಬ | 1 |
| 2. ಕುಟುಂಬ ವಂಶಾವಳಿ | 7 |
| 3. ನನ್ನ ಶಾಲೆ | 11 |
| 4. ಮಾರುಕಟ್ಟೆ | 18 |
| 5. ನಮ್ಮ ಅಗತ್ಯಗಳು ಹಾಗೂ ಸಮಸ್ಯೆಗಳು | 26 |
| 6. ಜಲ ಸಾಕ್ಷರತೆ | 37 |
| 7. ಭಾರತೀಯ ಸಂಪ್ರದಾಯ ಮತ್ತು ಸಾಂಸ್ಕೃತಿಕ ವೈವಿಧ್ಯತೆ | 44 |
| 8. ಸಾರಿಗೆ ಸಂಪರ್ಕ | 52 |
| 9. ಐತಿಹಾಸಿಕ ವಾಸ್ತುಗಳು | 59 |
| 10. ಕಥೆಗಳು: ಶೌರ್ಯ ಮತ್ತು ಕ್ರಾಂತಿ | 65 |
| 11. ಪರಿಸರ ಸಂರಕ್ಷಣೆ: ನನ್ನ ಜವಾಬ್ದಾರಿ | 70 |
| 12. ರಾಷ್ಟ್ರೀಯ ಏಕಾತ್ಮತೆ | 76 |
| 13. ಕೇಳೋಣ, ಮಾಡೋಣ ಮತ್ತು ತಿಳಿದುಕೊಳ್ಳೋಣ | 80 |



# 1. ನಮ್ಮ ಕುಟುಂಬ





ಮೀನಾಳ ಮನೆಯಲ್ಲಿ ತುಂಬಾ ಗಡಿಬಿಡಿ ನಡೆದಿತ್ತು. ಎರಡು ದಿನಗಳ ನಂತರ ಅವಳ ಅಣ್ಣನ ಮದುವೆ ಇತ್ತು. ಹಾಗಾಗಿ ಮನೆಯಲ್ಲಿ ಉತ್ಸಾಹದ ವಾತಾವರಣವಿತ್ತು. ಅತ್ತಿಗೆ ಬರುತ್ತಾಳೆ ಎಂದು ಮೀನಾ ತುಂಬಾ ಖುಷಿಯಾಗಿದ್ದಳು. ಮದುವೆಗಾಗಿ ಮೀನಾಳ ಚಿಕ್ಕಪ್ಪ, ಚಿಕ್ಕಮ್ಮ ಮತ್ತು ಅವರ ಮಕ್ಕಳು, ಮಾವ-ಅತ್ತೆ ಮತ್ತು ಅವರ ಮಕ್ಕಳು, ದೊಡ್ಡಮ್ಮ ಮತ್ತು ದೊಡ್ಡಮ್ಮನ ಮಗ, ದೊಡ್ಡಮ್ಮನ ಮಗಳು, ಅತ್ತೆ, ಅತ್ತೆಯ ಮಗಳು ಹೀಗೆ ಎಲ್ಲ ಸಂಬಂಧಿಕರು ಮದುವೆಗಾಗಿ ಒಟ್ಟಿಗೆ ಸೇರಿದ್ದರು. ಅತ್ತೆ-ಮಾವ ತಮ್ಮ ನಾಲ್ಕು ವರ್ಷದ ಮೊಮ್ಮಗನನ್ನೂ ಕೂಡ ಜೊತೆಗೆ ತಂದಿದ್ದರು ಎಲ್ಲರು ಅವನೊಂದಿಗೆ ಆಟವಾಡುದರಲ್ಲಿ ಮಗ್ನವಾಗಿದ್ದರು ಮತ್ತು ಆತನ ಕಾಳಜಿ ಕೂಡ ವಹಿಸುತ್ತಿದ್ದರು.

ಮೀನಾಳ ತಾಯಿಯ ತಂದೆ-ತಾಯಿ ಮತ್ತು ತಂದೆಯ ತಂದೆ-ತಾಯಿ ಹೀಗೆ ಇಬ್ಬರು ಅಜ್ಜಿ ಅಜ್ಜಂದಿರು ಇದ್ದುದರಿಂದ ಮೀನಾಳಿಗೆ ತುಂಬಾ ಪ್ರೀತಿ ಸಿಗುತ್ತಿತ್ತು. ಮೀನಾ ಮತ್ತು ಅವಳ ಸಹೋದರ-ಸಹೋದರಿಯರು ದೊಡ್ಡವರಿಗೆ ಸಹಾಯ ಮಾಡುತ್ತಿದ್ದರು. ಅಜ್ಜ-ಅಜ್ಜಂದಿರು ಎಲ್ಲಾ ಕೆಲಸಗಳ ಮೇಲೆ ಲಕ್ಷ್ಯ ಇಡುತ್ತಿದ್ದರು. ಬಂದ ಅತಿಥಿಗಳನ್ನು ಸ್ವಾಗತಿಸುತ್ತಿದ್ದರು. ಎಲ್ಲ ಸಂಬಂಧಿಕರು ಒಬ್ಬರನ್ನೊಬ್ಬರು ಸೇರಿಕೊಂಡು ನಗುತ್ತ-ನಲಿಯತ್ತಾ ಕೆಲಸ ಮಾಡುತ್ತಿದ್ದರು.



**ಗುರುತಿಸಿರಿ ನೋಡೋಣ!**

**ಸಂಬಂಧವನ್ನು ಗುರುತಿಸಿ -** ತಂದೆಯ ಸಹೋದರ, ತಾಯಿಯ ಸಹೋದರಿ, ಅತ್ತೆಯ ಮಗಳು, ದೊಡ್ಡಮ್ಮನ ಮಗ.



**ಹೇಳಿರಿ, ನೋಡೋಣ!**

- ನೀವು ತಂದೆ-ತಾಯಿಗೆ ಯಾವ ಕೆಲಸಗಳಲ್ಲಿ ಸಹಾಯ ಮಾಡುತ್ತೀರಿ?
- ಅವುಗಳಲ್ಲಿ ನಿಮಗೆ ಇಷ್ಟವಾದ ಕೆಲಸಗಳು ಯಾವುವು?

ಮೀನಾಳ ಕುಟುಂಬದಲ್ಲಿ ಅವಳ ತಾಯಿ-ತಂದೆ, ಚಿಕ್ಕಪ್ಪ-ಚಿಕ್ಕಮ್ಮ, ಅಜ್ಜ ಅಜ್ಜಿ ಮತ್ತು ಅಣ್ಣ-ತಂಗಿಯರೊಂದಿಗೆ ಒಟ್ಟಿಗೆ ವಾಸಿಸುತ್ತಾರೆ. ಸೀಮಾ ಇವಳು ಮೀನಾಳ ಅಕ್ಕ ಅಭಿ ಅಣ್ಣ ಇವನು ಮೀನಾ ಮತ್ತು ಸೀಮಾಳ ಸೋದರ ಸಂಬಂಧಿಯಾಗಿದ್ದಾನೆ. ಏಕೆಂದರೆ ಅವನು ಮೀನಾಳ ಚಿಕ್ಕಪ್ಪನ ಮಗನಾಗಿದ್ದಾನೆ. ಅಂದರೆ ಮೀನಾ ಮತ್ತು ಸೀಮಾ ಇಬ್ಬರೂ ಅಭಿಯ ದೊಡ್ಡಪ್ಪನ ಮಕ್ಕಳು ಅಂದರೆ ಅವನ ಸಹೋದರಿಯಾಗಿದ್ದಾರೆ.

**ನಮ್ಮ ಕುಟುಂಬ ಪಟ್ಟಿಯನ್ನು ಈ ರೀತಿ ತಯಾರಿಸೋಣ!**




**ಕುಟುಂಬ ಎಂದರೆ ಪರಸ್ಪರ ಸಂಬಂಧ ಹೊಂದಿರುವ ಜನರ ಗುಂಪು. ಅದರ ಪ್ರಕಾರಗಳು ಈ ಕೆಳಗಿನಂತಿವೆ:**


ದೊಡ್ಡ ಕುಟುಂಬ

**ದೊಡ್ಡ ಕುಟುಂಬ :** ಯಾವ ಕುಟುಂಬದಲ್ಲಿ ತಂದೆ-ತಾಯಿ, ಅಜ್ಜಿ-ಅಜ್ಜ (ತಾತ), ಚಿಕ್ಕಪ್ಪ-ಚಿಕ್ಕಮ್ಮ, ಅವರ ಮಕ್ಕಳು ಒಟ್ಟಿಗೆ ವಾಸಿಸುತ್ತಾರೆಯೋ ಅದು ಒಂದು 'ದೊಡ್ಡ ಕುಟುಂಬ', ಅದನ್ನು 'ಅವಿಭಕ್ತ ಕುಟುಂಬ' ಎಂದು ಕರೆಯುತ್ತಾರೆ.

**ಚಿಕ್ಕ ಕುಟುಂಬ :** ಯಾವ ಕುಟುಂಬದಲ್ಲಿ ತಂದೆ-ತಾಯಿ ಮತ್ತು ಅವರ ಮಕ್ಕಳು ಒಟ್ಟಿಗೆ ವಾಸಿಸುತ್ತಾರೆಯೋ ಅದಕ್ಕೆ 'ಚಿಕ್ಕ ಕುಟುಂಬ' ಎಂದು ಕರೆಯುತ್ತಾರೆ.


ಚಿಕ್ಕ ಕುಟುಂಬ



ವಿಸ್ತಾರಿತ ಕುಟುಂಬ

**ವಿಸ್ತಾರಿತ ಕುಟುಂಬ :** ನಮ್ಮ ತಾಯಿಯ ಕಡೆಯ ಮತ್ತು ತಂದೆಯ ಕಡೆಯ ಸಂಬಂಧಿಕರು ಎಂದರೆ 'ನಮ್ಮ ವಿಸ್ತಾರಿತ ಕುಟುಂಬ' ಎಂದು ಹೇಳುತ್ತಾರೆ. ವಿಸ್ತಾರಿತ ಕುಟುಂಬದ ಸದಸ್ಯರು ಒಂದೇ ಮನೆಯಲ್ಲಿ ಒಟ್ಟಿಗೆ ವಾಸಿಸುವುದಿಲ್ಲ, ಆದರೆ, ಸಮಯ ಬಂದಾಗ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಒಬ್ಬರಿಗೊಬ್ಬರು ಕಾಳಜಿ ವಹಿಸುತ್ತಾರೆ. ಒಬ್ಬರನ್ನೊಬ್ಬರ ಸುಖ-ದುಃಖದ ಕ್ಷಣದಲ್ಲಿ ಸಹಭಾಗಿಯಾಗುತ್ತಾರೆ.

**ಏಕ ಪೋಷಕತ್ವ ಹೊಂದಿರುವ ಕುಟುಂಬ:** ಕೆಲ ಕುಟುಂಬಗಳಲ್ಲಿ, ತಂದೆ-ತಾಯಿ ಇಬ್ಬರಲ್ಲಿ ಯಾರಾದರೂ ಒಬ್ಬರೇ ಪೋಷಕರು ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಅವರ ಪಾಲನೆ-ಪೋಷಣೆ ಮಾಡುತ್ತಾರೆ. ಇಂತಹ ಕುಟುಂಬವನ್ನು 'ಏಕ ಪೋಷಕತ್ವ ಹೊಂದಿರುವ ಕುಟುಂಬ' ಎಂದು ಹೇಳುತ್ತಾರೆ.



ಏಕ ಪೋಷಕತ್ವ ಹೊಂದಿರುವ ಕುಟುಂಬ

**ಚರ್ಚೆ ಮಾಡಿರಿ.**

- ಮೀನಾಳ ಕುಟುಂಬ ಯಾವ ಪ್ರಕಾರವಿದೆ?
- ನಿಮ್ಮ ಕುಟುಂಬ ಯಾವ ಪ್ರಕಾರವಿದೆ?



ಸೀಮಾ ಅಕ್ಕನ ಸ್ನೇಹಿತೆಯರಾದ ಸುಶ್ಮಿತಾ ಮತ್ತು ಯಾಸ್ಮಿನ್ ಸೇರಿ ಬಾಗಿಲ ಮುಂದೆ ಸುಂದರ ರಂಗೋಲಿ ಹಾಕಿದರು. ಅಣ್ಣನ ಸ್ನೇಹಿತರಾದ ಡೇವಿಡ್ ಮತ್ತು ಗುರುದೀಪ ಹೂವಿನ ತೋರಣಗಳಿಂದ ಮನೆಯನ್ನು ಅಲಂಕರಿಸಿದರು.

ಮೀನಾಳ ನೆರೆಹೊರೆಯವರು ಸಹಾಯಕ್ಕೆ ಬಂದಿದ್ದರು. ಯಾರೊಬ್ಬರ ಮನೆಯಲ್ಲಿ ಸಮಾರಂಭವಿದ್ದರೆ ಎಲ್ಲರೂ ಸೇರಿ ಅದನ್ನು ಆಚರಿಸುತ್ತಾರೆ. ಅಗತ್ಯವಿದ್ದಾಗ ಒಬ್ಬರಿಗೊಬ್ಬರು ಸಹಾಯವನ್ನು ಮಾಡುತ್ತಾರೆ. ಕಳೆದ ವರ್ಷ ಮೀನಾಳ ಅಜ್ಜನಿಗೆ ಹುಷಾರಿರಲಿಲ್ಲ, ಆಗ ಅವಳ ನೆರೆಹೊರೆಯವರು ತುಂಬಾ ಸಹಾಯ ಮಾಡಿದ್ದರು. ರಜೆಯ ದಿನಗಳಲ್ಲಿ ಸಂಜೆಯ ಹೊತ್ತು ನೆರೆಹೊರೆಯ ಚಿಕ್ಕ ಮಕ್ಕಳು ಮೀನಾಳ ಅಂಗಳದಲ್ಲಿ ಸೇರುತ್ತಾರೆ. ಮೀನಾಳ ಅಜ್ಜಿ ಅವರಿಗೆ ಒಳ್ಳೆಯ ಕಥೆಗಳನ್ನು ಹೇಳುತ್ತಾಳೆ.

**ಹೇಳಿರಿ, ನೋಡೋಣ!**

ನೆರೆಹೊರೆಯವರೊಂದಿಗೆ ನೀವು ಯಾವ ಹಬ್ಬ-ಸಮಾರಂಭಗಳನ್ನು ಆಚರಿಸುತ್ತೀರಿ?

**ಇದು ನಿಮಗೆ ಗೊತ್ತಿದೆಯೇ?**

ನಾವು, ನಮ್ಮ ಕುಟುಂಬ, ಸ್ನೇಹಿತರು, ಸಹೋದ್ಯೋಗಿಗಳು, ನೆರೆಹೊರೆಯವರು ಇತ್ಯಾದಿ ನಮ್ಮ ಸಮಾಜದಲ್ಲಿಯ ಘಟಕಗಳಾಗಿರುತ್ತಾರೆ. ವಿವಿಧ ಕುಟುಂಬಗಳು ಸೇರಿಕೊಂಡು ಸಮಾಜ ರೂಪಗೊಳ್ಳುತ್ತದೆ.

ಮೀನಾಳ ಮನೆಯಲ್ಲಿ ಒಂದು ನಾಯಿ ಮತ್ತು ಬೆಕ್ಕು ಇದ್ದವು. ಮೋತಿ ನಾಯಿಗೆ ಮನೆಯಲ್ಲಿ ಇಷ್ಟೊಂದು ಜನರನ್ನು ಕಂಡು ಸಂತೋಷವಾಗಿತ್ತು. ಅದು ಬಾಲ ಅಲ್ಲಾಡಿಸುತ್ತಾ ಮನೆಯ ಸುತ್ತಲೂ ಅಲೆದಾಡುತ್ತಿತ್ತು. ಊಟದ ನಂತರ ಎಲ್ಲಾ ಒಡಹುಟ್ಟಿದವರು ಹಾವಏಣಿ ಆಟವಾಡಲು ಕುಳಿತರು. ಆಗ ಮೋತಿ ಕೂಡಾ ಅಲ್ಲಿಗೆ ಬಂದು ಕುಳಿತಿತ್ತು. ಆದಾಗ್ಯೂ, ಮಣಿಬೆಕ್ಕು ಮಾತ್ರ ಎಂದಿನಂತೆ ಹಾಲು ಕುಡಿದು ಮೂಲೆಯಲ್ಲಿ ನಿದ್ರೆಗೆ ಹೋಯಿತು.



ಹಾವುಏಣಿಯ ಆಟವನ್ನು ಆಡುವಾಗ

ಮೀನಾಳ ಅಂಗಳದಲ್ಲಿಯ ಒಂದು ಮೂಲೆಯಲ್ಲಿ ಎರಡು ಮಣ್ಣಿನ ಪಾತ್ರೆಗಳನ್ನು ಇಡಲಾಗಿದೆ. ಪ್ರತಿದಿನ ಅದರಲ್ಲಿ ಮೀನಾ ಪಕ್ಷಿಗಳಿಗೆ ನೀರು ಮತ್ತು ಆಹಾರ ಬೀಜ (ಕಾಳುಗಳನ್ನು) ಇಡುತ್ತಿದ್ದಳು.

- ನಮ್ಮ ಪರಿಸರದಲ್ಲಿಯ ವೃಕ್ಷಗಳು, ಪ್ರಾಣಿ-ಪಕ್ಷಿಗಳು ಇವು ನಮ್ಮ ಜೀವನದಲ್ಲಿಯ ಪ್ರಮುಖ ಅಂಶಗಳಾಗಿವೆ.
- ನಾವು ಮರಗಳನ್ನು ನೆಡುತ್ತೇವೆ, ವಿವಿಧ ಪ್ರಾಣಿಗಳ ಮತ್ತು ಪಕ್ಷಿಗಳ ಕಾಳಜಿ ವಹಿಸುತ್ತೇವೆ.
- ನಾವು ವಿವಿಧ ಹಬ್ಬ-ಹರಿದಿನಗಳ ಮಾಧ್ಯಮದಿಂದ ಒಟ್ಟಿಗೆ ಸೇರುತ್ತೇವೆ ಮತ್ತು ಆನಂದದಿಂದ ಆಚರಿಸುತ್ತೇವೆ.

**ಬರೆಯೋಣ ಬನ್ನಿ:**

| ಕೆಲಸಗಳು | ಮನೆಯಲ್ಲಿ ಈ ಕೆಲಸವನ್ನು ಯಾರು ಮಾಡುತ್ತಾರೆ? |
|---|---|
| ಅಡುಗೆ ಮಾಡುವುದು | |
| ಮನೆಯನ್ನು ಸ್ವಚ್ಛಗೊಳಿಸುವುದು. | |
| ಬಟ್ಟೆ ತೊಳೆಯುವುದು. | |
| ಮಾರುಕಟ್ಟೆಯಲ್ಲಿಯ ಖರೀದಿಸುವುದು. | |
| ವೃದ್ಧರು/ಅನಾರೋಗ್ಯದಿಂದ ಬಳಲುತ್ತಿರುವವರ ಕಾಳಜಿ ತೆಗೆದುಕೊಳ್ಳುವುದು. | |

**ಚಿತ್ರದಲ್ಲಿರುವ ವ್ಯಕ್ತಿಗಳು ಏನು ಮಾಡುತ್ತಿದ್ದಾರೆಂದು, ಕೋಷ್ಟಕದಲ್ಲಿ ಬರೆಯಿರಿ.**









ಕುಟುಂಬ ಚಿಕ್ಕದಿರಲಿ ಅಥವಾ ದೊಡ್ಡದಿರಲಿ ಕುಟುಂಬದಲ್ಲಿಯ ಸದಸ್ಯರು ಒಟ್ಟಿಗೆ ಬೆರೆತುಬಾಳುತ್ತಾರೆ. ಒಬ್ಬರು ಇನ್ನೊಬ್ಬರ ಕಾಳಜಿ ವಹಿಸುತ್ತಾರೆ. ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಕೆಲಸಗಳನ್ನು ಹಂಚಿಕೊಳ್ಳುತ್ತಾರೆ. ಅವರಲ್ಲಿ ಪರಸ್ಪರರ ಬಗ್ಗೆ ಪ್ರೀತಿ ಮತ್ತು ಗೌರವಾದ ಭಾವನೆ ಇರುತ್ತದೆ. ಕುಟುಂಬದಲ್ಲಿಯ ವಾತಾವರಣ ಸುರಕ್ಷಿತವಾಗಿರುತ್ತದೆ. ವಿವಿಧ ಸಂಸ್ಕೃತಿಗಳ ಅನೇಕ ಕುಟುಂಬಗಳು ಸೇರಿ ಸಮಾಜ ರೂಪಗೊಳ್ಳುತ್ತದೆ ಇಂತಹ ಸಂತೋಷದ ಕುಟುಂಬಗಳು ಸೇರಿ ಸಂತೋಷದ ಸಮಾಜ ನಿರ್ಮಾಣವಾಗುತ್ತದೆ.

### ಮಾಡಿ ನೋಡಿರಿ.

- ನಿಮ್ಮ ವಿಸ್ತಾರಿತ ಕುಟುಂಬದ ಸದಸ್ಯರ ಪಟ್ಟಿ ಮಾಡಿರಿ.
- ನೆರೆಯ ಕುಟುಂಬದ ಜನರ ಬಗ್ಗೆ ಮಾಹಿತಿ ಪಡೆಯಿರಿ.

## ಸ್ವಾಧ್ಯಾಯ

**ಪ್ರ.1 ಯಾರು ಎಂಬುದನ್ನು ಬರೆಯಿರಿ.**

(ಅ) ಮಾವ ಅತ್ತೆಯೊಂದಿಗೆ ಬಂದವನು ____________

(ಆ) ಎಲ್ಲಾ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವವರು ____________

(ಇ) ದೊಡ್ಡವರಿಗೆ ಸಹಾಯ ಮಾಡುವವರು ____________

(ಈ) ಮೀನಾಳ ಸೋದರ ಸಂಬಂಧಿ ____________

**ಪ್ರ.2 ಯಾರು ಯಾರು ವಾಸಿಸುತ್ತಾರೆ ಎಂದು ಬರೆಯಿರಿ.**



**ಚಿಕ್ಕ ಕುಟುಂಬ**

____________

____________

____________

____________



**ಏಕ ಪೋಷಕತ್ವ ಹೊಂದಿರುವ ಕುಟುಂಬ**

____________

____________

____________

____________



**ದೊಡ್ಡ ಕುಟುಂಬ**

____________

____________

____________

____________

**ಪ್ರ.3 ನಿಮ್ಮ ಕುಟುಂಬದಲ್ಲಿಯ ಕೆಳಗಿನ ಸದಸ್ಯರು ಏನು ಮಾಡುತ್ತಾರೆ ಎಂಬುದನ್ನು ಬರೆಯಿರಿ.**

(ಅ) ತಾಯಿ ..............................

(ಆ) ತಂದೆ ..............................

(ಇ) ಅಜ್ಜಿ ..............................

(ಈ) ಅಜ್ಜ ..............................

(ಉ) ನಾನು ..............................

(ಊ) ನನ್ನ ಸಹೋದರರು ..............................

**ಪ್ರ.4 ಕೆಳಗಿನ ತಪ್ಪು ವಿಧಾನಗಳನ್ನು ಸರಿಪಡಿಸಿ ಬರೆಯಿರಿ.**

(ಅ) ಸೀಮಾಳು ಮೀನಾಳ ಸಹೋದರಿಯಾಗಿದ್ದಾಳೆ.

..............................

(ಆ) ವಿಸ್ತಾರಿತ ಕುಟುಂಬದಲ್ಲಿ ಕೇವಲ ತಂದೆಯ ಕಡೆಯ ಸಂಬಂಧಿಕರು ಮಾತ್ರ ಇರುತ್ತಾರೆ.

..............................

(ಇ) ಸಾಕುಪ್ರಾಣಿಗಳು ಇವು ಕುಟುಂಬದ ಸದಸ್ಯರಲ್ಲ.

..............................

**ಪ್ರ.5. ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

(ಅ) ಅಭಿ ಅಣ್ಣನ ಮದುವೆಗೆ ಯಾರು ಏನು ತಯಾರಿ ಮಾಡಿದರು?

(ಆ) ಕುಟುಂಬದಲ್ಲಿ ನಮ್ಮ ಯಾವ ಯಾವ ಅಗತ್ಯಗಳು ಪೂರೈಸಲ್ಪಡುತ್ತವೆ?

(ಇ) ನಿಮ್ಮ ನೆಚ್ಚಿನ ಸಾಕು ಪ್ರಾಣಿ ಯಾವುದು? ನೀವು ಅದರ ಕಾಳಜಿಯನ್ನು ಹೇಗೆ ಮಾಡುತ್ತೀರಿ?

**ಉಪಕ್ರಮ / ಚಟುವಟಿಕೆ**

- ನಿಮ್ಮ ಕುಟುಂಬದಲ್ಲಿಯ ಸಂಬಂಧಿಕರ ಫೋಟೋಗಳನ್ನು ಸಂಗ್ರಹಿಸಿ ಅವುಗಳನ್ನು ವಹಿಯಲ್ಲಿ ಅಂಟಿಸಿರಿ. ಅದರ ಕೆಳಗೆ ಫೋಟೋದಲ್ಲಿರುವ ವ್ಯಕ್ತಿಯೊಂದಿಗೆ ನಿಮ್ಮ ಸಂಬಂಧವನ್ನು ಬರೆಯಿರಿ.
- ನಿಮ್ಮ ಪರಿಸರದಲ್ಲಿಯ ಸಾಕು ಪ್ರಾಣಿಗಳ ಮತ್ತು ಪಕ್ಷಿಗಳ ಪಟ್ಟಿಯನ್ನು ಮಾಡಿರಿ.

***



# 2. ಕುಟುಂಬದ ವಂಶಾವಳಿ

ಕಪಾಟು ಸ್ವಚ್ಛಗೊಳಿಸುತ್ತಿದ್ದಾಗ ವರ್ಷಾಳಿಗೆ ತನ್ನ ತಾಯಿ-ತಂದೆಯರ ಮದುವೆಯ ಅಲ್ಬಮ್ ದೊರಕಿತು. ಅಲ್ಬಮ್ ತಿರುವಿ ನೋಡಿದಾಗ ಇಂದು ಕಾಣುವ ವ್ಯಕ್ತಿಗಳು ಆ ಕಾಲದಲ್ಲಿ ಸ್ವಲ್ಪ ವಿಭಿನ್ನವಾಗಿ ಕಾಣುತ್ತಿದ್ದರು. ಅದರಲ್ಲಿ ತಾಯಿ-ತಂದೆಯರ ಜೊತೆಗೆ ಸಂಪೂರ್ಣ ಕುಟುಂಬದ ಒಂದು ಫೋಟೋ ಇತ್ತು. ವರ್ಷಾ ತನ್ನ ತಾಯಿಯನ್ನು ಅದರ ಬಗ್ಗೆ ಕೇಳಿದಳು. ತಾಯಿ ಹೇಳಲು ಆರಂಭಿಸಿದಳು. ಅವಳು ಹೇಳಿದಳು, ''ವರ್ಷಾ, ಇದು ನಮ್ಮ ಸಂಪೂರ್ಣ ಕುಟುಂಬದ ಒಟ್ಟಿಗೆ ಇರುವ ಫೋಟೋ. ಇದರಲ್ಲಿ ನಿನಗೆ ಯಾರು ಗುರುತು ಇದ್ದಾರೆ ನೋಡು''. ವರ್ಷಾ ಫೋಟೋವನ್ನು ಚೆನ್ನಾಗಿ ನೋಡಿ ಪರಿಚಿತ ವ್ಯಕ್ತಿಗಳು, ಸಂಬಂಧಿಕರ ಹೆಸರುಗಳನ್ನು ಹೇಳಿದಳು. ಆದರೆ ಕೆಲವು ವ್ಯಕ್ತಿಗಳನ್ನುಅವಳಿಗೆ ಗುರುತಿಸಲು ಸಾಧ್ಯವಾಗಲಿಲ್ಲ.

''ಅಮ್ಮಾ, ಈ ಫೋಟೋದಲ್ಲಿ ಯಾರು ಇದ್ದಾರೆ?'' ವರ್ಷಾ ಕೇಳಿದಳು. ತಾಯಿ ಹೇಳಿದಳು, ''ವರ್ಷಾ ಇವರು ನಿನ್ನ ತಂದೆಯ ಅಜ್ಜ'', ವರ್ಷಾಳಿಗೆ ತಂದೆಯ ಅಜ್ಜಿ ಎಂದರೆ ತನ್ನ ಮುತ್ತಜ್ಜ (ಅಜ್ಜನ ತಾಯಿ)ಯನ್ನು ನೋಡಿ ಖುಷಿಯಾಯಿತು. ಇವರಿಂದ ಅವಳಿಗೆ ತನ್ನ ಹೆತ್ತವರು, ಹೆತ್ತವರ ತಾಯಿ-ತಂದೆ ಎಂದರೆ ತನ್ನ ಅಜ್ಜಿ-ತಾತ ಮತ್ತು ತಾತನ ತಾಯಿ ಹೀಗೆ ಸಂಬಂಧಿಕರ ಫೋಟೋಗಳನ್ನು ನೋಡಲು ದೊರಕಿತು. ಇದರಲ್ಲಿ ಅವಳಿಗೆ ತನ್ನ ತಂದೆ-ತಾತ-ಮುತ್ತಾತ ಹೀಗೆ ಮೂರು ತಲೆಮಾರುಗಳ ಪರಿಚಯವಾಯಿತು.

ತಲೆಮಾರು ಅಂದರೆ ಪ್ರತಿ ಕುಟುಂಬದಲ್ಲಿಯ ಮೊದಲು ಇದ್ದ ವ್ಯಕ್ತಿ. ಈಗ ಇದನ್ನೇ ನೋಡು, ವರ್ಷಾ, ಅವಳ ತಾಯಿ-ತಂದೆ, ಅಜ್ಜಿ-ತಾತ ಮತ್ತು ಅವರ ತಾಯಿ-ತಂದೆ ಇವರ ಮೂಲಕವೇ ವರ್ಷಾಳಿಗೆ ತನ್ನ ಕುಟುಂಬದ 'ವಂಶಾವಳಿ' ಮಾಡಲು ಸಾಧ್ಯವಾಯಿತು.



ನಾನು ನಿನ್ನ ತಂದೆಯ ತಾಯಿ,
ನಾನು ನಿನಗೆ ಯಾರು?

----------------------------

ನಾನು ನಿನ್ನ ತಂದೆಯ ಮಗ,
ನಾನು ನಿನಗೆ ಯಾರು?

----------------------------

ನಾನು ನಿನ್ನ ತಾಯಿಯ ತಾಯಿ,
ನಾನು ನಿನಗೆ ಯಾರು?

----------------------------

ನಾನು ನಿನ್ನ ತಾಯಿಯ ತಂದೆ
ನಿನಗೆ ನಾನು ಯಾರು?

----------------------------

**ಹೇಳಿರಿ ನೋಡೋಣ ನಾನು ಯಾರು?**



ನಾನು ನಿನ್ನ ತಂದೆಯ ತಂದೆ,
ನಾನು ನಿನಗೆ ಯಾರು?

----------------------------

ನಾನು ನಿನ್ನ ತಂದೆಯ ಸಹೋದರ,
ನಾನು ನಿನಗೆ ಯಾರು?

----------------------------

ನಾನು ನಿನ್ನ ತಂದೆಯ ಮಗಳು,
ನಾನು ನಿನಗೆ ಯಾರು?

----------------------------

ನಾನು ನಿನ್ನ ತಂದೆಯ ಸಹೋದರಿ,
ನಾನು ನಿನಗೆ ಯಾರು?

----------------------------

**ವಂಶಾವಳಿ**

ವಂಶಾವಳಿ ಎಂದರೆ ಕುಟುಂಬದ ಸದಸ್ಯರನ್ನು ತಲೆಮಾರುಗಳ ಪ್ರಕಾರ ಜೋಡಿಸುವುದು. ಇದರಲ್ಲಿ ಹೆತ್ತವರು, ಅಜ್ಜ-ಅಜ್ಜಿ, ಮುತ್ತಜ್ಜ - ಮುತ್ತಜ್ಜಿ ಹೀಗೆ ತಲೆಮಾರುಗಳ ಹೆಸರುಗಳಿರುತ್ತವೆ.

ವಂಶಾವಳಿಯು ನಮ್ಮ ಕುಟುಂಬದ ಚಿಕ್ಕ ಇತಿಹಾಸವಾಗಿರುತ್ತವೆ. ನಮ್ಮ ಕುಟುಂಬದ ಇತಿಹಾಸವು ವಂಶಾವಳಿಯಿಂದ ತಿಳಿಯುತ್ತದೆ. ನಮ್ಮ ಕುಟುಂಬದಲ್ಲಿಯ ಪೂರ್ವಜರು ಯಾರು ಎಂಬುದನ್ನು ತಿಳಿದುಕೊಳ್ಳಬಹುದು. ನಮ್ಮ ವಂಶಾವಳಿಯಲ್ಲಿಯ ಕುಟುಂಬದ ವ್ಯಕ್ತಿಗಳ ಹೆಸರು ಮತ್ತು ಅಡ್ಡ ಹೆಸರು ತಿಳಿದುಬರುತ್ತವೆ.

**ಕೆಳಗಿನ ರೇಖಾಚಿತ್ರದಿಂದ ವಂಶಾವಳಿ ಏನೆಂದು ಅರ್ಥಮಾಡಿಕೊಳ್ಳೋಣ.**



**ತಿಳಿದುಕೊಳ್ಳೋಣ ಬನ್ನಿರಿ.**




ವರ್ಷಾಳ ಕುಟುಂಬದ ವೃಕ್ಷ



## ವಂಶಾವಳಿಯ ಅಧ್ಯಯನವನ್ನು ಏಕೆ ಮಾಡಲಾಗುತ್ತದೆ?

* **ಕೌಟುಂಬಿಕ ಇತಿಹಾಸ ತಿಳಿದುಕೊಳ್ಳಲು :** ಕುಟುಂಬದ ಇತಿಹಾಸ ಮತ್ತು ಪೂರ್ವಜರ ಮಾಹಿತಿಯನ್ನು ಪಡೆಯಲು ನಾವು ವಂಶಾವಳಿಯ ಅಧ್ಯಯನ ಮಾಡುತ್ತೇವೆ.
* **ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು :** ಕುಟುಂಬದ ಸದಸ್ಯರ ಸಂಬಂಧಗಳು ಮತ್ತು ಪರಸ್ಪರರ ಸಂಬಂಧಗಳು ವಂಶಾವಳಿಯಿಂದ ತಿಳಿಯುತ್ತದೆ.
* **ವಂಶದ ಮಾಹಿತಿಯನ್ನು ಪಡೆಯಲು :** ಈ ವಿಧಾನವು ಯಾವುದೇ ವ್ಯಕ್ತಿ ಅಥವಾ ಕುಟುಂಬದ ಮೂಲ ಗುರುತನ್ನು ಹುಡುಕಲು ಸಹಾಯ ಮಾಡುತ್ತದೆ.

## ವಂಶಾವಳಿಯನ್ನು ಹೇಗೆ ತಯಾರಿಸಲಾಗುತ್ತದೆ?

ಕುಟುಂಬದ ವಂಶಾವಳಿಯ ದಾಖಲೆಯನ್ನು ಒಂದು ದೊಡ್ಡ ಮರದ ಅಂದರೆ ಕುಟುಂಬ ವೃಕ್ಷದ ರೂಪದಲ್ಲಿ ಮಾಡಲಾಗುತ್ತದೆ. ಪ್ರತಿ ಹೊಸ ತಲೆಮಾರು ಹುಟ್ಟುವುದು ಎಂದರೆ ವಂಶವೃಕ್ಷದ ವಿಸ್ತಾರವಾಗುವುದು. ವಂಶವೃಕ್ಷದಿಂದ ಕುಟುಂಬದ ಎಲ್ಲ ಸದಸ್ಯರಿಗೆ ತಮ್ಮ ಪೂರ್ವಜರ ಮಾಹಿತಿ ದೊರೆಯುತ್ತದೆ. ಹೊಸ ತಲೆಮಾರಿಗೆ, ಹಳೆಯ ತಲೆಮಾರುಗಳ ಪರಿಚಯ ಇದರ ಮೂಲಕ ಆಗುತ್ತದೆ.



## ಸ್ವಾಧ್ಯಾಯ

**ಪ್ರ.1 ಸರಿಯಾದ ಜೋಡಿಗಳನ್ನು ಹೊಂದಿಸಿ ಬರೆಯಿರಿ.**

| ‘ಅ’ ಗುಂಪು | ಉತ್ತರ | ‘ಬ’ ಗುಂಪು |
|---|---|---|
| 1. ತಾಯಿಯ ಸಹೋದರ | ------------- | (ಅ) ಅತ್ತೆ |
| 2. ತಂದೆಯ ಸಹೋದರಿ | ------------- | (ಆ) ಚಿಕ್ಕಪ್ಪ / ದೊಡ್ಡಪ್ಪ |
| 3. ತಾಯಿಯ ಸಹೋದರಿ | ------------- | (ಇ) ಮಾವ |
| 4. ತಂದೆಯ ಸಹೋದರ | ------------- | (ಈ) ಚಿಕ್ಕಮ್ಮ / ದೊಡ್ಡಮ್ಮ |

**ಪ್ರ.2 ಕೆಳಗಿನ ವಿಧಾನವನ್ನು ಸರಿಯೋ ಅಥವಾ ತಪ್ಪೋ ಎಂಬುದನ್ನು ಬರೆಯಿರಿ ಮತ್ತು ತಪ್ಪಾದ ವಿಧಾನಗಳನ್ನು ಸರಿಪಡಿಸಿ ಪುನಃ ಬರೆಯಿರಿ.**

(ಅ) ಪೀಳಿಗೆ ಎಂದರೆ ಕುಟುಂಬದಲ್ಲಿ ಮೊದಲು ಬಂದ ವ್ಯಕ್ತಿ. [ ]

--------------------------------------------------------------------

(ಆ) ತಂದೆಯ ಕಡೆಯ ಎಲ್ಲಾ ಸಂಬಂಧಿಕರ ಉಪನಾಮಗಳು ಒಂದೇ (ಅಡ್ಡಹೆಸರು) ಆಗಿರುವುದಿಲ್ಲ. [ ]

--------------------------------------------------------------------

(ಇ) ವಂಶಾವಳಿಯ ಅಧ್ಯಯನದಿಂದ ಕುಟುಂಬಗಳ ಇತಿಹಾಸ ತಿಳಿಯುವುದಿಲ್ಲ. [ ]

--------------------------------------------------------------------



**ಪ್ರ.3 ಗುರುತಿಸಿ ಮತ್ತು ಬರೆಯಿರಿ.**

| | | | |
|---|---|---|---|
| ಕೆಲವೊಮ್ಮೆ ಜಗಳವಾಡುತ್ತಾನೆ, ಕೆಲವೊಮ್ಮೆ ನಗಿಸುತ್ತಾನೆ, ಆಟವಾಡುವಾಗ ನನ್ನನ್ನು ಅಳಿಸುತ್ತಾನೆ, ಅವನಿಗೆ ತಾಯಿಯ ಕೈಯಿಂದ ಒಳ್ಳೆಯ ತಿಂಡಿ ಸಿಗುತ್ತದೆ, ಅವನು ನನ್ನ ------------- | ಪ್ರೀತಿಯ ಮರ ವಾತ್ಸಲ್ಯದ ಛಾವಣಿ, ಅವಳಿಲ್ಲದೆ ನನಗೆ ಇರಲು ಸಾಧ್ಯವಿಲ್ಲ, ನನ್ನನ್ನು ಮಮತೆಯಿಂದ ಕಾಣುವಳು ಅವಳು ಎಂದರೆ ನನ್ನ ------------- | ತಂದೆಯ ಸಹೋದರಿ ನನ್ನನ್ನು ಮುದ್ದಿಸುತ್ತಾಳೆ, ನನಗಾಗಿ ಆಟಿಕೆಗಳನ್ನು, ಸಿಹಿತಿಂಡಿಗಳನ್ನು ತರುತ್ತಾಳೆ, ಅವಳು ಎಂದರೆ ನನ್ನ ------------- | ತಾಯಿಯ ಸಹೋದರ ತಿರುಗಾಡಲು ಹೋಗೋಣ ಎನ್ನುತ್ತಾನೆ, ನಗಿಸುತ್ತಾನೆ, ಆಟವಾಡಿಸುತ್ತಾನೆ, ತಿಂಡಿ ಕೊಡುತ್ತಾನೆ, ಆದ್ದರಿಂದ ನನಗೆ ಹಿಡಿಸುತ್ತಾನೆ. ಅವನು ನನ್ನ ------------- |

**ಪ್ರ.4 ನಿಮ್ಮೊಂದಿಗಿರುವ ಸಂಬಂಧಗಳನ್ನು ಬರೆಯಿರಿ.**

ತಾಯಿಯ ಕಡೆಯ ಸಂಬಂಧಿಕರು: ------------------------------------------------------------

------------------------------------------------------------------------------------------

ತಂದೆಯ ಕಡೆಯ ಸಂಬಂಧಿಕರು: ------------------------------------------------------------

------------------------------------------------------------------------------------------

**ಪ್ರ.5 ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

(ಅ) ಕುಟುಂಬ ವಂಶಾವಳಿಯಿಂದ ನಿಮಗೆ ಯಾವ ಮಾಹಿತಿ ದೊರೆಯುತ್ತವೆ?

(ಆ) ವಂಶಾವಳಿಯನ್ನು ಹೇಗೆ ತಯಾರಿಸುತ್ತಾರೆ?

**ಉಪಕ್ರಮ**

- ನಿಮ್ಮ ಪೋಷಕರೊಂದಿಗೆ ಚರ್ಚಿಸಿರಿ. ತಂದೆಯ ಕಡೆಯ ವಂಶಾವಳಿಯಲ್ಲಿರುವ ಸದಸ್ಯರ ಫೋಟೋಗಳನ್ನು ಸಂಗ್ರಹಿಸಿ ಅದರ ಆಧಾರದ ಮೇಲಿಂದ ವಂಶವೃಕ್ಷ ತಯಾರಿಸಿರಿ.
- ನಿಮ್ಮ ತಾಯಿಯ ಕಡೆಯ ಸಂಬಂಧಿಕರ ಅಡ್ಡ ಹೆಸರುಗಳ ಪಟ್ಟಿಯನ್ನು ಪೋಷಕರ ಸಹಾಯದಿಂದ ಮಾಡಿರಿ.

***



# 3. ನನ್ನ ಶಾಲೆ



**ಶಾಲೆಗೆ ನಾವು ಹೋಗುವೆವು**
ಓದು ಬರಹ ಕಲಿಯುವೆವು
ಜಾಣರು ನಾವು ಆಗುವೆವು
ಶಾಲೆಗೆ ನಾವು ಹೋಗುವೆವು ।

ಹಾಡನು ಹಾಡುತ, ನಾಟಕ ಮಾಡುತ
ನೃತ್ಯವ ಮಾಡುತ, ಚಿತ್ರವ ಬಿಡಿಸುತ
ಬುದ್ದಿವಂತರಾಗೋಣ ನಾವು,
ಶಾಲೆಗೆ ನಾವು ಹೋಗುವೆವು ।

ಗೆಳೆಯರ ಜೊತೆಗೆ ನಕ್ಕುನಲಿಯೋಣ
ದೊಡ್ಡವರಾಗೋಣ ನಾವು ಹೆಸರನುಗಳಿಸೋಣ
ದೇಶದ ಭವಿಷ್ಯ ರೂಪಿಸೋಣ
ಶಾಲೆಗೆ ನಾವು ಹೋಗೋಣ ।



**ನನ್ನ ನೆಚ್ಚಿನ ಮನ ಬೆಳಗುವ ಶಾಲೆ**
**ತಾಯಿಯ ಮಮತೆಯ ನೀಡುವ ಶಾಲೆ**

ಶಾಲೆಯ ಆಟದ ಮೈದಾನವನ್ನು ಬಣ್ಣ ಬಣ್ಣದ ಪತಾಕೆಗಳಿಂದ ಅಲಂಕರಿಸಲಾಗಿತ್ತು. ಶಾಲೆಯ ವಾರ್ಷಿಕ ಕ್ರೀಡಾ ಸ್ಪರ್ಧೆ ನಡೆಯುತ್ತಿತ್ತು. ಮಕ್ಕಳು ಚಿಲಿಪಿಲಿ ನಡೆದಿತ್ತು. ಓಟದ ಸ್ಪರ್ಧೆಯಲ್ಲಿ ರೋಹಿತ ಪ್ರಥಮ ಸ್ಥಾನ ಪಡೆದನು. ರೋಹಿತನ ಪ್ರತಿಸ್ಪರ್ಧಿ ಮಿಹಿರ್‌ನು ರೋಹಿತನನ್ನು ಅಭಿನಂದಿಸಿದನು. ನಂತರ ಕಬಡ್ಡಿ ಪಂದ್ಯಗಳು ಪ್ರಾರಂಭವಾದವು. ಅದಕ್ಕಾಗಿ ನೀತಾಳ ತಂಡ ಮೈದಾನಕ್ಕೆ ಪ್ರವೇಶಿಸಿತ್ತು. ಮಕ್ಕಳು ಕೂಗುತ್ತಾ ಅವರನ್ನು ಹುರಿದುಂಬಿಸುತ್ತಿದ್ದರು.



ಹುಡುಗಿಯರ ಕಬಡ್ಡಿ ಆಟ



### ಹೇಳಿರಿ ನೋಡೋಣ!

* ಶಾಲೆಯ ಆಟದ ಮೈದಾನದಲ್ಲಿ ನೀವು ಯಾವ ಆಟಗಳನ್ನು ಆಡುತ್ತೀರಿ?

### ಶಾಲೆ ಎಂದರೇನು?

ಶಾಲೆ ಎಂದರೆ ನಾವು ಕಲಿಯಲು ಹೋಗುವ ಸ್ಥಳ. ಅಲ್ಲಿ ನಾವು ನಿಯಮಗಳನ್ನು ಪಾಲಿಸಲು ಕಲಿಯುತ್ತೇವೆ.

ನಾವು ಶಾಲೆಗೆ ಸಮಯಕ್ಕೆ ಸರಿಯಾಗಿ ಬರುವುದು, ಶಾಲೆಯ ಸಮವಸ್ತ್ರ ಧರಿಸುವುದು, ಶಾಲೆಯ ಪರಿಪಾಠಕ್ಕಾಗಿ ಸಾಲಿನಲ್ಲಿ ನಿಲ್ಲುವ ಮೂಲಕ ಶಿಸ್ತನ್ನು ಕಲಿಯುತ್ತೇವೆ. ಶಾಲೆಗೆ ಅಧ್ಯಯನ ಮಾಡಲು ವಿವಿಧ ಕುಟುಂಬಗಳ ಹುಡುಗರು ಮತ್ತು ಹುಡುಗಿಯರು ಬರುತ್ತಾರೆ. ನಾವು ಅವರೊಂದಿಗೆ ಸ್ನೇಹಪರ ಸಂಬಂಧವನ್ನು ಹೊಂದಿದ್ದೇವೆ. ನಾವು ನಮ್ಮ ಸ್ನೇಹಿತರೊಂದಿಗೆ ಹೊಂದಿಕೊಂಡು ಇರುತ್ತೇವೆ. ನಾವು ಪರಸ್ಪರರಿಗೆ ಸಹಾಯ ಮಾಡುತ್ತೇವೆ. ನಾವು ಪರಸ್ಪರ ಕಾಳಜಿ ವಹಿಸುತ್ತೇವೆ.

ನಾವು ಶಿಕ್ಷಕರನ್ನು ಗೌರವಿಸಲು ಕಲಿಯುತ್ತೇವೆ. ಶಾಲೆಯಲ್ಲಿ ಶಿಕ್ಷಕರು ನಮಗೆ ಬೇರೆ-ಬೇರೆ ವಿಷಯಗಳನ್ನು ಕಲಿಸುತ್ತಾರೆ. ಅವರೊಂದಿಗಿನ ನಮ್ಮ ಸಂಬಂಧವು ಶಿಕ್ಷಕ-ವಿದ್ಯಾರ್ಥಿಯ ಸಂಬಂಧವಾಗಿರುತ್ತದೆ. ಸಮಾಜದಲ್ಲಿ ಹೇಗೆ ವರ್ತಿಸಬೇಕೆಂದು ನಾವು ಶಾಲೆಯಲ್ಲಿ ಕಲಿಯುತ್ತೇವೆ. ಈ ಎಲ್ಲಾ ಶಿಕ್ಷಣದ ಮೂಲಕ, ನಾವು ಉತ್ತಮ ನಾಗರಿಕರಾಗುತ್ತೇವೆ. ಶಾಲೆಯು ನಮ್ಮ ಜೀವನದಲ್ಲಿ ಕುಟುಂಬದಷ್ಟೇ ಮುಖ್ಯವಾಗಿದೆ.



### ನಿಮಗೆ ಇದು ಗೊತ್ತಿದೆಯೇ?

ಶಾಲೆಯ ಸಮವಸ್ತ್ರಗಳು ವಿದ್ಯಾರ್ಥಿಗಳಲ್ಲಿ ಸಮಾನತೆ, ಶಿಸ್ತು ಮತ್ತು ಏಕತೆಯ ಭಾವನೆಗಳನ್ನು ಮೂಡಿಸುತ್ತವೆ. ಶಾಲೆಯ ಸಮವಸ್ತ್ರಗಳಿಂದಾಗಿ ವಿದ್ಯಾರ್ಥಿಗಳಲ್ಲಿ ಶಾಲೆಯ ಬಗ್ಗೆ ಆತ್ಮೀಯತೆಯ ಭಾವನೆ ನಿರ್ಮಾಣವಾಗುತ್ತದೆ. ಶಾಲೆಯ ಸಮವಸ್ತ್ರಗಳು ಆ ಶಾಲೆಯ ಗುರುತು ಇರುತ್ತವೆ.

**ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿ ಶಾಲೆಗೆ ಅವಶ್ಯಕವಾಗಿರುವ ಸಾಧನಗಳನ್ನು ತೋರಿಸಲಾಗಿದೆ. ಅವುಗಳನ್ನು ಗುರುತಿಸಿರಿ ಮತ್ತು ಚಿತ್ರಗಳ ಕೆಳಗೆ ಅವುಗಳ ಹೆಸರುಗಳನ್ನು ಬರೆಯಿರಿ.**

- **ಭೌತಿಕ ಅಂಶಗಳು :** ಕಟ್ಟಡ, ಫಲಕ, ಖಡು (ಬಳಪ), ಡಸ್ಟರ್, ಬೆಂಚುಗಳು, ಗಂಟೆ, ಪುಸ್ತಕಗಳು, ನೋಟ್‌ಬುಕ್ಕುಗಳು, ಪೆನ್ಸಿಲ್‌ಗಳು, ರಬ್ಬರ್‌ಗಳು, ಸಿ.ಸಿ.ಟಿ.ವ್ಹಿ-ಕ್ಯಾಮರಾ, ದೂರು ಪೆಟ್ಟಿಗೆ, ಪ್ರಯೋಗಾಲಯ, ಆಟದ ಬಯಲು, ಸಂರಕ್ಷಣೆ ಗೋಡೆ, ಕುಡಿಯುವ ನೀರಿನ ಸೌಲಭ್ಯ, ಮಾರ್ಕರ್, ಬಿಳಿ ಫಲಕ, ಸ್ಮಾರ್ಟ್ ಫಲಕ, ಪಾಟಿ, ರ್‍ಯಾಂಪ್, ಗ್ರಂಥಾಲಯ, ಹಿತ್ತಲು ತೋಟ, ಗಣಕಯಂತ್ರ (ಕಂಪ್ಯೂಟರ್) ಕಕ್ಷ, ಪ್ರಥಮೋಪಚಾರ ಚಿಕಿತ್ಸಾ ಕಿಟ್, ಹುಡುಗರು ಮತ್ತು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯಗಳು, ಕೈ ತೊಳೆಯುವ ಕೇಂದ್ರ, ಶಾಲೆಯ ಬಸ್ಸು, ಇತ್ಯಾದಿ.



### ನಿಮಗೆ ಗೊತ್ತಿದೆಯಾ?



ಶಾಲೆಗಳಲ್ಲಿ ಮೆಟ್ಟಿಲುಗಳ ಪಕ್ಕದಲ್ಲಿ ಒಂದು ಇಳಿಜಾರಾದ ಭಾಗ ನಿರ್ಮಿಸಲಾಗಿರುತ್ತದೆ. ಇದಕ್ಕೆ ರ್‍ಯಾಂಪ್ ಎಂದು ಕರೆಯುತ್ತಾರೆ. ರ್‍ಯಾಂಪದಿಂದಾಗಿ ದಿವ್ಯಾಂಗರಿಗೆ ವ್ಹೀಲ್‌ಚೇರ್‌ಗಳಲ್ಲಿ ಶಾಲೆಯೊಳಗೆ ಹೋಗಲು-ಬರಲು ಸಾಧ್ಯವಾಗಿಸುತ್ತದೆ.

- **ಮಾನವೀಯ ಅಂಶಗಳು :** ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಮುಖ್ಯೋಪಾಧ್ಯಯರು, ಕಾರ್ಯಾಲಯ ಕಾರ್ಮಿಕರು, ಸ್ವಚ್ಛತಾ ಕಾರ್ಮಿಕರು, ಶಾಲೆಯ ಮಧ್ಯಾಹ್ನ ಊಟದ ಅಡುಗೆಯವರು ಮತ್ತು ಸಹಾಯಕರು, ಇತ್ಯಾದಿ.

ವಿರಾಜನ ಶಾಲೆಯಲ್ಲಿ ಶಾಲೆಯ ಮಂತ್ರಿಮಂಡಳದ ಚುನಾವಣೆ ಇತ್ತು. ಮುಖ್ಯಮಂತ್ರಿ, ಶಿಸ್ತು ಮಂತ್ರಿ, ಸ್ವಚ್ಛತಾ ಮಂತ್ರಿ, ಶಿಕ್ಷಣ ಮಂತ್ರಿ, ಸಾಂಸ್ಕೃತಿಕ ಮಂತ್ರಿ ಮತ್ತು ಕ್ರೀಡಾ ಮಂತ್ರಿ ಹೀಗೆ ಶಾಲೆಯ ಮಂತ್ರಿಮಂಡಳಕ್ಕೆ ಆಯ್ಕೆಯಾಗಬೇಕಿತ್ತು. ಎಲ್ಲಾ ವಿದ್ಯಾರ್ಥಿಗಳು ಮತ ಚಲಾಯಿಸಿದರು. ವಿರಾಜನನ್ನು ಸಾಂಸ್ಕೃತಿಕ ಮಂತ್ರಿಯನ್ನಾಗಿ ಆಯ್ಕೆ ಮಾಡಲಾಯಿತು. ಆದ್ದರಿಂದ ಈಗ ಅವನಿಗೆ ಶಾಲೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಜವಾಬ್ದಾರಿ ಇರುವುದು.



ಶಾಲೆಯ ಮಂತ್ರಿಮಂಡಳ ಚುನಾವಣೆ

**ಕೃತಿ – ಶಾಲೆಯಲ್ಲಿ ಸ್ವಚ್ಛತಾ ಸಪ್ತಾಹವನ್ನು ಆಚರಿಸುವುದಿದೆ. ನಿಮ್ಮ ತರಗತಿಯ ಮೂರು ಗುಂಪುಗಳನ್ನು ತಯಾರಿಸಿರಿ ಮತ್ತು ಕೆಳಗಿನ ಕೋಷ್ಟಕದ ಪ್ರಕಾರ ಕಾರ್ಯಗಳನ್ನು ವಿಂಗಡಿಸಿ.**

| 'ಅ' ಗುಂಪು | 'ಬ' ಗುಂಪು | 'ಕ' ಗುಂಪು |
|---|---|---|
| ---------------------------- | ---------------------------- | ---------------------------- |
| ---------------------------- | ---------------------------- | ---------------------------- |

- ಶಾಲೆಯಲ್ಲಿ ವಿದ್ಯಾರ್ಥಿಗಳು ಶಾಲೆಯ ವಿವಿಧ ಕಾರ್ಯಗಳನ್ನು ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ.
- ಶಾಲೆಯು ನಮಗೆ ಜ್ಞಾನವನ್ನು ನೀಡುತ್ತದೆ. ಅದು ಸಮಸ್ಯೆಗಳನ್ನು ಪರಿಹರಿಸಲು ಕಲಿಸುತ್ತದೆ. ಅದು ಒಟ್ಟಿಗೆ ಕೆಲಸ ಮಾಡಲು ಕಲಿಸುತ್ತದೆ. ಆದ್ದರಿಂದ ಶಾಲೆಯು ಸಮಾಜಕ್ಕೆ ಬಹಳ ಉಪಯುಕ್ತ ಸಂಸ್ಥೆಯಾಗಿದೆ.
- ಶಾಲೆಯಲ್ಲಿ ಪ್ರತಿಯೊಬ್ಬರೂ ಮಾತನಾಡಲು, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುವ ಮತ್ತು ಇತರರ ಆಲೋಚನೆಗಳನ್ನು ಮತ್ತು ಅಭಿಪ್ರಾಯಗಳನ್ನು ಕೇಳುವ ರೂಢಿಯಾಗುತ್ತದೆ. ಶಾಲೆಯಲ್ಲಿ ನಾವು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಲಿಯುತ್ತೇವೆ.

  ಇದೇ ರೀತಿ ನಮ್ಮ ದೇಶದ ಆಡಳಿತ ನಡೆಯುತ್ತದೆ. ಇದನ್ನೇ 'ಪ್ರಜಾಪ್ರಭುತ್ವ' ಎಂದು ಕರೆಯುತ್ತಾರೆ.

### ಹೇಳಿರಿ ನೋಡೋಣ!

* ನಿಮ್ಮ ಶಾಲೆಯಲ್ಲಿಯ ಯಾವ ಸ್ಥಳ ನಿಮಗೆ ತುಂಬಾ ಇಷ್ಟ? ಏಕೆ?
* ನಿಮ್ಮನ್ನು ಒಂದು ದಿನಕ್ಕಾಗಿ ಶಿಕ್ಷಕರನ್ನಾಗಿ ನೇಮಿಸಿದರೆ ನೀವು ಯಾವ ಯಾವ ಸಿದ್ಧತೆ ಮಾಡುವಿರಿ?

## ಮಾಡಿ ನೋಡಿರಿ.

ನಿರಂಜನ್‌ನು ಒಂದು ನಕಾಶೆಯನ್ನು ತಯಾರಿಸಿದ್ದಾನೆ.

ನಿಮ್ಮ ಸ್ವಂತ ಮನೆಯಿಂದ ಶಾಲೆಗೆ, ಇದೇ ರೀತಿ ಒಂದು ನಕಾಶೆಯನ್ನು ರೂಪರೇಷೆ ತಯಾರಿಸಿರಿ.



ಮನೆಯಿಂದ ಶಾಲೆಯ ನಕಾಶೆಯ ರೂಪರೇಷೆ

**ಶಿಕ್ಷಣದ ಹಕ್ಕು :** ಭಾರತ ಸರ್ಕಾರವು 'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಅಧಿನಿಯಮ – 2009'ನ್ನು ಜಾರಿಗೆ ತಂದಿದೆ. ಇದರ ಪ್ರಕಾರ, ಭಾರತದ ಪ್ರತಿಯೊಂದು ಮಗುವಿಗೂ ಶಿಕ್ಷಣದ ಹಕ್ಕು ಇದೆ.

समग्र शिक्षा Samagra Shiksha

## ನಿಮಗೆ ಗೊತ್ತಾ?



ಮಹಾತ್ಮಾ ಜ್ಯೋತಿಬಾ ಫುಲೆ

ಮಹಾತ್ಮಾ ಜ್ಯೋತಿರಾವ ಫುಲೆ ಮತ್ತು ಸಾವಿತ್ರಿಬಾಯಿ ಫುಲೆಯವರು ಬಾಲಕಿಯರಿಗೆ ಶಿಕ್ಷಣ ದೊರೆಯಬೇಕೆಂದು ಸಾಕಷ್ಟು ಪರಿಶ್ರಮ ಪಟ್ಟಿದ್ದಾರೆ. ಮಹಾತ್ಮಾ ಜ್ಯೋತಿರಾವ ಫುಲೆ 01 ಜನವರಿ 1848 ರಂದು ಪುಣೆಯ ಭಿಡೆ ವಾಡಾದಲ್ಲಿ ಬಾಲಕಿಯರಿಗಾಗಿ ಒಂದು ಶಾಲೆಯನ್ನು ಪ್ರಾರಂಭಿಸಿದರು. ಇದು ಮಹಾರಾಷ್ಟ್ರದ ಮೊದಲ ಬಾಲಕಿಯರ ಶಾಲೆಯಾಗಿತ್ತು. ಆರಂಭದಲ್ಲಿ ಮಹಾತ್ಮಾ ಜ್ಯೋತಿರಾವ ಫುಲೆ ಮತ್ತು ಸಾವಿತ್ರಿಬಾಯಿ ಫುಲೆಯವರು ಈ ಬಾಲಕಿಯರ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಸಾವಿತ್ರಿಬಾಯಿ ಫುಲೆಯವರು ಮೊದಲ ಭಾರತೀಯ ಮಹಿಳಾ ಶಿಕ್ಷಕಿಯಾಗಿದ್ದರು.




ಸಾವಿತ್ರಿಬಾಯಿ ಫುಲೆ

## ಸ್ವಾಧ್ಯಾಯ

**ಪ್ರ.1 ಪಟ್ಟಿ ಮಾಡಿರಿ.**

ನಿಮಗೆ ಶಾಲೆಯಲ್ಲಿ ಹಿಡಿಸುವಂತಹ ಸಂಗತಿಗಳು

| |
|---|
| |
| |
| |
| |
| |

**ಪ್ರ.2 ಕೆಳಗೆ ಕೊಡಲಾದ ಅಂಶಗಳನ್ನು ವರ್ಗೀಕರಿಸಿ ಮತ್ತು ಅವುಗಳನ್ನು ಕೆಳಗಿನ ಕೋಷ್ಟಕದಲ್ಲಿ ಬರೆಯಿರಿ.**

(ಕಟ್ಟಡ, ಶಿಕ್ಷಕರು, ಶೌಚಾಲಯಗಳು, ಮುಖ್ಯೋಪಾಧ್ಯಾಯರು, ಶಾಲೆಯ ಮಧ್ಯಾಹ್ನ ಊಟದ ಅಡುಗೆಯವರು, ಗ್ರಂಥಾಲಯ, ವಿದ್ಯಾರ್ಥಿಗಳು, ಪ್ರಯೋಗಾಲಯ, ರ್‍ಯಾಂಪ್, ಪೋಷಕರು, ಮೈದಾನ, ದೂರು ಪೆಟ್ಟಿಗೆ, ಕಂಪ್ಯೂಟರ್ ಕೋಣೆ)

| ಭೌತಿಕ ಘಟಕಗಳು (ಅಂಶಗಳು) | ಮಾನವೀಯ ಘಟಕಗಳು (ಅಂಶಗಳು) |
|---|---|
| ........................................ | ........................................ |
| ........................................ | ........................................ |

**ಪ್ರ.3 ಕೆಳಗಿನ ಕೃತಿಗಳನ್ನು ಪೂರ್ಣ ಮಾಡಿರಿ.**

**ಈ ಕೆಳಕಂಡ ವ್ಯಕ್ತಿಗಳು ಶಾಲೆಯಲ್ಲಿ ಮಾಡಿದ ಕೆಲಸದ ಬಗ್ಗೆ ಒಂದೇ ವಾಕ್ಯದಲ್ಲಿ ಬರೆಯಿರಿ.**



ಶಾಲೆಯ ಅಡುಗೆಯವರು



ವರ್ಗ ಶಿಕ್ಷಕರು ವರ್ಗ ಸ್ನೇಹಿತರು



ಪಾಲಕರು



ಮುಖ್ಯಾಧ್ಯಾಪಕರು



ಸ್ವಚ್ಛತಾ ಮಂತ್ರಿ

ಪ್ರ.4 ನೀವು ಇಲ್ಲಿ ಏನು ಮಾಡುತ್ತೀರಿ?


ವಾಚನದ ಮೂಲೆ

-----------------------------------------------------------

-----------------------------------------------------------

-----------------------------------------------------------


ಆಟದ ಮೈದಾನ

-----------------------------------------------------------

-----------------------------------------------------------

-----------------------------------------------------------



ಕೈತೋಟ

-----------------------------------------------------------

-----------------------------------------------------------

-----------------------------------------------------------

ಪ್ರ.5 ನೀವು ಶಾಲೆಯಲ್ಲಿ ಕಲಿಯುವ ಹೊಸ ಸಂಗತಿಗಳನ್ನು ಬರೆಯಿರಿ.

-----------------------------------------------------------

-----------------------------------------------------------

-----------------------------------------------------------

-----------------------------------------------------------

**ಉಪಕ್ರಮ**

- ದಿವ್ಯಾಂಗ ವಿದ್ಯಾರ್ಥಿಗಳಿಗಾಗಿ ಯಾವ ಸೌಲಭ್ಯಗಳು ಕೊಡಬೇಕು? ಶಿಕ್ಷಕರ ಸಹಾಯದಿಂದ ಮಾಹಿತಿ ಪಡೆದು ಬರೆಯಿರಿ.
- ಶಾಲೆಯ ಅಧ್ಯಯನದಲ್ಲಿ ತಂತ್ರಜ್ಞಾನದ ಬಳಕೆಯ ಬಗ್ಗೆ ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿರಿ ಮತ್ತು ತಂತ್ರಜ್ಞಾನದ ಉಪಯೋಗಗಳ ಬಗ್ಗೆ ಮಾಹಿತಿ ಬರೆಯಿರಿ.

***



# 4. ಮಾರುಕಟ್ಟೆ




ಬಾಲ ಆನಂದ ಸಂಮ್ಮೆಳನ ಮಕ್ಕಳು ವಿವಿಧ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ, ಪೋಷಕರು ಕೊಂಡು ಕೊಳ್ಳುತ್ತಿದ್ದಾರೆ.

ವಿದ್ಯಾರ್ಥಿಗಳು ಬಾಲ ಆನಂದ ಸಂಮ್ಮೇಳನದಲ್ಲಿ ವಿವಿಧ ವಸ್ತುಗಳನ್ನು ಖರೀದಿಸಲು ಮತ್ತು ಮಾರಾಟ ಮಾಡಲು ಇಟ್ಟಿರುವ ಅಂಗಡಿ (ಮಳಿಗೆ)ಗಳು ಮಾರುಕಟ್ಟೆಯ ಚಿಕ್ಕದಾದ ಒಂದು ಆವೃತ್ತಿಯಾಗಿದೆ. ನೇಹಾ ಮತ್ತು ಸಲೀಲ್ ಇವರು ಬಾಲಆನಂದ ಸಂಮ್ಮೇಳನದಲ್ಲಿ ಮಾರಾಟಕ್ಕಾಗಿ ತಾವು ಸ್ವತಃ ತಯಾರಿಸಿದ ಉಡುಗೊರೆ ಕಾರ್ಡಗಳನ್ನು ಇಟ್ಟಿದ್ದರು. ಸಂಮ್ಮೇಳನ ಮುಗಿದಾದ ನಂತರ ಅವರು ಲೆಕ್ಕಾಚಾರಗಳನ್ನು ಮಾಡುತ್ತಿದ್ದರು.

''ಏ ಸಲೀಲ್, ನಮಗೆ ಹೆಚ್ಚಿಗೆ ಹಣ ಸಿಕ್ಕಿತು ಮತ್ತು ಲಾಭವಾಯಿತು''. ನೇಹಾ ಸಂತೋಷದಿಂದ ಹೇಳಿದಳು.

''ಮುಂದಿನ ಸಲ ಉಡುಗೊರೆ ಕಾರ್ಡುಗಳ ಜೊತೆಗೆ ಪಣತಿಗಳಿಗೆ ಬಣ್ಣ ಹಚ್ಚಿ ಅವುಗಳನ್ನು ಸಹ ಮಾರಾಟ ಮಾಡೋಣ''.

**ಹೇಳಿರಿ ನೋಡೋಣ.**

- ನೀವು ಎಂದಾದರೂ ಬಾಲಆನಂದ ಸಂಮ್ಮೇಳದಲ್ಲಿ ಭಾಗವಹಿಸಿದ್ದೀರಾ? ನೀವು ಖರೀದಿ ಮಾಡಿದ್ದೀರಾ ಅಥವಾ ಮಾರಾಟ ಮಾಡಿದ್ದೀರಾ?
- ಮುಂದಿನ ಬಾಲಆನಂದ ಸಂಮೇಳದಲ್ಲಿ ನೀವು ಯಾವ ವಸ್ತುಗಳನ್ನು ಮಾರಾಟ ಮಾಡಲು ಬಯಸುತ್ತೀರಿ?

ಮಾರುಕಟ್ಟೆ ಎಂದರೆ ವಿವಿಧ ರೀತಿಯ ಸರಕುಗಳನ್ನು ಖರೀದಿ ಮಾರಾಟ ಮಾಡುವ ಸ್ಥಳ. ಸರಕುಗಳನ್ನು ಮಾರಾಟ ಮಾಡುವ ವ್ಯಕ್ತಿಯನ್ನು 'ಮಾರಾಟಗಾರ' ಎಂದು ಕರೆಯಲಾಗುತ್ತದೆ. ಸರಕುಗಳನ್ನು ಖರೀದಿಸುವ ಅಥವಾ ತೆಗೆದುಕೊಳ್ಳುವ ವ್ಯಕ್ತಿಯನ್ನು 'ಗ್ರಾಹಕ' ಎಂದು ಕರೆಯಲಾಗುತ್ತದೆ. ಅನೇಕ ಜನರು ಮಾರುಕಟ್ಟೆ ಸ್ಥಳದಲ್ಲಿ ಒಟ್ಟಿಗೆ ಸೇರುತ್ತಾರೆ.



### ನಿಮಗೆ ಇದು ಗೊತ್ತಿದಿಯೇ?

ಮಾರುಕಟ್ಟೆಗಳಲ್ಲಿ ಹಲವು ಪ್ರಕಾರಗಳಿರುತ್ತವೆ. ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ಮಾರುಕಟ್ಟೆಗಳಿವೆ.




ಬನ್ನಿ ಮೊದಲು ಹಳ್ಳಿಯಲ್ಲಿರುವ ವಾರದ ಸಂತೆ ಹೋಗೋಣ.

ಇದು ರಘು ಮತ್ತು ರಮಾಳ ಹಳ್ಳಿಯಲ್ಲಿರುವ ಸಂತೆ. ಅವರು ತಮ್ಮ ತಾಯಿ-ತಂದೆಯವರ ಜೊತೆಗೆ ಸಂತೆಗೆ ಬಂದಿದ್ದಾರೆ. ಇದು ವಾರದ ಸಂತೆ. ವಾರದ ಸಂತೆ ಎಂದರೆ ವಾರದ ಒಂದು ನಿರ್ದಿಷ್ಟ ದಿನದಂದು ನಡೆಯುವ ಸಂತೆ. ಇಲ್ಲಿ ಪ್ರತಿ ಬುಧವಾರ ಸಂತೆ ನಡೆಯುತ್ತದೆ. ಗ್ರಾಮದ ಜನರು ವಾರದ ಸಂತೆಗಾಗಿ ಆತುರದಿಂದ ಕಾಯುತ್ತಾರೆ. ಸುತ್ತಮುತ್ತಲಿನ ಹಳ್ಳಿಯ ರೈತರು ಹೊಲಗಳಲ್ಲಿ ಬೆಳೆದ ತಾಜಾ ತರಕಾರಿಗಳನ್ನು ಮತ್ತು ಧಾನ್ಯಗಳನ್ನು ಮಾರಾಟ ಮಾಡಲು ತರುತ್ತಾರೆ. ಅನೇಕ ಕುಶಲಕಾರ್ಮಿಕರು ಮಾರಾಟ ಮಾಡಲು ವಿವಿಧ ವಸ್ತುಗಳನ್ನು ತರುತ್ತಾರೆ. ಇತ್ತೀಚಿಗೆ ನಗರಗಳಲ್ಲಿಯು ವಾರದ ಸಂತೆಗಳು ನಡೆಯುತ್ತವೆ. ಇಲ್ಲಿನ ಗ್ರಾಹಕರು ಮತ್ತು ಮಾರಾಟಗಾರರು ಪರಸ್ಪರ ಚೆನ್ನಾಗಿ ಪರಿಚಿತರಾಗಿರುತ್ತಾರೆ. ವಾರದ ಸಂತೆಯ ನಿಮಿತ್ಯವಾಗಿ ಜನರು ಪರಸ್ಪರ ಭೇಟಿಯಾಗುತ್ತಾರೆ.


ವಾರದ ಸಂತೆ

ಹಳ್ಳಿಯ ಬಳಿ ತೆರೆದ ಜಾಗದಲ್ಲಿ ವಾರದ ಸಂತೆಯು ನಡೆಯುತ್ತಿತ್ತು. ಕೆಲವು ಮಾರಾಟಗಾರರು ಸಂತೆಯಲ್ಲಿ ನೆಲದ ಮೇಲೆ ತಮ್ಮ

ಹಾಸಿಗೆಯನ್ನು ಹರಡಿಕೊಂಡು ಕುಳಿತಿದ್ದರು. ಕೆಲವರು ಕಟ್ಟೆಗೆಯ ಬೆಂಚುಗಳ ಮೇಲೆ ತಾತ್ಕಾಲಿಕ ಅಂಗಡಿಗಳನ್ನು ಸ್ಥಾಪಿಸಿದ್ದರು. ಹಸಿರು ಎಲೆ ತರಕಾರಿಗಳು, ವರ್ಣರಂಜಿತ ಹೂವುಗಳು, ತಾಜಾ ಹಣ್ಣುಗಳು, ಮಸಾಲೆಯ, ಪದಾರ್ಥಗಳು, ಸಂಡಿಗೆ - ಹಪ್ಪಳ, ಶೇವ್-ಫರಸನ್ ಮತ್ತು ಸಿಹಿತಿಂಡಿಗಳಿಂದ ಮಾರುಕಟ್ಟೆಯನ್ನು ಸುಂದರವಾಗಿ ಅಲಂಕಾರಗೊಂಡಿತ್ತು. ಪಂಚೆಗಳು, ಟೊಪ್ಪಿಗಳು, ಸೀರೆಗಳು, ಮಣ್ಣಿನ ಮತ್ತು ಲೋಹದ ಮಡಕೆಗಳು, ಬುಟ್ಟಿಗಳು, ಕೃಷಿ ಉಪಕರಣಗಳು ಮತ್ತು ಇತರ ಅನೇಕ ವಸ್ತುಗಳು ಮಾರಾಟದಲ್ಲಿದ್ದವು. ಗ್ರಾಹಕರನ್ನು ಆಕರ್ಷಿಸಲು, ಮಾರಾಟಗಾರರು ತಮ್ಮ ವಸ್ತುಗಳ ಕುರಿತು ಜೋರಾಗಿ ಕೂಗುತ್ತ ಜಾಹೀರಾತು ಮಾಡುತ್ತಿದ್ದರು. ಕೆಲವು ಸ್ಥಳಗಳಲ್ಲಿ, ಸರಕುಗಳ ಬೆಲೆಗಳ ಬಗ್ಗೆ ಗ್ರಾಹಕರು ಮತ್ತು ಮಾರಾಟಗಾರರ ನಡುವೆ ಚೌಕಾಶಿ ನಡೆದಿತ್ತು. ಒಟ್ಟಾರೆಯಾಗಿ, ಮಾರುಕಟ್ಟೆಯಲ್ಲಿನ ವಾತಾವರಣವು ಉತ್ಸಾಹ ಮತ್ತು ಗದ್ದಲದಿಂದ ತುಂಬಿತ್ತು.

ತಂದೆಯು ಸೂಚಿಸಿದಂತೆ, ರಘು ಮನೆಯಿಂದ ಖರೀದಿಸಲು ಬೇಕಾದ ವಸ್ತುಗಳ ಪಟ್ಟಿಯನ್ನು ತಂದಿದ್ದ.

**ರಮಾಳು ತನ್ನೊಂದಿಗೆ ಕೆಲವು ಸಣ್ಣ ಮತ್ತು ದೊಡ್ಡ ಬಟ್ಟೆ ಚೀಲಗಳನ್ನು ತೆಗೆದುಕೊಂಡು ಬಂದಿದ್ದಳು.**



**ವಿಚಾರ ಮಾಡಿರಿ.**

**ಮಾರುಕಟ್ಟೆಗೆ ಹೋಗುವಾಗ ಯಾವಾಗಲೂ ಬಟ್ಟೆ ಚೀಲಗಳನ್ನು ಏಕೆ ತೆಗೆದುಕೊಂಡು ಹೋಗಬೇಕು?**

ಮರುದಿನ, ಮನೆಯಲ್ಲಿ ಕೆಲವರು ಉಪವಾಸ ಇರುವುದರಿಂದ, ಅವರು ಹಣ್ಣುಗಳನ್ನು ಖರೀದಿಸುವವರಿದ್ದರು. ತಾಜಾ ಹಣ್ಣುಗಳನ್ನು ಹೊಂದಿರುವ ಬಂಡಿಯ ಮಾರುಕಟ್ಟೆಯ ಆರಂಭದಲ್ಲಿತ್ತು. ಎಲ್ಲಾ ಹಣ್ಣುಗಳನ್ನು ಬಂಡಿಯ ಮೇಲೆ ಸುಂದರವಾಗಿ ರಚಿಸಲಾಗಿತ್ತು.

''ನಮಸ್ಕಾರ ಚಿಕ್ಕಪ್ಪ. ಒಂದು ಡಜನ್ ಬಾಳೆಹಣ್ಣು ಕೊಡಿರಿ''. ರಘು ಅಂದನು.

''ಅಪ್ಪ ನಾವು ಪೇರಲ ಹಣ್ಣು ತೆಗೆದುಕೊಳ್ಳೋಣ ಬಾ'' ರಮಾ ಹಸಿರು ಪೇರಲಹಣ್ಣುಗಳನ್ನು ನೋಡುತ್ತಾ ಹೇಳಿದಳು.

''ಸರಿ! ಅಣ್ಣ, ಒಂದು ಕಿಲೋ ಪೇರಲಹಣ್ಣು ಕೊಡಿರಿ''. ಅಪ್ಪನು ಒಂದು ಡಜನ್ ಬಾಳೆಹಣ್ಣುಗಳ ಜೊತೆಗೆ ಒಂದು ಕಿಲೋ ಪೇರಲಹಣ್ಣುಗಳನ್ನು ಕೊಂಡುಕೊಂಡರು.

ತರಕಾರಿಗಳನ್ನು ತೆಗೆದುಕೊಳ್ಳುವಾಗ ರಮಾ ಹೇಳಿದಳು, ''ಅಪ್ಪ, ಹಾಗಲಕಾಯಿ ಮತ್ತು ಸಬ್ಬಸ್ಸಿಗೆ ಸೊಪ್ಪು ಹೊರತುಪಡಿಸಿ ಬೇರೆ ಏನಾದರೂ ತೆಗೆದುಕೊಳ್ಳಿರಿ''.

ನಂತರ, ರಮಾಳಿಗೆ ವಿವರಿಸುತ್ತಾ ತಂದೆ ಹೇಳಿದರು, ''ರಮಾ, ಕೆಲವು ಸಂಗತಿಗಳನ್ನು ಇಚ್ಛೆಯಂತೆ ಬಯಸದೆ, ಅವಶ್ಯಕತೆಯೆಂದು ಮಾಡಬೇಕಾಗುತ್ತದೆ. ಆಹಾರದ ವಿಷಯದಲ್ಲಿಯೂ ಅಷ್ಟೇ. ಪ್ರತಿಯೊಂದು ತರಕಾರಿಯಲ್ಲಿ ನಿರ್ದಿಷ್ಟವಾದ ಪೌಷ್ಟಿಕಾಂಶವು ಇರುತ್ತವೆ. ನಮ್ಮ ದೇಹಕ್ಕೆ ಅವುಗಳ ಅವಶ್ಯಕತೆ ನಮಗೆ ಇರುತ್ತದೆ. ಸರಿಯೇ? ನಮಗೆ ಸಿಹಿ, ಕಹಿ, ಒಗರು, ಉಪ್ಪು, ಹುಳಿ ಮತ್ತು ಖಾರ ಮುಂತಾದ ಎಲ್ಲಾ ರಸಗಳು ದೇಹಕ್ಕೆ ದೊರೆಯಲೇಬೇಕು, ಆಗ ಮಾತ್ರ ನಮ್ಮ ಆರೋಗ್ಯವು ಉತ್ತಮವಾಗಿರುತ್ತದೆ. ನೀನು ಇಷ್ಟಪಡುವ ಬೆಂಡೆಕಾಯಿ ಮತ್ತು ರಘು ಇಷ್ಟಪಡುವ ಪಾಲಕ ಸೊಪ್ಪನ್ನು ಸಹ ನಾವು ತೆಗೆದುಕೊಳ್ಳೋಣ''.

ರಘು ಕೊಂಡುಕೊಳ್ಳುವ ವಸ್ತುಗಳ ಯಾದಿಯನ್ನು ನೋಡಿ ತಂದೆಗೆ, ''ಅಪ್ಪ ಈಗ ನಾನು ಮನ್ಸುಖ್‌ಲಾಲ್ ಚಿಕ್ಕಪ್ಪನ ಅಂಗಡಿಯಿಂದ ಸಿಹಿ ಪದಾರ್ಥ ತೆಗೆದು ಕೊಳ್ಳುವುದಿದೆ. ಅಜ್ಜಿಯ ಬತ್ತಿಗಾಗಿ ಹತ್ತಿ ತರಲು ಹೇಳಿದ್ದಾರೆ. ಒಂದು ಕಸಬರಿಗೆ ಕೂಡಾ ತೆಗೆದುಕೊಳ್ಳುವುದಿದೆ. ಪಕ್ಕದ ಚಿಕ್ಕಮ್ಮ ಮಾರುಕಟ್ಟೆಗೆ ಬರಲು ಸಾಧ್ಯವಾಗದ ಕಾರಣ ಉಪ್ಪಿನಕಾಯಿಗಾಗಿ ಒಂದು ಕಿಲೋ ಲಿಂಬೆ ಹಣ್ಣು ತರಲು ಹೇಳಿದ್ದಾರೆ''. ಎಂದು ಹೇಳಿದನು.

ಎಲ್ಲಾ ವಸ್ತುಗಳನ್ನು ತೆಗೆದುಕೊಂಡ ನಂತರ ತಂದೆಯು ರಮಾಳ ಸಲುವಾಗಿ ಕೆಂಪು ಮತ್ತು ಹಸಿರು ಬಣ್ಣದ ಬಳೆಗಳನ್ನು ಮತ್ತು ರಘುನ ಸಲುವಾಗಿ ಬುಗುರಿಯನ್ನು ತೆಗೆದುಕೊಂಡರು.

ಅಷ್ಟರಲ್ಲಿಯೇ ರಮಾ ತನ್ನ ಮುಂದೆ ಬಣ್ಣ ಬಣ್ಣದ ಗಾಜಿನ ಮಣಿಗಳಿಂದ ತುಂಬಿದ ದೊಡ್ಡ ಬುಟ್ಟಿಗಳನ್ನು ಮತ್ತು ಹಿತ್ತಾಳೆಯ ಗಂಟೆಗಳನ್ನು ನೋಡಿದಳು. ರಮಾಳ ಸ್ನೇಹಿತೆ ವರ್ಷಾ ಮತ್ತು ಅವಳ ಅಜ್ಜ ಅಲ್ಲಿ ಖರೀದಿ ಮಾಡುತ್ತಿದ್ದರು.

''ಓಹ್, ಅವರಲ್ಲಿ ದನದ ಕೊಟ್ಟಿಗೆ ಇದೆ ಅಲ್ಲವೆ? ಅವರು ತಮ್ಮ ಸುಂದರವಾದ ಹೋರಿಗಳು ಮತ್ತು ನಸುಗೆಂಪು ಬಣ್ಣದ ಹಸುಗಳ ಕುತ್ತಿಗೆಗೆ-ಹಾರ ಹಾಕಲು ಬಣ್ಣ ಬಣ್ಣದ ಮಣಿಗಳು ಮತ್ತು ಗಂಟೆಗಳನ್ನು ಕೊಂಡುಕೊಳ್ಳುತ್ತಿರಬೇಕು. ಕಾರು ಹುಣ್ಣಿಮೆ ಅಲಂಕಾರಕ್ಕಾಗಿ ಅವರಿಗೆ ಅವು ಬೇಕಾಗುತ್ತವೆ'' ಎಂದು ತಂದೆ ಹೇಳಿದರು.



### ಇದು ನಿಮಗೆ ಗೊತ್ತಿದೆಯೇ?

ಜೀವನಾವಶ್ಯಕ ವಸ್ತುಗಳಿಗೆ ಮಾರುಕಟ್ಟೆ ಇರುವಂತೆಯೇ, ದನಕರುಗಳಿಗಾಗಿಯೂ ಸಹ ವಾರದ ಮಾರುಕಟ್ಟೆ ಇರುತ್ತದೆ. ಸೋಲ್ಲಾಪೂರ ಜಿಲ್ಲೆಯ ಸಾಂಗೋಲಾದಲ್ಲಿರುವ ವಾರದ ಮಾರುಕಟ್ಟೆಯು ಖಿಲ್ಲಾರಿ ಹಸುಗಳು ಮತ್ತು ಎತ್ತುಗಳಿಗೆ ಹೆಸರುವಾಸಿಯಾಗಿದೆ. ಈ ಮಾರುಕಟ್ಟೆಯಲ್ಲಿ ಹಸುಗಳು, ಎತ್ತುಗಳು, ಎಮ್ಮೆಗಳು, ಮೇಕೆಗಳು ಮತ್ತು ಕುರಿಗಳಿಗೆ ಪ್ರತ್ಯೇಕ ವಿಭಾಗಗಳಿವೆ. ಭಾನುವಾರ ಮಾರುಕಟ್ಟೆಯ ದಿನ. ಎತ್ತಿನ ಬಂಡಿಯ ಓಟಗಳಿಗೆ ಖಿಲ್ಲಾರಿ ಎತ್ತುಗಳಿಗೆ ಹೆಚ್ಚಿನ ಬೇಡಿಕೆ ಇದೆ. ಅನೇಕ ಹಳ್ಳಿಗಳಲ್ಲಿಯೂ ಇದೇ ರೀತಿಯ ಮಾರುಕಟ್ಟೆಗಳು ತುಂಬುತ್ತವೆ.


ಸಾಂಗೋಲಾದಲ್ಲಿ ಪ್ರಾಣಿಗಳ ವಾರದ ಮಾರುಕಟ್ಟೆ

ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರು ಒದಗಿಸಲು ರಘುವಿಗೆ ಮಣ್ಣಿನ ಪಾತ್ರೆಗಳು ಬೇಕಾಗಿದ್ದವು. ಮಲ್ಲಪ್ಪನ ಅಂಗಡಿಯಲ್ಲಿ ಒಳ್ಳೆಯ ಮಣ್ಣಿನ ಪಾತ್ರೆಗಳು ದೊರೆಯುತ್ತವೆ. ಅವನು ಅಲ್ಲಿಂದ ಒಂದು ದೊಡ್ಡ ಮಣ್ಣಿನ ಅಗಲವಾದ ಪಾತ್ರೆಯನ್ನು ತೆಗದುಕೊಂಡನು. ತಂದೆ, ರಘು ಮತ್ತು ರಮಾ ಸೇರಿ ಮಾರುಕಟ್ಟೆಯಲ್ಲಿ ಕಬ್ಬಿನ ರಸವನ್ನು ಕುಡಿದರು. ನಂತರ ಅವರು ಕೊಂಡುಕೊಂಡ ವಸ್ತುಗಳ ಚೀಲುಗಳೊಂದಿಗೆ ಮನೆಗೆ ಬಂದರು. ರಮಾ ಮತ್ತು ರಘು ಒಟ್ಟಿಗೆ ಸೇರಿ ಖರ್ಚಿನ ಲೆಕ್ಕವನ್ನು ಬರೆದರು.

## ಸೂಪರ್ ಮಾರ್ಕೆಟ್

ನನ್ನ ತಾಯಿ-ತಂದೆಯರು ಕೆಲವೊಮ್ಮೆ ಸೂಪರ್ ಮಾರ್ಕೆಟಿಗೆ ಹೋಗುತ್ತಾರೆ. ಅಲ್ಲಿ ಒಂದೇ ಅಂಗಡಿಯಲ್ಲಿ ಗೃಹೋಪಯೋಗಿ ವಸ್ತುಗಳು ತರಕಾರಿಗಳು, ಹಣ್ಣು-ಹಂಪಲಗಳು, ಬ್ರೆಡ್, ಬಿಸ್ಕತ್ತುಗಳು, ಸಾಬೂನುಗಳು, ಶಾಂಪೂಗಳು, ಸೌಂದರ್ಯವರ್ಧಕಗಳು, ಲೇಖನ ಸಾಮಗ್ರಿಗಳು ಮುಂತಾದ ವಿವಿಧ ಉಪಯುಕ್ತವಾದ ವಸ್ತುಗಳು ದೊರೆಯುತ್ತವೆ. ಈ ರೀತಿಯಾಗಿ ಮಾರಾಟ ಮಾಡುವ ಅಂಗಡಿಯನ್ನು ''ಸೂಪರ್ ಮಾರ್ಕೆಟ್'' ಎಂದು ಕರೆಯಲಾಗುತ್ತದೆ. ಇಂತಹ ಸೂಪರ್ ಮಾರ್ಕೆಟುಗಳು ಸಾಮಾನ್ಯವಾಗಿ ನಗರಗಳಲ್ಲಿ ಕಂಡು ಬರುತ್ತವೆ.


ಸೂಪರ್ ಮಾರ್ಕೆಟ್

## ಶಾಪಿಂಗ್ ಮಾಲ್

ಇದು ಒಂದು ರೀತಿಯ ಮಾರುಕಟ್ಟೆಯೇ ಇದೆ. ಮಹಾನಗರಗಳಲ್ಲಿ, ಬಹುಮಹಡಿಯ ಕಟ್ಟಡಗಳಲ್ಲಿ ವಿವಿಧ ರೀತಿಯ ವಸ್ತುಗಳನ್ನು ಮಾರಾಟ ಮಾಡುವ ಅನೇಕ ಅಂಗಡಿಗಳಿರುತ್ತವೆ. ಹೋಗು ಬರುವ ಸಲುವಾಗಿ ''ಸರಿದಾಡುವ ಮೆಟ್ಟಲು'' ಮತ್ತು ಲಿಫ್ಟ್‌ಗಳಿರುತ್ತವೆ. ಮಾಲ್‌ನಲ್ಲಿ, ತರಕಾರಿಗಳು, ಹಣ್ಣುಗಳು ಮತ್ತು ಧಾನ್ಯಗಳ ಜೊತೆಗೆ, ಆಟಿಕೆಗಳು, ಬಟ್ಟೆಗಳು, ಪೀಠೋಪಕರಣಗಳು, ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ಉತ್ಪಾದನೆಗಳು ಮತ್ತು ಗೃಹೋಪಯೋಗಿ ವಸ್ತುಗಳು ಇವೆಲ್ಲವುಗಳು ಇರುತ್ತವೆ.



ಶಾಪಿಂಗ್ ಮಾಲ್

ಜನರಿಗೆ ಕುಳಿತುಕೊಳ್ಳಲು ಸ್ಥಳ ಇರುತ್ತದೆ. ವಿವಿಧ ಆಹಾರ ಮತ್ತು ಪಾನೀಯಗಳನ್ನು ಮಾರಾಟ ಮಾಡುವ ಸ್ಟಾಲ್‌ಗಳು ಸಹ ಇರುತ್ತವೆ. ಇಲ್ಲಿ ಎಲ್ಲವೂ ಒಂದೇ ಕಟ್ಟಡದಡಿಯಲ್ಲಿ ದೊರೆಯುತ್ತವೆ.

ಎಲ್ಲಾ ಉತ್ಪಾದನೆಗಳ ಮೇಲೆ ಬೆಲೆಯ ಸ್ಟಿಕರ್‌ಗಳು ಇರುತ್ತವೆ. ಕೊಂಡುಕೊಂಡ ಮೇಲೆ ಬೆಲೆಯ ಸ್ಟಿಕರ್‌ಗಳಿರುವ ಬಾರ್‌ಕೋಡ್ ವ್ಯವಸ್ಥೆಯನ್ನು ಪಾವತಿಸಲು ಬಳಸಲಾಗುತ್ತದೆ. ಬಾರ್‌ಕೋಡ್‌ವನ್ನು ಸ್ಕ್ಯಾನ್ ಮಾಡುವ ಮೂಲಕ ಬೆಲೆಯನ್ನು ಪರಿಶೀಲಿಸಲಾಗುತ್ತದೆ. ಕೊಂಡ ವಸ್ತುಗಳ ಬೆಲೆಯನ್ನು ನಗದು ನೀಡಿ ಅಥವಾ ಆನ್‌ಲೈನ್‌ನಲ್ಲಿ ಮಾಡಲಾಗುತ್ತದೆ.



### ಇದು ನಿಮಗೆ ಗೊತ್ತಿದೆಯೇ?

ಸಾಮಾನ್ಯವಾಗಿ ಮಾರುಕಟ್ಟೆ ಎಂದರೆ ಪ್ರತಿದಿನ ಕೊಂಡು-ಕೊಳ್ಳುವಿಕೆ ಮತ್ತು ಮಾರಾಟ ನಡೆಯುವ ಸ್ಥಳ. ಒಂದು ನಿರ್ದಿಷ್ಟ ದಿನದಂದು ಅಥವಾ ನಿರ್ದಿಷ್ಟ ಸಮಯದಲ್ಲಿ ನಡೆಯುವ ಮಾರುಕಟ್ಟೆಯನ್ನು 'ಸಂತೆ' ಎಂದು ಕರೆಯುತ್ತಾರೆ. ಇದರ ಮೇಲಿಂದ 'ಸಂತೆ-ಗಿಂತೆ' ಎಂಬ ಜೋಡು ಶಬ್ದವನ್ನು ಬಳಸಲಾಗುತ್ತದೆ. ಕೇವಲ ಪಾತ್ರೆಗಳು, ಕೇವಲ ಬಟ್ಟೆಗಳಂತಹ ಒಂದೇ ರೀತಿಯ ವಸ್ತುಗಳನ್ನು ಮಾರಾಟ ಮಾಡುವ ಮಾರುಕಟ್ಟೆಯನ್ನು 'ಗಂಜ್' ಎಂದು ಕರೆಯುತ್ತಾರೆ. ಉದಾ- ಬಟ್ಟೆಯ ಗಂಜ್ (ಬಟ್ಟೆಯ ಮಾರುಕಟ್ಟೆ)



### ಹೇಳಿರಿ ನೋಡೋಣ.

- ನಿಮ್ಮ ಮನೆಯ ಹತ್ತಿರ ಯಾವ ಮಾರುಕಟ್ಟೆ ಇದೆ? ನೀವು ಮಾರುಕಟ್ಟೆಗೆ ಹೋಗಲು ಇಷ್ಟ ಪಡುತ್ತೀರಾ?
- ಮಾರುಕಟ್ಟೆ ನಮಗೆ ಏನು ಕಲಿಸುತ್ತದೆ?

## ಜಾಗೃತ ಗ್ರಾಹಕರಾಗೋಣ.

ಗ್ರಾಹಕರನ್ನು ವಸ್ತುಗಳ ಕಲಬೆರಕೆ, ವಸ್ತುಗಳ ಏರಿದ ಬೆಲೆ, ತೂಕ ಮಾಪಕಗಳಲ್ಲಿನ ಮೋಸ, ವಂಚನೆ ಮುಂತಾದ ವಿಷಯಗಳಿಂದ ರಕ್ಷಿಸಲು ಗ್ರಾಹಕ ಚಳುವಳಿ ಅಸ್ತಿತ್ವಕ್ಕೆ ಬಂದಿತು. ಗ್ರಾಹಕರು ವಸ್ತುಗಳನ್ನು ಕೊಂಡುಕೊಳ್ಳುವಾಗ ವಸ್ತುಗಳ ಸರಿಯಾದ ಅಳತೆ ಮತ್ತು ಸರಿಯಾದ ಬೆಲೆಯನ್ನು ಖಚಿತಪಡಿಸಿಕೊಂಡು ತೆಗೆದುಕೊಳ್ಳಬೇಕು.






## ಸ್ವಾಧ್ಯಾಯ

**ಪ್ರ.1 ಹೆಸರುಗಳನ್ನು ಬರೆಯಿರಿ.**

(ಅ) ಸರಕುಗಳನ್ನು ಮಾರಾಟ ಮಾಡುವವ ______

(ಆ) ವಸ್ತುಗಳನ್ನು ಕೊಂಡುಕೊಳ್ಳುವವ ______

(ಇ) ವಸ್ತುಗಳನ್ನು ಕೊಂಡುಕೊಳ್ಳುವ ಮತ್ತು ಮಾರಾಟ ಮಾಡುವ ಸ್ಥಳ ______

**ಪ್ರ.2 ಮಾರುಕಟ್ಟೆಗಳ ಪ್ರಕಾರಗಳು ಮತ್ತು ಅವುಗಳಲ್ಲಿಯ ಮಾರಾಟಕ್ಕಿರುವ ವಸ್ತುಗಳ ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿ.**



**ಪ್ರ.3 ಅಂಗಡಿಯಲ್ಲಿ ಕೊಂಡ ವಸ್ತುವಿನ ಪಾವತಿಯ ಚಿತ್ರವನ್ನು ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.**

(1) ಅಂಗಡಿ ಯಾವುದರದ್ದು ಇದೆ?.................

(2) ರಶೀದಿಯಲ್ಲಿಯ ಕೊಂಡ ವಸ್ತುಗಳ ಹೆಸರುಗಳನ್ನು ಬರೆಯಿರಿ. .................

(3) ರಶೀದಿಯಲ್ಲಿಯ ಕೊಂಡ ದಿನಾಂಕವನ್ನು ಬರೆಯಿರಿ. .................

(4) ರಶೀದಿಯ ಆಧಾರದ ಮೇಲೆ ಮಾರಾಟಗಾರನು ಒಟ್ಟು ಎಷ್ಟು ರೂಪಾಯಿಗಳನ್ನು ಕೊಡಬೇಕಾಗುತ್ತದೆ? ........

(5) ಮಾರಾಟಗಾರರು ಏನಾದರೂ ರಿಯಾಯಿತಿ ನೀಡಿದ್ದಾರೆಯೇ? ಹಾಗಿದ್ದಲ್ಲಿ, ಎಷ್ಟು? .................

**ವಸ್ತು ಖರೀದಿಯ ತೆರಿಗೆ ಪಾವತಿ (ಚಲನ)**

GSTIN : 27ABCDE1234S1Z5

# ಟಾಯ್ ಅನ್ ಜಾಯ್

ರಂಕಾಳಾ ಚೌಪಾಟಿ, ಕೊಲ್ಹಾಪುರ 416012

ಮೊಬಾಯಿಲ್ – 9999900000

ಇಮೇಲ್ – toynjoy@gmail.com

ಇನ್‌ವ್ವೈಸ್ ಕ್ರಂ.: 25–26/099 ಇನ್‌ವ್ವೈಸ್ ದಿನಾಂಕ ಕ್ರಂ.: 1 ಜನೇವರಿ 2026

| ಆಟಿಕೆ | HSN ಕ್ರಂ. | ತೆರಿಗೆಪಾತ್ರ ಬೆಲೆ | GST | | | | ತೆರಿಗೆಸಹಿತ ಬೆಲೆ |
|---|---|---|---|---|---|---|---|
| | | | CGST Rate | | SGST Rate | | |
| | | | Rate | Tax | Rate | Tax | |
| ಬ್ಯಾಟರಿ ಟ್ರೇನ್ | 9503 | ₹400 | 9% | 36 | 9% | 36 | ₹472 |
| ಟ್ರೈಸಿಕಲ್ | 9503 | ₹300 | 6% | 18 | 6% | 18 | ₹336 |
| | | | | | | | |
| | | | ಒಟ್ಟು ಬೆಲೆ | | | | **₹ 808** |



**ಪ್ರ.4 ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ. (ಉದಾ- ಸ್ಥಳ ಮತ್ತು ಲಭ್ಯವಿರುವ ವಸ್ತುಗಳು)**

| ವಾರದ ಸಂತೆ | ಸೂಪರ್ ಮಾರ್ಕೆಟ್ | ಶಾಪಿಂಗ್ ಮಾಲ್ |
| --- | --- | --- |
| ---------------------------- | ---------------------------- | ---------------------------- |
| ---------------------------- | ---------------------------- | ---------------------------- |
| ---------------------------- | ---------------------------- | ---------------------------- |
| ---------------------------- | ---------------------------- | ---------------------------- |

**ಪ್ರ.5 ಹೀಗೇಕೆ ಆಗಿರಬಹುದು? ಕಾರಣ ಸಹಿತ ಬರೆಯಿರಿ.**

(1) ಸಂತೆಗೆ ಹೋಗುವಾಗ ರಮಾ ಬಟ್ಟೆಯ ಚೀಲಗಳನ್ನು ತೆಗೆದುಕೊಂಡು ಹೋದಳು.

(2) ಕೆಲವು ಸಂಗತಿಗಳನ್ನು ಇಚ್ಛೆಯಂತೆ ಬಯಸದೆ, ಅಗತ್ಯವೆಂದು ಮಾಡಬೇಕು ಎಂದು ರಮಾಳಿಗೆ ತಂದೆ ಹೇಳಿದರು.

(3) ಮಾರಾಟಗಾರರು ತಮ್ಮ ವಸ್ತುಗಳ ಬಗ್ಗೆ ಕೂಗಿ ಜಾಹೀರಾತು ಮಾಡುತ್ತಿದ್ದರು.

(4) ರಘು ಕೊಂಡುಕೊಳ್ಳಬೇಕಾದ ವಸ್ತುಗಳ ಪಟ್ಟಿಯನ್ನು ಮನೆಯಿಂದಲೇ ತಂದಿದ್ದನು.

**ಪ್ರ.5 ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ.**

(1) ವಾರದ ಸಂತೆಯಲ್ಲಿ ಯಾವ ಯಾವ ವಸ್ತುಗಳು ಸಿಗುತ್ತವೆ?

(2) ರಮಾಳ ತಂದೆಯು ಸಂತೆಯಲ್ಲಿ ಏನೇನು ಕೊಂಡು ಕೊಂಡರು?

(3) ವಸ್ತುಗಳನ್ನು ತೆಗೆದುಕೊಳ್ಳುವಾಗ ಯಾವ ಕಾಳಜಿ ವಹಿಸಬೇಕು ಎಂಬ ಸೂಚನಾ ಪತ್ರವನ್ನು ತಯಾರಿಸಿ.

(4) ಬಾರ್‌ಕೋಡ್ ವ್ಯವಸ್ಥೆಯನ್ನು ಯಾವುದಕ್ಕಾಗಿ ಉಪಯೋಗಿಸುತ್ತಾರೆ?

**ಉಪಕ್ರಮ**

- ಸುತ್ತಮುತ್ತಲಿನ ಸಂತೆಗೆ ಭೇಟಿ ನೀಡಿ ಅಲ್ಲಿನ ಘಟನೆಗಳ ಬಗ್ಗೆ ಮಾಹಿತಿ ಬರೆಯಿರಿ.
- ನಿಮ್ಮ ಪರಿಸರದಲ್ಲಿಯ ಪ್ರಾಣಿಗಳ ಸಂತೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅದರ ಬಗ್ಗೆ ಬರೆಯಿರಿ.
- ಸೂಪರ್ ಮಾರ್ಕೆಟ್, ಶಾಪಿಂಗ್ ಮಾಲ್‌ಗಳಿಗೆ ಭೇಟಿ ನೀಡಿ ಅಲ್ಲಿನ ನಿಮ್ಮ ಅನುಭವಗಳನ್ನು ಬರೆಯಿರಿ.

✻✻✻



# 5. ನಮ್ಮ ಅವಶ್ಯಕತೆ ಮತ್ತು ಸಮಸ್ಯೆಗಳು





ಮೇಲಿನ ಚಿತ್ರವನ್ನು ನಿರೀಕ್ಷಿಸಿರಿ.

ಮನುಷ್ಯನಿಗೆ ಪ್ರತಿದಿನದ ಜೀವನಕ್ಕೆ ಅನೇಕ ಸಂಗತಿಗಳ ಅವಶ್ಯಕತೆ ಇರುತ್ತದೆ. ನೀರು ಹಾಗೂ ಆಹಾರ ಈ ಎರಡನ್ನು ಮೇಲಿನ ಚಿತ್ರದಲ್ಲಿ ಕೊಡಲಾಗಿದೆ. ಮನುಷ್ಯನಿಗೆ ಜೀವಿಸಲು ಬೇರೆ ಯಾವುದರ ಅವಶ್ಯಕತೆ ಇದೆ? ಎಂಬುದನ್ನು ಯೋಚಿಸಿ ಮತ್ತು ಮೇಲಿನ ಚೌಕಟ್ಟುಗಳಲ್ಲಿ ಬರೆಯಿರಿ.

ಪ್ರತಿದಿನ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ನೀವು ಏನು ಮಾಡುತ್ತೀರಿ? ಎಂಬುದನ್ನು ನೆನಪಿಸಿಕೊಳ್ಳಿ. ಅದಕ್ಕಾಗಿ ನಿಮಗೆ ಯಾವ ಸಂಗತಿಗಳ ಅವಶ್ಯಕತೆ ಇರುತ್ತದೆ ಎಂಬುದನ್ನು ವಿಚಾರ ಮಾಡಿರಿ. ಆ ಸಂಗತಿಗಳಿಗೆ 'ಅವಶ್ಯಕತೆ' ಎಂದು ಕರೆಯುತ್ತಾರೆ.

ಯಾವ ಸಂಗತಿಗಳಿಲ್ಲದೆ ಮನುಷ್ಯನ ಜೀವನ ಕಷ್ಟಕರವಾಗುತ್ತದೆಯೋ, ಆ ಸಂಗತಿಗಳಿಗೆ ಮನುಷ್ಯನ 'ಮೂಲಭೂತ ಅವಶ್ಯಕತೆಗಳು' ಎಂದು ಕರೆಯಲಾಗುತ್ತದೆ.

* **ಮೂಲಭೂತ ಅವಶ್ಯಕತೆಗಳು : ಆಹಾರ, ಬಟ್ಟೆ, ವಸತಿ, ಆರೋಗ್ಯ, ಶಿಕ್ಷಣ**



**ಯೋಚಿಸಿರಿ.**

ನಿಮ್ಮ ಮನೆಯಲ್ಲಿ ಎರಡು ದಿನಗಳವರೆಗೆ ನಳಕ್ಕೆ (ನಲ್ಲಿಯಲ್ಲಿ) ನೀರು ಬರದಿದ್ದರೆ, ಏನಾಗುತ್ತದೆ?



**ಅವಶ್ಯಕತೆಗಳು ಮತ್ತು ಬೇಡಿಕೆಗಳು / ಇಚ್ಛೆ:**

ಈ ಎರಡರ ನಡುವೆ ಏನಾದರೂ ವ್ಯತ್ಯಾಸವಿದೆಯೇ?

ಹೌದು! ಖಂಡಿತವಿದೆ. ಅವಶ್ಯಕತೆ ಎಂದರೆ ಅವುಗಳಿಲ್ಲದೆ ಬದುಕಲು ಕಷ್ಟಕರವಾದ ಸಂಗತಿಗಳು. ಉದಾಹರಣೆಗೆ, ಆಹಾರ ಮತ್ತು ನೀರಿಲ್ಲದೆ ನಾವು ಬದುಕಲು ಸಾಧ್ಯವೇ ಇಲ್ಲ. ಆದರೆ ಬೇಡಿಕೆಗಳು ನಮ್ಮ ಜೀವನವನ್ನು ಹೆಚ್ಚು ಸುಖಮಯ ಮತ್ತು ಆರಾಮದಾಯಕರವಾಗಿ ಇರಿಸುತ್ತವೆ; ಆದರೆ ಬೇಡಿಕೆ/ಇಚ್ಛೆ ಇಲ್ಲದಿದ್ದರೂ ಬದುಕಲು ಸಾಧ್ಯವಾಗುತ್ತದೆ.

**ರಾಜುವಿಗೆ ಸಿಹಿ ತಿಂಡಿಗಳು ತುಂಬಾ ಇಷ್ಟ. ಅವನು ಪ್ರತಿದಿನ ತುಂಬಾ ಸಿಹಿ ತಿಂಡಿಗಳನ್ನು ತಿನ್ನುತ್ತಾನೆ. ಇದು ಸರಿಯೇ?**

ಎಲ್ಲಾ ಅವಶ್ಯಕತೆ ಬೇಡಿಕೆಯಾಗಿರಲು ಸಾಧ್ಯವಿಲ್ಲ. ಹಾಗೆಯೇ ಎಲ್ಲಾ ಬೇಡಿಕೆಗಳು ಅವಶ್ಯಕತೆಗಳಾಗಿರಲೇ ಬೇಕೆಂದಿಲ್ಲ. ಸಂಕ್ಷಿಪ್ತವಾಗಿ ಅವಶ್ಯಕತೆಗಳನ್ನು ಪೂರೈಸಲೇಬೇಕು; ಆದರೆ ಬೇಡಿಕೆಗಳನ್ನು ನಿಯಂತ್ರಿಸಲು ಸಾಧ್ಯ.

**ಕೆಳಗಿನವುಗಳಲ್ಲಿ ಯಾವುದು ಅವಶ್ಯಕತೆ ಮತ್ತು ಯಾವುದು ಬೇಡಿಕೆ ಎಂದು ನಿರ್ಧರಿಸಿರಿ. ಅವಶ್ಯಕತೆ ಮುಂದಿನ ಸ್ಥಳದಲ್ಲಿ ‘ಅವಶ್ಯಕತೆ’’ ಎಂದು ಮತ್ತು ಬೇಡಿಕೆ ಮುಂದಿನ ಸ್ಥಳದಲ್ಲಿ ‘ಬೇಡಿಕೆ’ ಎಂದು ಬರೆಯಿರಿ.**

| | |
|---|---|
| 1. ಧಾನ್ಯ  ...................... | 2. ವೇಫರ್ಸ್/ ಚಾಕಲೇಟ್  ...................... |
| 3. ತಂಪು ಪಾನೀಯಗಳು  ...................... | 4. ಮನೆ  ...................... |
| 5. ನೀರು  ...................... | 6. ಆಟಿಕೆಗಳು  ...................... |
| 7. ಬಟ್ಟೆಗಳು  ...................... | 8. ಪುಸ್ತಕಗಳು  ...................... |

**ಈಗ ನಾವು ನಮ್ಮ ಮೂಲಭೂತ ಅವಶ್ಯಕತೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳೋಣ.**

**ನೀರು :** ನೀರು ನಮ್ಮ ಬಾಯಾರಿಕೆಯನ್ನು ತಣಿಸುತ್ತದೆ. ನೀರು ಮನುಷ್ಯನಂತೆಯೇ ಪ್ರಾಣಿಗಳಿಗೂ ಪಕ್ಷಿಗಳಿಗೂ ಮತ್ತು ವನಸ್ಪತಿಗಳಿಗೂ ಅವಶ್ಯಕವಾಗಿದೆ. ನೀರು ಸಿಗದಿದ್ದರೆ, ಅವುಗಳ ಬದುಕೂ ಅಸಾಧ್ಯವಾಗುತ್ತದೆ. ಅದಕ್ಕಾಗಿಯೇ ನೀರನ್ನು 'ಜೀವನ' ಎಂದು ಕರೆಯಲಾಗುತ್ತದೆ.

ಮಳೆ ಇದು ನೀರಿನ ಮುಖ್ಯ ಮೂಲವಿದ್ದು, ನೀರು ಸಾರ್ವಜನಿಕ ಸಂಪತ್ತಾಗಿದೆ. ಅದರ ಮೇಲೆ ಎಲ್ಲರಿಗೂ ಹಕ್ಕು ಇರುತ್ತದೆ.



**ಮಾಡಿ ನೋಡಿರಿ.**

ನಿಮ್ಮ ಮನೆಗೆ ನೀರು ಎಲ್ಲಿಂದ ಮತ್ತು ಹೇಗೆ ಬರುತ್ತದೆ ಎಂಬುದನ್ನು ಕೆಳಗಿನ ಸಂಕಲ್ಪನಾಚಿತ್ರದ ಸಹಾಯದಿಂದ ಕೆಳಗಿನ ಚೌಕಟ್ಟಿನಲ್ಲಿ ಬರೆಯಿರಿ.

ಮಳೆ

↓

ಮುಖ್ಯ ಮೂಲ

↓

..............................................................................

ನೀರಿನ ಮೂಲ– ವಿವಿಧ ಜಲಾಶಯಗಳು

(ನದಿ, ಆಣೆಕಟ್ಟು, ಬಾವಿ, ಒಡ್ಡು, ಹಳ್ಳ, ಬುಗ್ಗೆ, ಕಾಲುವೆ ಕೊಳವೆಬಾವಿ ಇತ್ಯಾದಿ)

↓

..............................................................................

ಎಲ್ಲಿ ಸಂಗ್ರಹಿಸಲಾಗಿದೆ?

(ಒಡ್ಡು, ನೀರಿನ ಟಾಕಿ, ಬಾವಿ ಇತ್ಯಾದಿ)

↓

..............................................................................

ಮನೆಯವರೆಗೆ ಹೇಗೆ ಬಂತು?

(ಬಾವಿ, ಕೊಳವೆಬಾವಿ, ನಲ್ಲಿ, ಸಾರ್ವಜನಿಕ ನಲ್ಲಿ,
ಜಲ ಶುದ್ಧೀಕರಣ ಕೇಂದ್ರ ಇತ್ಯಾದಿಗಳಿಂದ)

**ಆಹಾರ:** ಮನುಷ್ಯನಿಗೆ ಬದುಕಲು ನೀರಿನ ಜೊತೆಗೆ ಆಹಾರವೂ ಅವಶ್ಯಕವಾಗಿರುತ್ತದೆ. ಎಲ್ಲರಿಗೂ ಸಾಕಷ್ಟು ಮತ್ತು ಪೌಷ್ಟಿಕ ಆಹಾರ ಸಿಗಬೇಕು. ಹಾಗೆಯೇ ಆಹಾರ ವ್ಯರ್ಥವಾಗಬಾರದು ಎಂಬುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.



**ಹೇಳಿರಿ ನೋಡೋಣ!**

- ನೀವು ಪ್ರತಿದಿನದ ಊಟದಲ್ಲಿ ಯಾವ ಆಹಾರ ಪದಾರ್ಥಗಳನ್ನು ತಿನ್ನುತ್ತೀರಿ?
- ಆ ಪದಾರ್ಥಗಳು ನಿಮಗೆ ಯಾವುದರಿಂದ ಸಿಗುತ್ತವೆ?
- ಮನೆಯಲ್ಲಿರುವ ಎಲ್ಲರಿಗೂ ಆಹಾರ ಸಾಕಷ್ಟು ಇದೆ ಎಂದು ಹೇಗೆ ಕಾಳಜಿ ತೆಗೆದುಕೊಳ್ಳಿರಿ.



**ನಿಮಗೆ ಮೇಲಿನ ಯಾವ ಸ್ಥಳದಲ್ಲಿ ವಾಸಿಸಲು ಇಷ್ಟವಾಗುತ್ತದೆ? ಏಕೆ?**

**ಹವೆ :** ಉತ್ತಮ ಆರೋಗ್ಯಕ್ಕಾಗಿ 'ಶುದ್ಧ ಹವೆ'ಯು ಮುಖ್ಯವಾದ ಅವಶ್ಯಕತೆಯಾಗಿದೆ. 'ಶುದ್ಧ ಹವೆಯಲ್ಲಿ' ಉಸಿರಾಡುವುದರಿಂದ ದೇಹ ಮತ್ತು ಮನಸ್ಸು ಆರೋಗ್ಯಕರವಾಗಿರುತ್ತದೆ. ಪುಪ್ಪುಸದ ಆರೋಗ್ಯವೂ ಚೆನ್ನಾಗಿರುತ್ತದೆ. ನಮಗೆ ನಡೆದಾಡಲು, ಓಡಾಡಲು, ದೈನಂದಿನ ಕೆಲಸಗಳನ್ನು ಮಾಡಲು ಉತ್ಸಾಹ ಬರುತ್ತದೆ. ಕೆಲವೊಮ್ಮೆ ಹವೆಯಲ್ಲಿ ವಾಹನಗಳು ಬಿಡುವ ಹೊಗೆ, ಕಾರಖಾನೆಗಳ ಹೊಗೆ, ಧೂಳಿನ ಕಣಗಳು ಬೆರೆಯುತ್ತವೆ. ಇದರಿಂದ ಹವೆ ಅಶುದ್ಧವಾಗುತ್ತದೆ. ಇದರಿಂದ ನಮ್ಮ ಆರೋಗ್ಯಕ್ಕೆ ಹಾನಿಯಾಗುತ್ತದೆ.

**ಹೇಳಿರಿ ನೋಡೋಣ!**

- ನಿಮ್ಮ ಪರಿಸರದಲ್ಲಿಯ ಹವೆ ಶುದ್ಧವಾಗಿದೆಯೇ?
- ಹವೆಯನ್ನು ಶುದ್ಧವಾಗಿಡಲು ಯಾವ ಕ್ರಮಗಳನ್ನು ಕೈಕೊಳ್ಳಲಾಗುತ್ತದೆ?

**ಬಟ್ಟೆ :** ಬಿಸಿಲು, ಗಾಳಿ ಮಳೆಯಿಂದ ದೇಹವನ್ನು ರಕ್ಷಿಸಲು ಬಟ್ಟೆಯ ಅವಶ್ಯಕತೆ ಇದೆ. ಬೇರೆ ಬೇರೆ ಋತುಗಳಲ್ಲಿ ನಾವು ಬೇರೆ ಬೇರೆ ರೀತಿಯ ಬಟ್ಟೆಗಳನ್ನು ಧರಿಸುತ್ತೇವೆ. ಅವಶ್ಯಕತೆಗನುಸಾರವಾಗಿ ಎಲ್ಲರಿಗೂ ಸಾಕಷ್ಟು ಬಟ್ಟೆಗಳು ಸಿಗುವುದು ಅಗತ್ಯ.

**ವಸತಿ :** ಎಲ್ಲರಿಗೂ ಸುರಕ್ಷಿತವಾದ ಆಸರೆ ಸಿಗುವುದು ಅಗತ್ಯ; ಏಕೆಂದರೆ ಆಸರೆಯಿಂದ ನಮಗೆ ರಕ್ಷಣೆ ಸಿಗುತ್ತದೆ. ಆಸರೆ ಎಂದರೆ ವಾಸಿಸುವ ಸ್ಥಳ. ನಮ್ಮ ಆಸರೆ ಎಂದರೆ ನಮ್ಮ ಮನೆ. ಅದಕ್ಕೆ ವಸತಿ ಎನ್ನುವರು. ನಾವು ಹಳ್ಳಿಯಲ್ಲಿ ವಾಸಿಸುತ್ತೇವೆಯೋ ಅಥವಾ ನಗರದಲ್ಲಿ; ನಾವು ವಾಸಿಸುವ ಸ್ಥಳದ ಹವಾಮಾನ ಹೇಗಿದೆ. ಅಲ್ಲಿ ಯಾವ ಸಾಧನಗಳು ಲಭ್ಯ ಇವೆ ಎನ್ನುವುದರ ಮೇಲೆ ನಮ್ಮ ಮನೆ ಹೇಗೆ ಇರಬೇಕು ಎಂಬುದು ನಿರ್ಧಾರವಾಗುತ್ತದೆ.




**ಆರೋಗ್ಯ :** ಒಳ್ಳೆಯ ರೂಢಿಗಳು ಹಾಗೂ ಉತ್ತಮ ಆಹಾರದಿಂದ ಆರೋಗ್ಯ ಚೆನ್ನಾಗಿರುತ್ತದೆ. ನಿಯಮಿತ ವ್ಯಾಯಾಮ ಮತ್ತು ಯೋಗ-ಪ್ರಾಣಾಯಾಮ ನಮಗೆ ಆರೋಗ್ಯಕರವಾಗಿರಲು ಸಹಾಯ ಮಾಡುತ್ತವೆ. ನಮ್ಮ ಆರೋಗ್ಯ ಉತ್ತಮವಾಗಿದ್ದರೆ ಮಾತ್ರ ನಾವು ದೈನಂದಿನ ಕೆಲಸಗಳನ್ನು ಮಾಡಬಹುದು. ಸ್ವಂತದ ಮತ್ತು ನಮ್ಮ ಕುಟುಂಬದಲ್ಲಿರುವ ಸದಸ್ಯರ ಬಗ್ಗೆ ಕಾಳಜಿ ವಹಿಸಬಹುದು. ವಿವಿಧ ಕಾರಣಗಳಿಂದ ಜನರಿಗೆ ಕಾಯಿಲೆಗಳು ಬರಬಹುದು. ಅಂತಹ ಸಮಯದಲ್ಲಿ ಸರಿಯಾದ ಚಿಕಿತ್ಸೆ ಮತ್ತು ಔಷಧಿಗಳು ಸಿಗುವುದು ಅಗತ್ಯವಾಗಿರುತ್ತದೆ. ಅದಕ್ಕಾಗಿ, ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ

ಕೇಂದ್ರಗಳಿರುತ್ತವೆ. ನಗರಗಳಲ್ಲಿ ಸಣ್ಣ-ದೊಡ್ಡ ಆಸ್ಪತ್ರೆಗಳಿರುತ್ತವೆ. ಎಲ್ಲ ಜನರಿಗೆ ಅವರ ಅಗತ್ಯಗಳಿಗೆ ಅನುಗುಣವಾಗಿ ಔಷಧೋಪಚಾರ ಮಾಡಲಾಗುತ್ತದೆ.

**ನಿಮಗೆ ಏನು ಅನಿಸುತ್ತದೆ?**

ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಏನು ಮಾಡಬಹುದು?

**ಶಿಕ್ಷಣ :** ಸಮಾಜದಲ್ಲಿಯ ಎಲ್ಲರಿಗೂ 'ಶಿಕ್ಷಣ'ದ ಅವಶ್ಯಕತೆ ಇರುತ್ತದೆ. ಶಿಕ್ಷಣ ಎಲ್ಲರಿಗೂ ತಲುಪಿಸಲು ಸರಕಾರ ವಿವಿಧ ಯೋಜನೆಗಳನ್ನು ರೂಪಿಸುತ್ತದೆ. ಶಿಕ್ಷಣದಿಂದ ನಮಗೆ ಅನೇಕ ಸಂಗತಿಗಳು ಅರ್ಥವಾಗುತ್ತವೆ. ಶಿಕ್ಷಣದಿಂದ ಯೋಚಿಸುವುದು, ಸಮಸ್ಯೆಗಳನ್ನು ಪರಿಹರಿಸುವುದು, ಹೊಸ ವಿಷಯಗಳನ್ನು ರಚಿಸುವುದು ಇತ್ಯಾದಿಗಳನ್ನು ಸಾಧಿಸಬಹುದು.

ಮಾನವನಿಗೆ ಆಹಾರ, ಬಟ್ಟೆ, ವಸತಿ, ಆರೋಗ್ಯ ಮತ್ತು ಶಿಕ್ಷಣ ಇವು ಮೂಲಭೂತ ಅವಶ್ಯಕತೆಗಳು ಜೀವನವನ್ನು ಉತ್ತಮ ರೀತಿಯಲ್ಲಿ ನಡೆಸಲು ಪ್ರತಿಯೊಬ್ಬರಿಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸಬೇಕು.

**ಹೇಳಿರಿ ನೋಡೋಣ!**

- ನಿಮ್ಮ ಬಗ್ಗೆ, ನಿಮ್ಮ ಕುಟುಂಬದ ಬಗ್ಗೆ, ನಿಮ್ಮ ಪರಿಸರದ ಬಗ್ಗೆ ಯೋಚಿಸಿ. ಅದರಿಂದ ನಿಮಗೆ ಬೇರೆ ಏನಾದರೂ ಅಗತ್ಯಗಳು ಅನಿಸುತ್ತಿವೆಯೇ?
- ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಇರುವ ಒಳ್ಳೆಯ ಸುವಿಚಾರಗಳನ್ನು ಹೇಳಿರಿ.

**ಸ್ವಚ್ಛತಾ ಕಾರ್ಮಿಕರು, ವೈದ್ಯರು, ಶಿಕ್ಷಕರು, ರೈತರು, ಪೊಲೀಸರು, ಸೈನಿಕರಿಂದ ನಮ್ಮ ಯಾವ ಅಗತ್ಯಗಳು ಪೂರೈಸಲ್ಪಡುತ್ತವೆ?**

**ನೈಸರ್ಗಿಕ ಸಂಪನ್ಮೂಲಗಳು :** ಸಂಪನ್ಮೂಲಗಳು ಎಂದರೆ ನಮ್ಮ ಸುತ್ತಮುತ್ತಲಿನ ಎಲ್ಲಾ ಅಂಶಗಳು ಅವು ನಮಗೆ ಉಪಯುಕ್ತವಾಗಿವೆ ಮತ್ತು ಅವುಗಳನ್ನು ಬಳಸಿಕೊಂಡು ನಾವು ನಮ್ಮ ಜೀವನವನ್ನು ಉತ್ತಮಗೊಳಿಸಬಹುದು.

ಅವಶ್ಯಕತೆಗಳನ್ನು ಪೂರ್ಣಗೊಳಿಸುವ ಸಲುವಾಗಿ ಸಂಪನ್ಮೂಲಗಳ ಅಗತ್ಯ ಇರುತ್ತದೆ. ಪ್ರಕೃತಿಯಿಂದ ದೊರೆಯುವ ಮತ್ತು ನಮ್ಮ ಪರಿಸರದಲ್ಲಿರುವ ವಸ್ತುಗಳನ್ನು ನಾವು ನಮ್ಮ ಅಗತ್ಯಗಳನ್ನು ಪೂರೈಸಲು ಬಳಸುತ್ತೇವೆ. ಆ ವಸ್ತುಗಳನ್ನು 'ನೈಸರ್ಗಿಕ ಸಂಪನ್ಮೂಲಗಳು' ಎಂದು ಕರೆಯುತ್ತಾರೆ. ಉದಾಹರಣೆಗೆ ನೀರು ಈ ನೈಸರ್ಗಿಕ ಸಂಪನ್ಮೂಲವನ್ನು ನಾವು ಮಿತವಾಗಿ, ಎಚ್ಚರಿಕೆಯಿಂದ ಬಳಸಬೇಕು.

ಮಾನವ ನಿರ್ಮಿತಸಂಪನ್ಮೂಲಗಳಲ್ಲಿ ಹಣ, ಆಸ್ತಿ, ಸಾರಿಗೆ ಸಾಧನಗಳು, ಯಂತ್ರಗಳು ಇತ್ಯಾದಿಗಳ ಸಮಾವೇಶ ಆಗುತ್ತವೆ.



ಮಾನವ ನಿರ್ಮಿತ, ನೈಸರ್ಗಿಕ ಸಂಪನ್ಮೂಲಗಳನ್ನು ಗುರುತಿಸಿರಿ.

## ನಮ್ಮ ಸಮಸ್ಯೆಗಳು

ನಾವು ನಮ್ಮ ಅವಶ್ಯಕತೆಗಳನ್ನು ತಿಳಿದುಕೊಂಡೆವು. ಈಗ ನಾವು ನಮ್ಮ ಸಮಸ್ಯೆಗಳು ತಿಳಿದುಕೊಳ್ಳೋಣ. ಸಮಸ್ಯೆಗಳು ಎಂದರೆ ನಮ್ಮ ದೈನಂದಿನ ಜೀವನದಲ್ಲಿ ಬರುವ ವಿವಿಧ ಅಡಚಣೆಗಳು ಹೌದು. ಮನುಷ್ಯನಿಗೆ ಉತ್ತಮ ಪ್ರಕಾರವಾಗಿ ಜೀವನ ಸಾಗಿಸಲು ಅವಶ್ಯಕವಾಗಿರುವ ಎಲ್ಲ ಸಂಗತಿಗಳು ಸಹಜವಾಗಿ ದೊರೆಯದಿದ್ದರೆ ಅದಕ್ಕೆ ಸಮಸ್ಯೆ ಎನ್ನುವರು.

ಜಗನನ ಊರಿನಲ್ಲಿ ನೀರಿನ ಕೊರತೆ ಇದೆ. ನೀರಿನ ಟಂಕಿಯಲ್ಲಿ ನೀರು ಇಲ್ಲ. ನದಿಗಳು ಬತ್ತಿ ಹೋಗಿದೆ. ಭಾವಿಗಳು ಕೂಡ ಬತ್ತಿಹೋಗಿವೆ. ಕೆರೆಗಳಲ್ಲಿಯ/ಆಣೆಕಟ್ಟಿನಲ್ಲಿಯ ನೀರಿನ ಮಟ್ಟ ತುಂಬಾ ಕೆಳಗೆ ಹೋಗಿದೆ. ಇವನ ಊರಿನಲ್ಲಿಯ ಜನರಿಗೆ ಉಪಯೋಗಿಸಲು ನೀರು ದೊರೆಯುತ್ತಿಲ್ಲ. ಇವನ ಊರಿನಲ್ಲಿ ಜನರಿಗೆ ಬೇಕಾಗುವಷ್ಟು ನೀರು ದೊರೆಯುತ್ತಿಲ್ಲ ಇದು ಒಂದು ಸಮಸ್ಯೆ ಇದೆ.

ಅನ್ನ ಕೊರತೆಯದು ಇದು ಒಂದು ಸಮಸ್ಯೆಯಾಗಿದೆ. ಅದರ ಕಾರಣಗಳು ಮುಂದಿನಂತೆ ಇರಬಹುದು. ಉದಾಹರಣೆ, ಹೆಚ್ಚು ಮಳೆ ಬಂದರೆ (ಹಸಿಬರ), ಒಣ ಬರ, ಹೊಲವು/ಭೂಮಿಯು ಕಡಿಮೆ ಪ್ರಮಾಣದಲ್ಲಿ ಇರುವುದು. ಬೆಲೆಏರಿಕೆ, ಯುದ್ಧ ಇತ್ಯಾದಿ.



**ವಿಚಾರ ಮಾಡಿರಿ.**

ನಿಮ್ಮ ಪರಿಸರದಲ್ಲಿಯ ಯಾವ ಯಾವ ಸಮಸ್ಯೆಗಳಿವೆ? ಅವುಗಳ ಮೇಲೆ ಯಾವ ಉಪಾಯ ಮಾಡಲು ಬರುತ್ತದೆ?









ಮೇಲಿನ ಚಿತ್ರಗಳಲ್ಲಿ ನಿಮಗೆ ಯಾವ-ಯಾವ ಸಮಸ್ಯೆಗಳು ಕಾಣಿಸುತ್ತಿವೆ? ಆ ಸಮಸ್ಯೆಗಳಿಂದ ನಿಮ್ಮ ದೈನಂದಿನ ಜೀವನದಲ್ಲಿ ಯಾವ ತೊಂದರೆಗಳು ಎದುರಾಗುತ್ತವೆ?

## ಸಾಮಾಜಿಕ ಪ್ರಶ್ನೆಗಳು ಮತ್ತು ಸೌಲಭ್ಯಗಳು



ಹುಟ್ಟಿನಿಂದ ಬಂದ ಕಾಯಿಲೆ ಅಥವಾ ಅಪಘಾತಗಳಿಂದಾಗಿ ನಮ್ಮಲ್ಲಿ ಕೆಲವರಿಗೆ ದೈಹಿಕ ಅಂಗವೈಕಲ್ಯ ಬರುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುವಾಗ ಅವರು ಅನೇಕ ತೊಂದರೆಗಳನ್ನು ಮತ್ತು ಅನಾನುಕೂಲತೆಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ, ಅವರಿಗೆ ವಿಶೇಷ ಸೇವೆಗಳು, ಸೌಲಭ್ಯಗಳು ಮತ್ತು ಸಹಾಯದ ಅವಶ್ಯಕತೆಗಳು ಇರುತ್ತವೆ.



### ಹೇಳಿರಿ ನೋಡೋಣ!

ರಸ್ತೆಯ ಮೇಲೆ ಹೋಗುವಾಗ ಕೈಯಲ್ಲಿ ಒಂದು ಬಿಳಿ ಊರುಗೋಲು ಹಿಡಿದುಕೊಂಡು ಒಬ್ಬ ದೃಷ್ಟಿಹೀನ ವ್ಯಕ್ತಿ ನಡೆದುಕೊಂಡು ಹೋಗುತ್ತಿದ್ದಾನೆ. ಈ ಪ್ರಸಂಗದಲ್ಲಿ ನೀವು ಏನು ಮಾಡುವಿರಿ?

ಬಿಳಿ ಊರುಗೋಲಿನ ಸಹಾಯದಿಂದ ದೃಷ್ಟಿಹೀನ ವ್ಯಕ್ತಿಗಳು ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ತಿರುಗಾಡಬಹುದು. ಸ್ಪರ್ಶ ಲಿಪಿಯನ್ನು (ಬ್ರೈಲ್ ಲಿಪಿ) ಬಳಸಿ ಅವರು ಓದು-ಬರಹ ಮತ್ತು ಗಣಿತ ಕ್ರೀಯೆಗಳನ್ನು ಸಹ ಮಾಡಬಹುದು.




ಬ್ರೈಲ್ ಲಿಪಿ



## ಹೇಳಿರಿ ನೋಡೋಣ!

ಶಾಲೆಯ ಮೆಟ್ಟಲುಗಳ ಪಕ್ಕದಲ್ಲಿ ಇಳಿಜಾರು ಪಟ್ಟಿ (ರ್‍ಯಾಂಪ್) ಯಾವುದರ ಸಲುವಾಗಿ ಇರುತ್ತದೆ?



ಹುಟ್ಟಿನಿಂದ ಅಥವಾ ಅಪಘಾತದಿಂದ ಕೆಲವೊಮ್ಮೆ ಆ ವ್ಯಕ್ತಿಯ ಕಾಲು ನಿಷ್ಕ್ರೀಯವಾಗುತ್ತದೆ. ಅಂತಹ ಸಮಯದಲ್ಲಿ ಆ ವ್ಯಕ್ತಿಗೆ ಮೆಟ್ಟಿಲುಗಳನ್ನು ಹತ್ತುವುದು ಇಳಿಯುವುದು ಸಾಧ್ಯವಾಗುವುದಿಲ್ಲ ಅದಕ್ಕಾಗಿ ರ್‍ಯಾಂಪದ ಉಪಯೋಗ ಮಾಡಲಾಗುತ್ತದೆ. ರ್‍ಯಾಂಪಿನಿಂದ ಚಕ್ರದ ಖುರ್ಚಿ ಬಳಸುವ ವ್ಯಕ್ತಿಗಳಿಗೆ ಕಟ್ಟಡದಲ್ಲಿ ಒಳಗೆ ಬರಲು ಹೊರಗೆ ಹೋಗಲು ಸಾಧ್ಯವಾಗುತ್ತದೆ. ಚಕ್ರದ ಖುರ್ಚಿ ಬಳಸುವವರಿಗಾಗಿ ವಿಶೇಷ ರೀತಿಯ ಶೌಚಾಲಯಗಳ ಸೌಲಭ್ಯವೂ ಕೆಲವು ಕಡೆ ಇರುತ್ತವೆ.

## ಹೇಳಿರಿ ನೋಡೋಣ!

ಸಾಂಕೇತಿಕ ಚಿಹ್ನೆಗಳ ಭಾಷೆ ನಿಮಗೆ ಮಾಹಿತಿ ಇದೆಯೆ?

ಕಿವುಡ ಮತ್ತು ಮೂಕ ವ್ಯಕ್ತಿಗಳಿಗೆ ಚಿಹ್ನೆಗಳ ಭಾಷೆ ಇರುತ್ತದೆ. ಮಾತನಾಡುವ ವ್ಯಕ್ತಿಗಳ ತುಟಿಗಳ ಚಲನೆ ಮತ್ತು ಹಾವಭಾವಗಳನ್ನು ನೋಡಿ ಮಾತನಾಡುವುದನ್ನು ಅರ್ಥಮಾಡಿಕೊಳ್ಳುವ ತಂತ್ರ ಅವರಿಗೆ ತಿಳಿದಿರುತ್ತದೆ. ಕಿವುಡ ಮತ್ತು ಮೂಕ ವ್ಯಕ್ತಿಗಳಿಗಾಗಿ ಸಾಂಕೇತಿಕ ಚಿಹ್ನೆಗಳ ವಿಶೇಷ ಸುದ್ದಿಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡಲಾಗುತ್ತದೆ.

ದಿವ್ಯಾಂಗ ವ್ಯಕ್ತಿಗಳಿಗೆ ಅಡೆತಡೆಯಿಲ್ಲದ ವಾತಾವರಣವನ್ನು ಸೃಷ್ಟಿಸುವುದು ಅವಶ್ಯಕ. ಅವರಿಗೆ ಶಾಲೆ, ವಿವಿಧ ಕಚೇರಿಗಳು, ಸಾರ್ವಜನಿಕ ಕಟ್ಟಡಗಳು, ಆರೋಗ್ಯ ಕೇಂದ್ರಗಳು, ಮನರಂಜನೆಯ ಕೇಂದ್ರಗಳು ಇತ್ಯಾದಿ ಸ್ಥಳಗಳಲ್ಲಿ ಸುಲಭವಾಗಿ ತಿರುಗಾಡಲು- ಓಡಾಡಲು ವಿವಿಧ ಸೌಲಭ್ಯಗಳನ್ನು ಒದಗಿಸಲು ಸರಕಾರ ಪ್ರಯತ್ನಿಸುತ್ತಿರುತ್ತದೆ.

- **ಪಠ್ಯಪುಸ್ತಕದ ಆರಂಭದಲ್ಲಿ ನೀಡಲಾದ QR ಕೋಡನಲ್ಲಿನ ಲಿಂಕಿನಿಂದ ಸಾಂಕೇತಿಕ ಭಾಷೆಯನ್ನು ತಿಳಿದುಕೊಳ್ಳಿರಿ.**




ಸಾಂಕೇತಿಕ ಚಿಹ್ನೆಗಳ ಭಾಷೆ

## ನಿಮಗೆ ಇದು ಗೊತ್ತಿದೆಯೇ?



**ಮುರಲಿಕಾಂತ ಪೇಟಕರ್ :** ಇವರು ಮೂಲತಃ ಸಾಂಗಲಿಯ ನಿವಾಸಿ. ಆಗಸ್ಟ 1972ರಲ್ಲಿ ಜರ್ಮನಿಯ ಹೆಡಲ್‌ಬರ್ಗ್‌ನಲ್ಲಿ ಪ್ಯಾರಾಓಲಿಂಪಿಕ್ಸ್ ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಅವರು ವಿಶ್ವ ದಾಖಲೆಯನ್ನು ಸ್ಥಾಪಿಸಿರು. ಅದೇ ಪ್ರಕಾರ ಮುರಲಿಕಾಂತ ಪೇಟಕರ್ ನಮ್ಮ ದೇಶಕ್ಕಾಗಿ ಚಿನ್ನದ ಪದಕವನ್ನು ಗೆದ್ದರು. ಅವರಿಗೆ 2018ರಲ್ಲಿ 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಮುರಲಿಕಾಂತ ಪೇಟಕರ್ ಭಾರತೀಯ ಸೇನಾಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. 1965ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಗುಂಡೇಟು ತಗಲಿ ಗಾಯಗೊಂಡಿದ್ದರು. ಇದರಿಂದ ಅವರಿಗೆ ಅಂಗವೈಕಲ್ಯ ಉಂಟಾಯಿತು. ಆದರೂ ಅವರು ಬಾಕ್ಸಿಂಗ್, ಜಾವೆಲಿನ್ ಥ್ರೋ ಶಾಟ್-ಪುಟ್‌ನಂತಹ ಕ್ರೀಡೆಗಳಲ್ಲಿಯೂ ವಿಶೇಷ ಪ್ರಾವೀಣ್ಯತೆಯನ್ನು ಗಳಿಸಿದ್ದರು.



**ಶೀತಲದೇವಿ :** ಶೀತಲದೇವಿ ಇವರು ಜಮ್ಮು ಮತ್ತು ಕಾಶ್ಮೀರ ರಾಜ್ಯದವರು. ಅವರು ದಿವ್ಯಾಂಗ ವ್ಯಕ್ತಿಗಳಿಗಾಗಿ ಆಯೋಜಿಸಲಾದ ಅನೇಕ ಸ್ಪರ್ಧೆಗಳಲ್ಲಿ 'ಆರ್ಚರಿ' (ಬಿಲ್ಲುಗಾರಿಕೆ) ಕ್ರೀಡಾ ಪ್ರಕಾರದಲ್ಲಿ ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಅವರ ಈ ವಿಶೇಷ ಸಾಧನೆಗಾಗಿ ಭಾರತ ಸರಕಾರವು ಅವರಿಗೆ 'ಅರ್ಜುನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

## ಸ್ವಾಧ್ಯಾಯ

**ಪ್ರ.1 ಬಿಟ್ಟ ಸ್ಥಳದಲ್ಲಿ ಯೋಗ್ಯ ಪರ್ಯಾಯ ಉತ್ತರವನ್ನು ಹಾಕಿ ಬರೆಯಿರಿ.**

(ಅ) ಕುಡಿಯುವ ನೀರನ್ನು ............... ಇಲ್ಲಿ ಶುದ್ಧೀಕರಿಸಲಾಗುತ್ತದೆ.

(1) ಕೊಳವೆ ಬಾವಿ (2) ಜಲಶುದ್ಧೀಕರಣ ಕೇಂದ್ರ

(3) ನೀರಿನ ಟಾಕಿ (4) ಕಾರಖಾನೆ

(ಆ) ಗ್ರಾಮದಲ್ಲಿ ವೈದ್ಯಕೀಯ ಚಿಕಿತ್ಸೆ ................ ಈ ಸ್ಥಳದಲ್ಲಿ ಲಭ್ಯವಿದೆ.

(1) ಗ್ರಾಮ ಪಂಚಾಯತಿ (2) ಬ್ಯಾಂಕ್

(3) ಪ್ರಾಥಮಿಕ ಆರೋಗ್ಯ ಕೇಂದ್ರ (4) ಶಾಲೆ

(ಇ) ನೈಸರ್ಗಿಕ ಸಂಪನ್ಮೂಲಗಳನ್ನು ನಾವು ............... ಬಳಸಬೇಕು.

(1) ಬೇಕಾದಷ್ಟು (2) ಹೇರಳವಾಗಿ

(3) ಕೆಲವೊಮ್ಮೆ (4) ಮಿತವಾಗಿ

**ಪ್ರ.2 ಕೆಳಗಿನ ವಿಧಾನಗಳಿಗೆ ಸರಿಯಾದ ಕಾರಣ ಬರೆಯಿರಿ.**

(1) ದೇಶದಲ್ಲಿ ಕೆಲವೊಮ್ಮೆ ಆಹಾರದ ಕೊರತೆ ಉಂಟಾಗಬಹುದು.

(2) ನಮ್ಮ ಇಷ್ಟಗಳಿಗೆ ಕಡಿವಾಣ ಹಾಕುವುದು ಅವಶ್ಯಕವಾಗಿದೆ.

(3) ನೀರನ್ನು 'ಜೀವನ' ಎಂದು ಕರೆಯುತ್ತಾರೆ.

**ಪ್ರ.3 ಕೆಳಗೆ ಕೆಲವು ವಿಧಾನಗಳನ್ನು ಕೊಡಲಾಗಿದೆ. ಅವುಗಳನ್ನು ಓದಿ ಅದರಿಂದಾಗುವ ಪ್ರಯೋಜನಗಳನ್ನು ಬರೆಯಿರಿ.**

(1) ಆಹಾರ ವ್ಯರ್ಥ ಮಾಡದಿರುವುದು ಇದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

(2) ಎಲ್ಲರಿಗೂ ಸುರಕ್ಷಿತ ವಸತಿ ಸಿಗುವುದು ಅವಶ್ಯಕವಾಗಿರುತ್ತದೆ.

(3) ಎಲ್ಲರ ಆರೋಗ್ಯ ಉತ್ತಮವಾಗಿರುವುದು ಅವಶ್ಯಕವಾಗಿರುತ್ತದೆ.

(4) ಸಮಾಜದಲ್ಲಿಯ ಎಲ್ಲ ಜನರಿಗೂ ಶಿಕ್ಷಣ ಸಿಗಬೇಕು.

**ಪ್ರ.4 ಕೆಳಗಿನ ಸಂಕಲ್ಪನಾ ಚಿತ್ರವನ್ನು ಪೂರ್ಣ ಮಾಡಿರಿ.**




**ಪ್ರ.5 ಕೆಳಗಿನ ಪ್ರಸಂಗಗಳಲ್ಲಿ ನೀವು ಏನು ಮಾಡುತ್ತೀರಿ?**

(1) ಮದುವೆಯ ಸಮಾರಂಭದಲ್ಲಿ ಜನರು ಆಹಾರವನ್ನು ವ್ಯರ್ಥ ಮಾಡುತ್ತಿದ್ದಾರೆ.

(2) ದಿವ್ಯಾಂಗ ವ್ಯಕ್ತಿಯು ರಸ್ತೆಯನ್ನು ದಾಟುತ್ತಿದ್ದಾನೆ.

(3) ನೆರಮನೆಯ ರಮೇಶನು ನಿಯಮಿತವಾಗಿ ಶಾಲೆಗೆ ಹೋಗುವುದಿಲ್ಲ.

(4) ಕವಿತಾ ಯಾವಾಗಲೂ ಇಷ್ಟಪಟ್ಟು ತಂಪು ಪಾನೀಯವನ್ನು ಕುಡಿಯುತ್ತಾಳೆ.

**ಪ್ರ.6 ಅಂತರರಾಷ್ಟ್ರೀಯ ಯೋಗ ದಿನವನ್ನು ನಿಮ್ಮ ಶಾಲೆಯಲ್ಲಿ ಹೇಗೆ ಆಚರಿಸಲಾಗುತ್ತದೆ? ಎಂಬುದನ್ನು ಹೇಳಿರಿ.**

**ಉಪಕ್ರಮ**

- ವಿವಿಧ ಋತುಗಳಲ್ಲಿ ಯಾವ ಬಟ್ಟೆಗಳನ್ನು ಬಳಸುತ್ತಾರೆ ಅವುಗಳ ಚಿತ್ರಗಳನ್ನು ವಹಿಯಲ್ಲಿ ಅಂಟಿಸಿ ಅವುಗಳ ಕೆಳಗೆ ಹೆಸರು ಬರೆಯಿರಿ.
- ದಿವ್ಯಾಂಗ ವ್ಯಕ್ತಿಗಳಿಗೆ ಸರಕಾರದಿಂದ ಯಾವ ಸೌಲಭ್ಯಗಳು ಸಿಗುತ್ತವೆ ಎಂಬುದನ್ನು ಪೋಷಕರ ಸಹಾಯದಿಂದ ಬರೆಯಿರಿ.
- ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾರತದ ಅಂಗವಿಕಲರ ಕ್ರೀಡಾಪಟುಗಳ ಸಾಧನೆಯ ಬಗ್ಗೆ ಅಂತರ್ಜಾಲ (ಇಂಟರ್‌ನೇಟ್) ಸಹಾಯದಿಂದ ಮಾಹಿತಿ ಪಡೆಯಿರಿ.



**21 ಜೂನ – ಅಂತರರಾಷ್ಟ್ರೀಯ ಯೋಗ ದಿನ**

***

# 6. ನೀರಿನ ಸಾಕ್ಷರತೆ



ಹನಿ ಹನಿ ನೀರಿನ್ನು ಇಲ್ಲಿ
ನೆಲದಲ್ಲಿ ಇಂಗಿಸೋಣ
ಜಲವೇ ನಿಜವಾದ ಸಂಪತ್ತು
ಸಾಕ್ಷರತೆಯ ಪಾಠ ಕಲಿಯೋಣ ।।

ಜಲ ಎಂದರೆ ನೀರು. ಜಲ ಸಾಕ್ಷರತೆ ಎಂದರೆ ನೀರಿನ ಮಹತ್ವವನ್ನು ಅರ್ಥಮಾಡಿಕೊಳ್ಳುವುದು, ನೀರನ್ನು ಉಳಿಸುವುದು, ಅಂತರರ್ಜಲದ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುವುದು.

ಸಂತ ಜ್ಞಾನೇಶ್ವರರು 'ಜ್ಞಾನೇಶ್ವರಿ' ಈ ಗ್ರಂಥದಲ್ಲಿ ನೀರಿನ ಮಹತ್ವವನ್ನು ಹೇಳುವಾಗ ಹೀಗೆ ಹೇಳಿದ್ದಾರೆ.

''ನಗರಗಳು ರಚಿಸಿ । ಜಲಾಶಯ ನಿರ್ಮಿಸಿ
ಮಹಾವನಗಳು ಬೆಳೆಸಿ । ವಿಧ ವಿಧವಾಗಿ ।।''



ಸಂತ ಜ್ಞಾನೇಶ್ವರ

ಇದರ ಅರ್ಥ ನಗರಗಳನ್ನು ಸ್ಥಾಪಿಸುವಾಗ ಜಲಾಶಯಗಳನ್ನು ನಿರ್ಮಿಸಬೇಕು. ಮರಗಳನ್ನು ನೆಡಬೇಕು; ಎಂದರೆ ಆ ನಗರಗಳಿಗೆ ನೀರಿನ ಸಮಸ್ಯೆ ಬರುವುದಿಲ್ಲ.

ನಮಗೆ ಬದುಕುವ ಸಲುವಾಗಿ ನೀರು ಅವಶ್ಯಕವಾಗಿರುತ್ತದೆ. ನೀರಿನ ಮುಖ್ಯ ಮೂಲ ಮಳೆಯಾಗಿದೆ. ಮಳೆಯ ಪ್ರಮಾಣ ಎಲ್ಲ ಕಡೆಗೆ ಒಂದೇ ಪ್ರಮಾಣದಲ್ಲಿ ಇರುವುದಿಲ್ಲ. ಮಳೆ ಕೆಲವೆಡೆ ಕಡಿಮೆ, ಕೆಲವೆಡೆ ಹೆಚ್ಚು ಬೀಳುತ್ತದೆ. ಭಾರೀ ಮಳೆಯಿಂದ ಕೆಲವು ಕಡೆ ಪ್ರವಾಹ ಬಂದರೆ, ಕೆಲವು ಕಡೆ ಮಳೆ ಬಾರದೆ ಬರಗಾಲ ಬೀಳುತ್ತವೆ. ನೀರು ಎಲ್ಲರಿಗೂ ಸಿಗಬೇಕಾದರೆ ನೀರಿನ ಯೋಜನೆಗಳನ್ನು ಮಾಡಬೇಕಾಗುತ್ತದೆ.

### ನಿಮಗೆ ಇದು ಗೊತ್ತಿದೆಯೇ?

ಲಾತೂರ ನಗರದಲ್ಲಿ ತೀವ್ರ ನೀರಿನ ಕೊರತೆ ಉಂಟಾಗಿತ್ತು. ಆ ಸಮಯದಲ್ಲಿ ಸರಕಾರವು ರೈಲಿನ ಮೂಲಕ ನೀರನ್ನು ಸಾಗಿಸಿ ಅಲ್ಲಿ ನೀರಿನ ಪೂರೈಕೆ ಮಾಡಿತ್ತು.

ಭಾರತದಲ್ಲಿ ಪ್ರತಿ ವರ್ಷವೂ ಮಳೆ ಬೀಳುವ ನಿಗದಿತ ಅವಧಿ ಇರುತ್ತದೆ. ನಾವು ಅದಕ್ಕೆ 'ಮಳೆಗಾಲ' ಎಂದು ಕರೆಯುತ್ತೇವೆ. ಮಳೆಯ ನೀರನ್ನು ತಡೆದು ಉಪಯೋಗಿಸುವ ಸಲುವಾಗಿ ಸಂಗ್ರಹಿಸಿಡಲು, ನದಿಗೆ ಆಣೆಕಟ್ಟನ್ನು ಕಟ್ಟಲಾಗುತ್ತದೆ. ಆಣೆಕಟ್ಟಿನಲ್ಲಿರುವ ನೀರನ್ನು ಶುದ್ಧೀಕರಿಸಿ ನಳಗಳ ಮುಖಾಂತರ ಮನೆ ಮನೆಗೆ ನೀರನ್ನು ತಲುಪಿಸಲಾಗುತ್ತದೆ.

### ಹೇಳಿರಿ ನೋಡೋಣ!

* ನೀರಿನ ಉಳಿತಾಯ ಮಾಡಲು ನೀವು ಏನು ಮಾಡುತ್ತೀರಿ?

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ನೀರಿನ ವ್ಯವಸ್ಥಾಪನೆಗೆ ಮಹತ್ವ ನೀಡಲಾಗಿದೆ. ಸಿಂಧು ಸಂಸ್ಕೃತಿಯಲ್ಲಿ ಮನೆಯ ಅಂಗಳದಲ್ಲಿ ಬಾವಿಗಳಿದ್ದವು. ಅವುಗಳ ಮೂಲಕ ಕುಡಿಯುವ ನೀರು ಲಭ್ಯವಾಗುತ್ತಿತ್ತು. ಮುಂದೆ ಗೌತಮ ಬುದ್ಧನ ಕಾಲದಲ್ಲಿ ಸನ್ಯಾಸಿಗಳ ನಿವಾಸಕ್ಕಾಗಿ ಅನೇಕ ವಿಹಾರಗಳನ್ನು (ಗುಹೆಗಳನ್ನು) ನಿರ್ಮಿಸಲಾಯಿತು. ಪ್ರಯಾಣದ ಸಮಯದಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆಯಲು ಮತ್ತು ಮಳೆಗಾಲದಲ್ಲಿ ಕೆಲವು ದಿನಗಳ ಕಾಲ ಉಳಿಯಲು ಗುಹೆಗಳನ್ನು ಬಳಸಲಾಗುತ್ತಿತ್ತು. ಅಲ್ಲಿ ಮಳೆಯ ನೀರನ್ನು ಕುಡಿಯಲು ಸಂಗ್ರಹಿಸಲಾಗುತ್ತಿತ್ತು. ಅದನ್ನು 'ಜಲಪಾನ ಕೇಂದ್ರ' ಎಂದು ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಜುನ್ನರದ ಸುತ್ತಮುತ್ತ ತೋಡಲಾದ ವಿಹಾರಗಳಲ್ಲಿ ಇಂತಹ ಜಲಪಾನ ಕೇಂದ್ರಗಳು ಕಂಡುಬರುತ್ತವೆ. ಸಾಮ್ರಾಟ ಅಶೋಕನು ಬಾವಿಗಳನ್ನು ತೋಡಿಸಿದ್ದನು ಮತ್ತು ಯಾತ್ರಿಕರಿಗಾಗಿ ನೀರಿನ ವ್ಯವಸ್ಥೆಯನ್ನು ಮಾಡಿದ್ದನು.



ಶಿವನೇರಿ ಕೋಟೆಯ ಮೇಲಿನ ಜಲಪಾನ ಕೇಂದ್ರ

ಸಾತಾರಾ ಜಿಲ್ಲೆಯ ಮಾಣ ತಾಲ್ಲೂಕಿನಲ್ಲಿ ಶಿಖರ ಶಿಂಗಣಾಪೂರ ಎಂಬ ಸ್ಥಳವಿದೆ. ಇಲ್ಲಿ ಶಂಭುಮಹಾದೇವನ ದೇವಾಲಯವಿರುವ ಬೆಟ್ಟದ ಮೇಲೆ ನೀರಿನ ವ್ಯವಸ್ಥೆ ಇರಲಿಲ್ಲ. ಛತ್ರಪತಿ ಶಿವಾಜಿ ಮಹಾರಾಜರ ಅಜ್ಜ ಮಾಲೋಜಿರಾಜೆ ಭೋಸಲೆ ಇವರು ಅಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದರು.



ಶಿಖರ ಶಿಂಗಣಾಪೂರದ ಶಿವ ತೀರ್ಥ ಕೆರೆ (ಸಾಗರ)



ಗಂಗಾಸಾಗರ ಕೆರೆ – ರಾಯಗಡ ಕೋಟೆ

'ಕೋಟೆಯನ್ನು ನಿರ್ಮಿಸುವ ಮೊದಲು ನೀರಿನ ಉಗಮ ನೋಡಿ ಕೋಟೆಯನ್ನು ನಿರ್ಮಿಸಬೇಕು' ಎಂದು ಛತ್ರಪತಿ ಶಿವಾಜಿ ಮಹಾರಾಜರು ಹೇಳಿದ್ದರು. ಅಂದರೆ, ಕುಡಿಯುವ ನೀರು ಲಭ್ಯವಿರುವ ಸ್ಥಳದಲ್ಲಿಯೇ ಕೋಟೆಯನ್ನು ನಿರ್ಮಿಸಬೇಕು. ಛತ್ರಪತಿ ಶಿವಾಜಿ ಮಹಾರಾಜರು ರಾಯಗಡ ಕೋಟೆಯಲ್ಲಿ ನೀರಿಗಾಗಿ ಸಣ್ಣ ಮತ್ತು ದೊಡ್ಡ ಕೆರೆಗಳಲ್ಲಿ ಸಂಗ್ರಹಿಸುವ ವ್ಯವಸ್ಥೆಯನ್ನು ಮಾಡಿಸಿಕೊಂಡಿದ್ದರು. ಜಲಾಶಯಗಳನ್ನು ಸ್ವಚ್ಛವಾಗಿಡಬೇಕು. ಮತ್ತು ನೀರನ್ನು ಕಾಳಜಿಪೂರ್ವಕವಾಗಿ ಬಳಸಬೇಕು ಎಂದು ಅವರು ಹೇಳಿದ್ದರು.

ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳಕರ್ ಇವರು ಬಾವಿಗಳನ್ನು ತೋಡಿಸಿದರು, ಕೆರೆಗಳನ್ನು ಮತ್ತು ಕೊಳಗಳನ್ನು ನಿರ್ಮಿಸಿದರು. ಇದರಿಂದ ಎಲ್ಲರಿಗೂ ನೀರಿನ ವ್ಯವಸ್ಥೆಯಾಯಿತು. ದಾರಿಹೋಕರಿಗೆ ನೀರಿನ ವ್ಯವಸ್ಥೆ ಕಲ್ಪಿಸಲು ಜಲಪಾನ ಕೇಂದ್ರಗಳನ್ನು ಸ್ಥಾಪಿಸಿದರು. ಉದಾ. ಇಗತಪುರಿಯ ಟೋಪ ಬಾವಡಿ, ಜೇಜುರಿಯಲ್ಲಿಯ ಮಲ್ಹಾರ ಗೌತಮೇಶ್ವರ ಕೆರೆ ಇತ್ಯಾದಿಗಳು.



ಇಗತಪುರಿಯ ಟೋಪ ಬಾವಡಿ



ಜೇಜುರಿಯಲ್ಲಿಯ ಗೌತಮೇಶ್ವರ ಕೆರೆ




| --------------- | --------------- |
|---|---|

| --------------- | --------------- | --------------- | --------------- | --------------- |
|---|---|---|---|---|

**ಅಂತರ್ಜಲ ಸಂರಕ್ಷಣೆ :** ಮನೆಗಳ ಛಾವಣಿಗಳ ಮೇಲೆ, ಕಟ್ಟಡಗಳ ಮಹಡಿಯ ಮೇಲೆ, ಬೆಟ್ಟಗಳ ಮೇಲೆ ಮತ್ತು ಭೂಮಿಯ ಮೇಲೆ ಮಳೆಯ ನೀರು ಬೀಳುತ್ತದೆ. ಆ ನೀರನ್ನು ವ್ಯರ್ಥ ಮಾಡದೆ ನಿರ್ದಿಷ್ಟ ರೀತಿಯಲ್ಲಿ ಹೌದುಗಳಲ್ಲಿ ಸಂಗ್ರಹಿಸಲಾಗುತ್ತದೆ ಅಥವಾ ನೆಲದಲ್ಲಿ ಗುಂಡಿಗಳನ್ನು ತಯಾರಿಸಿ ಭೂಮಿಯಲ್ಲಿ ಇಂಗಿಸಲಾಗುತ್ತದೆ. ಇದರಿಂದ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಬಾವಿಗಳು ನೀರಿನಿಂದ ತುಂಬುತ್ತವೆ. ಗಿಡಗಳನ್ನು ನೆಡುವುದರಿಂದ ಮತ್ತು ಅವುಗಳನ್ನು ಸಂರಕ್ಷಿಸುದರಿಂದ ಮಣ್ಣಿನ ಸವಕಳಿ ನಿಲ್ಲುತ್ತದೆ. ಮರಗಳ ಬೇರುಗಳು ನೀರನ್ನು ಭೂಮಿಯಲ್ಲಿ ಇಂಗಿಸಲು ಸಹಾಯ ಮಾಡುತ್ತವೆ.



### ನಿಮಗೆ ಇದು ಗೊತ್ತಿದೆಯೇ?

'ವನರಾಯಿ' ಎಂಬ ಸ್ವಯಂ ಸೇವಾ ಸಂಸ್ಥೆಯನ್ನು ಮಾಜಿ ಕೇಂದ್ರಿಯ ಸಚೀವರಾದ ಮೋಹನ್ ಧಾರಿಯಾ ಇವರು ಪುಣೆಯಲ್ಲಿ ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಮೂಲಕ 'ವನರಾಯಿ' ಬಂಧಾರಾ' (ಸಣ್ಣ ಆಟೆಕಟ್ಟು/ತಡೆಗೋಡೆ) ನಿರ್ಮಿಸಲಾಗುತ್ತದೆ. ಇದು ಕಡಿಮೆ ಖರ್ಚಿನಲ್ಲಿ ನಿರ್ಮಿಸುವಂತಹ ಬಂಧಾರಾ ಇದೆ. ಹಳ್ಳ/ ಕಾಲುವೆಗಳಲ್ಲಿಯ ನೀರನ್ನು ತಡೆದು ಅಂತರ್ಜಲದ ಮಟ್ಟವನ್ನು ಹೆಚ್ಚಿಸಲು ಸಹಾಯವಾಗುತ್ತದೆ. ಇದು ಕೃಷಿ ಮತ್ತು ಕುಡಿಯುವ ನೀರಿಗೆ ಉಪಯುಕ್ತವಾಗಿದೆ.

**ನೀರಿನ ಉಳಿತಾಯ :** ಭೂಮಿಯ ಮೇಲೆ ಸಿಹಿ ನೀರಿನ ಮೂಲಗಳು ಸೀಮಿತವಾಗಿದೆ. ಮಳೆ ಎಲ್ಲೆಡೆ ಸಮಾನವಾಗಿ ಬೀಳುವುದಿಲ್ಲ. ಅದರ ಪ್ರಮಾಣ ಪ್ರತಿ ಸ್ಥಳದಲ್ಲಿ ಹೆಚ್ಚು ಅಥವಾ ಕಡಿಮೆ ಇರುತ್ತದೆ. ಜನಸಂಖ್ಯೆ ಹೆಚ್ಚಾಗುತ್ತಲಿದೆ. ಆದ್ದರಿಂದ ನೀರಿನ ಬೇಡಿಕೆಯೂ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ನೀರನ್ನು ಮಿತವಾಗಿ ಬಳಸುವುದು ಅಗತ್ಯ. ಅದರ ಜೊತೆಗೆ ಸಿಹಿ ನೀರಿನ ಮೂಲಗಳನ್ನು ಸ್ವಚ್ಛವಾಗಿಡುವುದು, ಜಲ ಮಾಲಿನ್ಯವನ್ನು ತಡೆಯುವುದು ಅವಶ್ಯಕವಾಗಿರುತ್ತದೆ.

## ನಿಮಗೆ ಇದು ಗೊತ್ತಿದೆಯೇ?

**ನೀರಿನ ಪುನರ್ ಬಳಕೆಯ ಕಾಲದ ಅಗತ್ಯತೆ :** ಸಾತಾರಾ ಜಿಲ್ಲೆಯಲ್ಲಿಯ ಜಕಾತವಾಡಿ ಎಂಬಲ್ಲಿ ಶೌಚಾಲಯಗಳಿಂದ ಹೊರಬರುವ ನೀರನ್ನು ಸೋಸಿ ಮತ್ತು ಶುದ್ಧೀಕರಣ ಪ್ರಕ್ರಿಯೆಗೆ ಒಳಪಡಿಸಿ ಅಲ್ಲಿನ ಹಣ್ಣಿನ ತೋಟಗಳಿಗೆ. ಹಿತ್ತಲ ತೋಟಗಳಿಗೆ ಮತ್ತು ಸ್ವಚ್ಛತೆಗಾಗಿ ಪುನರ್ ಬಳಕೆ ಮಾಡಲಾಗುತ್ತದೆ. ಇದರಿಂದ ನೀರನ್ನು ಪದೇ ಪದೇ ಬಳಸಬಹುದು. ನೀರಿನ ಮರುಬಳಕೆಯ ಪ್ರಕ್ರಿಯೆಯು ನಗರಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಕಂಡುಬರುತ್ತದೆ.

## ವಿಚಾರ ಮಾಡಿರಿ.

ನಿಮ್ಮ ಮನೆಯಲ್ಲಿ ಬಳಸಿದ ನೀರನ್ನು ಮರುಬಳಕೆ ಹೇಗೆ ಮಾಡುವಿರಿ?

**ನೀರನ್ನು ಉಳಿಸಲು ಉತ್ತಮ ಅಭ್ಯಾಸಗಳು–**

- ಅಗತ್ಯವಿರುವಷ್ಟು ಮಾತ್ರ ನೀರನ್ನು ಬಳಸಬೇಕು.
- ನಳಗಳನ್ನು ಸೋರುವ ಹಾಗೆ ಬಿಡಬೇಡಿ. ಸೋರುವ ನಳಗಳನ್ನು ದುರಸ್ತಿ ಮಾಡಬೇಕು.

ಜಲಶುದ್ಧೀಕರಣ ಎಂದರೆ ನೀರು ಶುದ್ಧ ಮಾಡುವದು. ನೀರು ವಿವಿಧ ಕಾರಣಗಳಿಂದ ದೂಷಿತವಾಗುತ್ತದೆ. ಅಂದರೆ ಅದರಲ್ಲಿ ಹಾನಿಕಾರಕ ಅಂಶಗಳು ಬೆರೆತಿರುತ್ತವೆ. ದೂಷಿತ ನೀರು ವೈಯಕ್ತಿಕ ಉಪಯೋಗದ ಸಲುವಾಗಿ, ಕೃಷಿಯ ಸಲುವಾಗಿ ಉಪಯೋಗಿಸಿದರೆ ಆರೋಗ್ಯಕ್ಕೆ ಹಾನಿಯುಂಟು ಮಾಡುತ್ತದೆ; ಆದರಿಂದ ಜಲಶುದ್ಧೀಕರಣ ಮಾಡುವದು ಅವಶ್ಯಕತೆಯಾಗಿದೆ.



ನೀರು ಪ್ರದೂಷಣೆ ಆಗುವ ಕಾರಣಗಳು

**ವಿಚಾರ ಮಾಡಿರಿ.**

* ನೀರು ದೂಷಿತ ಆಗುವ ಕಾರಣಗಳು ಯಾವುವು?
* ನೀರು ಶುದ್ಧ ಮಾಡುವ ಪದ್ಧತಿಗಳು ಯಾವುವು?



ಡಾ. ರಾಜೇಂದ್ರ ಸಿಂಗ

**ವಾಟರಮ್ಯಾನ ಆಫ್ ಇಂಡಿಯಾ :** (ಭಾರತದ ಜಲಪುರುಷ) ರಾಜಸ್ಥಾನದ ಮಾರವಾಡ ಈ ಪ್ರದೇಶದಲ್ಲಿ ಅಪರೂಪವಾಗಿ ಮಳೆ ಬೀಳುತ್ತದೆ. ಜನರಿಗೆ ದೈನಂದಿನ ಬಳಕೆಗೆ ಮತ್ತು ಕೃಷಿಗೆ ನೀರು ಸಿಗುವುದಿಲ್ಲ. ಡಾ. ರಾಜೇಂದ್ರ ಸಿಂಗ ಅವರು ಅದೇ ಪ್ರದೇಶದಲ್ಲಿ ಬೆಳೆದರು. ಅವರು ನೀರಿನ ಕೊರತೆಯನ್ನು ಅನುಭವಿಸಿದ್ದರು. ಇದಕ್ಕೆ ಪರಿಹಾರವಾಗಿ, ಅವರು 'ಜೋಹಾಡ' ಹೊಂಡಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಜೋಹಾಡಗಳು ಮಣ್ಣಿನ ಆಣೆಕಟ್ಟುಗಳಾಗಿವೆ. ಈ ಆಣೆಕಟ್ಟುಗಳು ಮಳೆನೀರನ್ನು ತಡೆದವು. ಆದ್ದರಿಂದ ಜೋಹಾಡ ಯೋಜನೆಯನ್ನು ಜಾರಿಗೆ ತಂದಲ್ಲೆಲ್ಲಾ ಆ ಭಾಗವು ಕಾಲ ಕಳೆದಂತೆ ಹಸಿರಿನಿಂದ ಕೂಡಿತು. ಈ ಕೆಲಸದಿಂದಾಗಿ, ಅವರು ನಂತರ 'ವಾಟರಮ್ಯಾನ ಆಫ್ ಇಂಡಿಯಾ' ಎಂದು ಪ್ರಸಿದ್ಧರಾದರು.



ಅಣ್ಣಾ ಹಜಾರೆ

ಮಹಾರಾಷ್ಟ್ರ ರಾಜ್ಯದ ಅಹಿಲ್ಯಾನಗರ ಜಿಲ್ಲೆಯ ರಾಳೆಗಣ ಸಿದ್ಧಿ ಗ್ರಾಮದಲ್ಲಿ ಅಣ್ಣಾ ಹಜಾರೆ ಮತ್ತು ಹಿವಾರೆ ಬಜಾರ ಗ್ರಾಮದಲ್ಲಿ ಪೊಪಟರಾವ ಪವಾರ ಇವರು ಹಳ್ಳಿಗಳಲ್ಲಿ ನೀರಿನ ಮಟ್ಟವನ್ನು ಹೆಚ್ಚಿಸಲು ವಿವಿಧ ಪ್ರಯತ್ನಗಳನ್ನು ಮಾಡಿದ್ದಾರೆ.



ಪೋಪಟರಾವ ಪವಾರ

**ಇದು ನಿಮಗೆ ಗೊತ್ತಿದೆಯೇ?**

* ಮಹಾರಾಷ್ಟ್ರದಲ್ಲಿ 10 ಮೇ ರಂದು 'ಜಲ ಸಂರಕ್ಷಣಾ ದಿನ' ಎಂದು ಆಚರಿಸಲಾಗುತ್ತದೆ.

ನೀರು ಇದು ಸಜೀವಿಗಳಿಗಾಗಿ ಒಂದು ಪ್ರಮುಖ ಅಂಶವಾಗಿದೆ. ಆದ್ದರಿಂದ, ಜಲ ಸಂರಕ್ಷಣೆ ಮತ್ತು ಜಲ ಸಂವರ್ಧನೆಯು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಾವು 'ಜಲ ಸಾಕ್ಷರ' ರಾಗಬೇಕು ಮತ್ತು ನೀರನ್ನು ಉಳಿಸಬೇಕು.

## ಸ್ವಾಧ್ಯಾಯ

**ಪ್ರ.1 ಕಾರಣ ಬರೆಯಿರಿ.**

(1) ನದಿಗಳಿಗೆ ಆಣೆಕಟ್ಟನ್ನು ಕಟ್ಟುತ್ತಾರೆ.

(2) ಲಾತೂರ ನಗರಕ್ಕೆ ರೈಲಿನ ಮೂಲಕ ನೀರನ್ನು ಸರಬರಾಜು ಮಾಡಬೇಕಾಯಿತು.

(3) ಛತ್ರಪತಿ ಶಿವಾಜಿ ಮಹಾರಾಜರು ರಾಯಗಡದಲ್ಲಿ ನೀರಿನ ವ್ಯವಸ್ಥೆ ಮಾಡಿದರು.

(4) ಡಾ. ರಾಜೇಂದ್ರ ಸಿಂಗ ಅವರು ಹೊಂಡಗಳನ್ನು ಕಟ್ಟಿದರು.

**ಪ್ರ.2 ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

(1) ನಿಮ್ಮ ಪರಿಸರದಲ್ಲಿ ನೀರಿನ ಮಾಲಿನ್ಯದ ಬಗ್ಗೆ ನಿಮ್ಮ ಪೋಷಕರೊಂದಿಗೆ ಚರ್ಚಿಸಿ ಪರಿಹಾರಗಳನ್ನು ಬರೆಯಿರಿ.

(2) ಡಾ. ರಾಜೇಂದ್ರ ಸಿಂಗ ಅವರನ್ನು 'ವಾಟರಮಾನ ಆಫ್ ಇಂಡಿಯಾ' ಎಂದು ಏಕೆ ಕರೆಯುತ್ತಾರೆ?




**ಪ್ರ.3 ಬದಿಯ ಚಿತ್ರ ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(1) ಚಿತ್ರದಲ್ಲಿ ತೋರಿಸಿರುವ ವೆಸ್ಟನದ ಮೇಲಿನ ಬಾಟಲಿಯಲ್ಲಿ ಎಷ್ಟು ನೀರು ಹಿಡಿಯುತ್ತದೆ?

(2) ಬಾಟಲಿಯ ಬೆಲೆ ಎಷ್ಟು ಇರುತ್ತದೆ?

**ಪ್ರ.4 ಅಂತರ್ಜಲ ಸಂರಕ್ಷಣೆಯ ಕುರಿತು ಕೆಳಗಿನ ಪರಿಚ್ಛೇದವನ್ನು ಓದಿರಿ ಮತ್ತು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.**

**ಅಂತರ್ಜಲ ಸಂರಕ್ಷಣೆ :** ಮನೆಗಳ ಚಪ್ಪರದ ಮೇಲೆ, ಕಟ್ಟಡಗಳ ಮಹಡಿಗಳ ಮೇಲೆ ಹಾಗೂ ನೆಲದ ಮೇಲೆ ಮಳೆಯ ನೀರು ಬೀಳುತ್ತದೆ. ಅದನ್ನು ವ್ಯರ್ಥ ಮಾಡದೆ ವಿಶಿಷ್ಟ ರೀತಿಯಲ್ಲಿ ಟಾಕಿಗಳಲ್ಲಿ ಸಂಗ್ರಹಿಸಲಾಗುತ್ತದೆ ಅಥವಾ ನೆಲದಲ್ಲಿ ತಗ್ಗು ತೆಗೆಯುವ ಮೂಲಕ ಇಂಗಿಸಲಾಗುತ್ತದೆ. ಇದರಿಂದ ಭೂಮಿಯೊಳಗಿನ ನೀರಿನ ಮಟ್ಟವು ಹೆಚ್ಚುತ್ತದೆ. ಬಾವಿಗಳು ತುಂಬುತ್ತವೆ. ಮಣ್ಣಿನ ತೇವಾಂಶವು ಉಳಿಸಿಕೊಳ್ಳಲಾಗುತ್ತದೆ. ಪರಿಸರದ ಸಮತೋಲನವನ್ನು ಕಾಪಾಡಿಕೊಳ್ಳಲಾಗುತ್ತದೆ. ಗಿಡ/ಮರಗಳನ್ನು ನೆಡುವುದು ಮತ್ತು ಬೆಳೆಸುವುದರಿಂದ ಮಣ್ಣಿನ ಸವಕಳಿ ನಿಲ್ಲಿಸುತ್ತದೆ. ಮರಗಳ ಬೇರುಗಳು ನೆಲದಲ್ಲಿ ನೀರನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ.

(1) ಮಳೆ ನೀರು ಎಲ್ಲೆಲ್ಲಿ ಬೀಳುತ್ತದೆ?

(2) ನೆಲದಲ್ಲಿಯ ನೀರಿನ ಮಟ್ಟವು ಯಾವುದರಿಂದ ಹೆಚ್ಚುತ್ತದೆ?

(3) ಮಳೆ ನೀರು ನೆಲದಲ್ಲಿ ಇಂಗಿಸುವ ಸಲುವಾಗಿ ಏನು ಮಾಡಲಾಗುತ್ತದೆ?

(4) ಈ ಪರಿಚ್ಛೇದದ ಆಧಾರದ ಮೇಲೆ ಎರಡು ಪೋಷ ವಾಕ್ಯಗಳನ್ನು ರಚಿಸಿ ಬರೆಯಿರಿ.

**ಉಪಕ್ರಮ**

- ಶಿಕ್ಷಕರ ಸಹಾಯದಿಂದ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಾಡಿದ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಪಡೆಯಿರಿ.



ಸಿಹಿನೀರಿನ ಕೆರೆಗಳ ಸತ್ಯಾಗ್ರಹ

- 'ಜಲಯುಕ್ತ ಶಿವಾರ್ ಯೋಜನೆ' ಮತ್ತು 'ಹರ್ ಘರ್ ಜಲ್' ಯೋಜನೆಗಳ ಬಗ್ಗೆ ಪೋಷಕರ ಸಹಾಯದಿಂದ ಮಾಹಿತಿ ಪಡೆದು, ಈ ಯೋಜನೆಗಳ ಲಾಭಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.
- ನಿಮ್ಮ ಪರಿಸರಸದಲ್ಲಿ ಬೀಳುವ ಮಳೆಯನ್ನು ಹೇಗೆ ಅಳೆಯಲಾಗುತ್ತದೆ? ಅದನ್ನು ಶಿಕ್ಷಕರ ಸಹಾಯದಿಂದ ಆ ಉಪಕರಣವನ್ನು ನೋಡಿರಿ.
- ಮಹಾರಾಷ್ಟ್ರದ ಆಣೆಕಟ್ಟುಗಳ ಚಿತ್ರಗಳನ್ನು ಸಂಗ್ರಹಿಸಿ ನಿಮ್ಮ ವಹಿಯಲ್ಲಿ ಅಂಟಿಸಿರಿ.

***



# 7. ಭಾರತೀಯ ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆ



**ಕೆಳಗಿನ ಚಿತ್ರದಲ್ಲಿ ನಿಮಗೆ ನಮ್ಮ ದೇಶದ ಯಾವ ವೈವಿಧ್ಯತೆಗಳು ಕಂಡುಬರುತ್ತವೆ?**

## ವಿವಿಧತೆಯಲ್ಲಿ ಏಕತೆ :-



ನಮ್ಮ ಭಾರತ ದೇಶವು ವೈವಿಧ್ಯಮಯ ಸಂಸ್ಕೃತಿಗಳಿಂದ ಹೊಂದಿರುವ ಸುಂದರ ದೇಶ. ನಮ್ಮ ದೇಶಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ.

ಭಾರತದಲ್ಲಿಯ ವಿವಿಧ ಭಾಷೆಗಳು, ಸಾಹಿತ್ಯ, ಕಲೆ, ಹಬ್ಬಗಳು ಮತ್ತು ಧರ್ಮಗಳು ಇವೆಲ್ಲಾ ಭಾರತೀಯ ಸಂಸ್ಕೃತಿಯ ಘಟಕಗಳಾಗಿವೆ. ಭಾರತದ ವಿವಿಧ ಭಾಗಗಳಲ್ಲಿ ನಾವೆಲ್ಲರೂ ಭಾರತೀಯರಾಗಿದ್ದೇವೆ.

## ಸಂಸ್ಕೃತಿ ಎಂದರೇನು?

ಸಂಸ್ಕೃತಿ ಎಂದರೆ ಸಮಾಜದ ವಿಶಿಷ್ಟ ಜೀವನ ವಿಧಾನವಾಗಿದೆ. ಇದರಲ್ಲಿ ಆ ಸಮಾಜದ ಭಾಷೆ, ಉಡುಗೆ-ತೊಡುಗೆ, ಆಹಾರ, ಆಚರಣೆಗಳು, ಧರ್ಮ, ಪೂಜೆ, ಕಲೆ ಮತ್ತು ಕರಕುಶಲತೆ, ಸಾಹಿತ್ಯ, ಹಬ್ಬಗಳು ಮತ್ತು ಸಮಾರಂಭಗಳು ಮುಂತಾದ ಅಂಶಗಳನ್ನು ಒಳಗೊಂಡಿರುತ್ತವೆ.

## ಉತ್ಸವ / ಹಬ್ಬ:

ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಉತ್ಸವಗಳನ್ನು ಆಚರಿಸಲಾಗುತ್ತದೆ. ಈ ಹಬ್ಬಗಳಲ್ಲಿ ಹಲವು ಕೃಷಿ ಮತ್ತು ಋತುಮಾನಗಳಿಗೆ ಸಂಬಂಧಿಸಿವೆ. ಕೃಷಿಯು ನಮ್ಮ ದೇಶದ ಪ್ರಮುಖ ವ್ಯವಸಾಯವಾಗಿದೆ. ಆದ್ದರಿಂದ ನಮ್ಮ ದೇಶವನ್ನು 'ಕೃಷಿ ಪ್ರಧಾನ ದೇಶ' ಎಂದು ಕರೆಯಲಾಗುತ್ತದೆ.





ಭಾರತದಲ್ಲಿಯ ವಿವಿಧ ಹಬ್ಬಗಳು



ಕಾರಹುಣ್ಣಿಮೆ

ಕಾರಹುಣ್ಣಿಮೆಯು ಭಾರತೀಯ ಸಂಸ್ಕೃತಿಯಲ್ಲಿ ಒಂದು ಪ್ರಮುಖ ಹಬ್ಬವಾಗಿದೆ. ಈ ಹಬ್ಬದ ಸಮಯದಲ್ಲಿ ಎತ್ತುಗಳನ್ನು ಪೂಜಿಸಲಾಗುತ್ತದೆ. ಕೃಷಿ ಕೆಲಸ ಮತ್ತು ಇತರ ಕೆಲಸಗಳಲ್ಲಿ ರೈತರಿಗೆ ಎತ್ತುಗಳು ಅಮೂಲ್ಯವಾದ ಸಹಾಯ ಮಾಡುತ್ತವೆ.

ಮಹಾರಾಷ್ಟ್ರದ ಜೊತೆಗೆ ಕಾರಹುಣ್ಣಿಮೆ ಹಬ್ಬವನ್ನು ಮಧ್ಯಪ್ರದೇಶ, ಛತ್ತೀಸಗಢ, ಕರ್ನಾಟಕ, ತೆಲಂಗಣಾ, ಆಂಧ್ರಪ್ರದೇಶ, ತಮಿಳುನಾಡು, ಇತ್ಯಾದಿ ರಾಜ್ಯಗಳಲ್ಲಿಯೂ ಕಾರಹುಣ್ಣಿಮೆ ಉತ್ಸವ ಆಚರಿಸಲಾಗುತ್ತದೆ. ಪ್ರತಿಯೊಂದು ರಾಜ್ಯದಲ್ಲಿ ಈ ಹಬ್ಬವನ್ನು ಬೇರೆ ಬೇರೆ ಹೆಸರುಗಳಿಂದ, ವಿಧಾನಗಳಿಂದ ಮತ್ತು ಬೇರೆ-ಬೇರೆ ದಿನಗಳಲ್ಲಿ ಆಚರಿಸಲಾಗುತ್ತದೆ.

ಮಹಾರಾಷ್ಟ್ರದಲ್ಲಿ ಈ ಹಬ್ಬವನ್ನು ಬೈಲ್‌ಪೋಳಾ (ಕಾರಹುಣ್ಣಿಮೆ) ಎಂದು ಕರೆಯಲಾಗುತ್ತದೆ. ಮರಾಠವಾಡದಲ್ಲಿ ಈ ಹಬ್ಬವನ್ನು ಶ್ರಾವಣ ಮಾಸದ ಅಮಾವಾಸ್ಯೆಯಂದು ಆಚರಿಸಲಾಗುತ್ತದೆ. ಪಶ್ಚಿಮ ಮಹಾರಾಷ್ಟ್ರದಲ್ಲಿ ಈ ಹಬ್ಬವನ್ನು ಭಾದ್ರಪದ ಮಾಸದ ಅಮಾವಾಸ್ಯೆಯಂದು ಆಚರಿಸಲಾಗುತ್ತದೆ. ನಾಗಪುರದಂತಹ ಕೆಲವು ಸ್ಥಳಗಳಲ್ಲಿ ಈ ಹಬ್ಬವನ್ನು ಎರಡು ದಿನಗಳವರೆಗೆ ಆಚರಿಸಲಾಗುತ್ತದೆ, ಅವುಗಳೆಂದರೆ 'ಮೊಠಾ ಪೋಳಾ' ಹಾಗೂ ಮರುದಿನ 'ಛೋಟಾ ಪೋಳಾ' ಎಂದು ಹೀಗೆ ಎರಡು ದಿನ ಆಚರಿಸಲಾಗುತ್ತದೆ, ಛತ್ತೀಸಗಡ ಮತ್ತು ಮಧ್ಯಪ್ರದೇಶದಲ್ಲಿ 'ಪೋಳಾ', ಕರ್ನಾಟಕದಲ್ಲಿ 'ಬೆಂದೂರ ಅಥವಾ 'ಭೆಂಡಿ', ತೆಲಂಗಣಾ ಮತ್ತು ಆಂಧ್ರಪ್ರದೇಶದಲ್ಲಿ 'ಇರುವಕ್ ಪೌರ್ಣಿಮಾ'. ತಮಿಳುನಾಡಿನಲ್ಲಿ 'ಮಟ್ಟು ಪೊಂಗಲ್' ಹೀಗೆ ಈ ಹಬ್ಬವನ್ನು ವಿವಿಧ ಹೆಸರುಗಳಿಂದ ಆಚರಿಸಲಾಗುತ್ತದೆ. ಉತ್ತರ ಮತ್ತು ಪಶ್ಚಿಮ ಭಾರತದ ಕೆಲವು ಸ್ಥಳಗಳಲ್ಲಿ, ಈ ಹಬ್ಬವನ್ನು 'ಗೋವರ್ಧನ್ ಅಥವಾ ಗೋಧನ' ಎಂದು ಕರೆಯಲಾಗುತ್ತದೆ.



## ತಿಳಿದು ಕೊಳ್ಳೋಣ ಬನ್ನಿ.




- ಮಹಾರಾಷ್ಟ್ರದ-ಬೈಲ್‌ಪೋಳಾ (ಕಾರಹುಣ್ಣಿಮೆ)/ ದೊಡ್ಡ ಪೋಳಾ/ಸಣ್ಣ ಪೋಳಾ
- ಛತ್ತೀಸಡ/ ಮಧ್ಯಪ್ರದೇಶ - ಪೋಳಾ
- ಉತ್ತರ ಮತ್ತು ಪಶ್ಚಿಮ ಭಾರತ - ಗೋವರ್ಧನ / ಗೋಧನ
- ಕರ್ನಾಟಕ-ಬೆಂದೂರ / ಭೆಂಡಿ
- ತಮಿಳುನಾಡು-ಮಟ್ಟು ಪೊಂಗಲ್
- ತೆಲಂಗಣಾ/ಆಂಧ್ರ ಪ್ರದೇಶ - ಇರುವಾಕ ಪೂರ್ಣಿಮಾ

ಈ ಹಬ್ಬದಲ್ಲಿ ಮನೆಯ ಬಾಗಿಲಿಗೆ ತೋರಣವನ್ನು ಕಟ್ಟಿ, ಬಾಗಿಲಿನ ಮುಂದೆ ಸುಂದರವಾದ ರಂಗೋಲಿಯನ್ನು ತೆಗೆಯುತ್ತಾರೆ. ಎತ್ತುಗಳಿಗೆ ಮೈತೊಳೆದು ಸ್ವಚ್ಛಗೊಳಿಸಿ ಬಣ್ಣವನ್ನು ಹಚ್ಚುತ್ತಾರೆ. ಅವುಗಳ ಬೆನ್ನ ಮೇಲೆ ಸುಂದರವಾದ ನಕ್ಷೆಗಳನ್ನು ತೆಗೆದು ಮೇಲೆ ಝೂಲರಿಗಳನ್ನು ಹಾಕುತ್ತಾರೆ. ಕೋಡುಗಳಿಗೆ ಕಾಗದದಿಂದ ಮಾಡಿದ ಆಭರಣ, ತಲೆಗೆ ಭಾಸಿಂಗ ಕಟ್ಟುತ್ತಾರೆ. ಕೊರಳಲ್ಲಿ ಕವಡೆಯ ಮತ್ತು ಗೆಜ್ಜೆಯ ಸರಗಳನ್ನು ಹಾಕುತ್ತಾರೆ ವಿವಿಧ ವಾದ್ಯಗಳನ್ನು ಬಾರಿಸುತ್ತಾ ಊರಲ್ಲಿ ಮೆರವಣಿಗೆಯನ್ನು ತೆಗೆಯುತ್ತಾರೆ. ಮನೆ ಎದುರು ಎತ್ತುಗಳು ಬಂದಾಗ ಅವುಗಳ ಪೂಜೆ ಮಾಡಿ ಆರುತಿಯನ್ನು ಮಾಡುತ್ತಾರೆ. ನಂತರ ಹೂರಣದ ಹೋಳಿಗೆ ಮಾಡಿ ನೈವಿದ್ಯವನ್ನು ಕೊಡುತ್ತಾರೆ. ಆ ದಿನ ದಿನಪೂರ್ತಿ ಅವುಗಳಿಗೆ ವಿಶ್ರಾಂತಿ ಕೊಡುತ್ತಾರೆ.

**ವಿವಿಧ ಧರ್ಮ ಮತ್ತು ಅವುಗಳ ಹಬ್ಬಗಳು**

| ಧರ್ಮ | ಹಬ್ಬ |
|---|---|
| ಹಿಂದು | ದೀಪಾವಳಿ, ಗಣೇಶೋತ್ಸವ, ದಸರಾ |
| ಬೌದ್ಧ | ................................ |
| ಜೈನ | ಮಹಾವೀರ ಜಯಂತಿ, ಪರ್ಯುಷಣಪರ್ವ |
| ಇಸ್ಲಾಂ | ................................ |
| ಕ್ರಿಶ್ಚಿಯನ್ | ನಾತಾಳ್/ಕ್ರಿಸ್‌ಮಸ್ |
| ಪಾರಶಿ | ................................ |
| ಶಿಖ | ಗುರುನಾನಕ ಜಯಂತಿ |

ದೀಪಗಳನ್ನು ಬೆಳಗಿಸಿ ಆಚರಿಸಲಾಗುವ 'ದೀಪಾವಳಿ'ಯು ಇದೊಂದು ಭಾರತದಲ್ಲಿ ದೊಡ್ಡ ಹಬ್ಬವಾಗಿದೆ. ದೀಪಾವಳಿಯು ಕೌಟುಂಬಿಕ ಒಗ್ಗಟ್ಟುತನದ ಮತ್ತು ಸಾರ್ವತ್ರಿಕ ಆನಂದದ ಉತ್ಸವಾಗಿದೆ. ಗಣೇಶೋತ್ಸವ ಮತ್ತು ವಿಜಯ ದಶಮಿ ಇವು ಕೂಡಾ ಹಿಂದೂಗಳ ದೊಡ್ಡ ಹಬ್ಬಗಳಾಗಿವೆ.

'ಬುದ್ಧ ಪೂರ್ಣಿಮೆ' ಹಬ್ಬವು ಬೌದ್ಧರಿಗೆ ಮುಖ್ಯವಾದರೆ, 'ಮಹಾವೀರ ಜಯಂತಿ' ಮತ್ತು 'ಪರ್ಯುಷಣ ಪರ್ವ' ಜೈನರಿಗೆ ಮಹತ್ವವಾಗಿದೆ. 'ಈದ್ -ಉಲ್-ಫಿತರ್' ಅಂದರೆ ರಮ್‌ಜಾನ್ ಈದ್ ಇದು ಮುಸ್ಲಿಮರಿಗೆ ದೊಡ್ಡ ಹಬ್ಬವಿದೆ. 'ನಾತಾಳ' ಅಥವಾ ಕ್ರಿಸ್‌ಮಸ್‌ವು ಕ್ರಿಶ್ಚಿಯನ್ನರ ಹಬ್ಬವಾಗಿದೆ. ಪಾರ್ಸಿ ಧರ್ಮಿಯರ 'ನವರೋಜ್' ಮತ್ತು ಸಿಖ್ಖ ಧರ್ಮಿಯರ 'ಗುರುನಾನಕ ಜಯಂತಿ' ಇವು ಹಬ್ಬಗಳಾಗಿವೆ. ಯಾವುದೇ ಧರ್ಮದ ಹಬ್ಬವಿರಲಿ ಎಲ್ಲಾ ಭಾರತೀಯರು ಹಬ್ಬಗಳಲ್ಲಿ ಮತ್ತು ಉತ್ಸವಗಳಲ್ಲಿ ಸಂತೋಷದಿಂದ ಭಾಗವಹಿಸುತ್ತಾರೆ. ಒಬ್ಬರಿಗೊಬ್ಬರು ಶುಭಾಶಯಗಳನ್ನು ಕೋರುತ್ತಾರೆ.

ಸ್ವಾತಂತ್ರ್ಯ ದಿನ ಮತ್ತು ಗಣರಾಜ್ಯೋತ್ಸವ ಇವುಗಳು ರಾಷ್ಟ್ರೀಯ ಹಬ್ಬವಾಗಿದ್ದು ದೇಶಾದ್ಯಂತ ಎಲ್ಲಾ ನಾಗರಿಕರು ಬಹಳ ಉತ್ಸಾಹದಿಂದ ಆಚರಿಸುವರು.

ಹಬ್ಬಗಳಿಂದಾಗಿ ಜನರು ಒಟ್ಟುಗೂಡುತ್ತಾರೆ. ಜನರಲ್ಲಿ ಏಕತೆಯ ಭಾವನೆ ಮೂಡುತ್ತದೆ. ಹಬ್ಬಗಳಲ್ಲಿ ಹಾಡುಗಳು, ನೃತ್ಯಗಳು, ರಂಗೋಲಿ, ಆಟಗಳು ಮತ್ತು ಓಟಗಳು ಒಳಗೊಂಡಿರುತ್ತವೆ. ಇದರಿಂದಾಗಿ ಕಲೆಗಳ ಆನಂದ ಕೂಡಾ ಪಡೆಯಲು ಬರುತ್ತದೆ. ಭಾರತದ ವಿವಿಧ ಭಾಗಗಳ ಹಳ್ಳಿಗಳಲ್ಲಿ ಜಾತ್ರೆಗಳನ್ನು ನೆರವೆರಿಸಲಾಗುತ್ತದೆ. ಸ್ಥಾನಿಕ ಗ್ರಾಮ ದೇವತೆಗಳ ಹಬ್ಬಕ್ಕೆ ಹಳ್ಳಿಯ ಜನರು ಮತ್ತು ವಿವಿಧ ಕಾರಣಗಳಿಗಾಗಿ ಹಳ್ಳಿಯಿಂದ ಹೊರಗೆ ಹೋದವರು ಜಾತ್ರೆಗೆ ಒಟ್ಟಿಗೆ ಸೇರುತ್ತಾರೆ.

## ಆಹಾರದಲ್ಲಿಯ ವೈವಿಧ್ಯತೆ

ಭಾರತದ ವಿವಿಧ ಪ್ರದೇಶಗಳಲ್ಲಿ ವಾಸಿಸುವ ಜನರ ಆಹಾರ ಪದ್ಧತಿಯಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಹವಾಮಾನ ಮತ್ತು ಬೆಳೆಗಳಲ್ಲಿನ ವ್ಯತ್ಯಾಸಗಳು ಈ ವೈವಿಧ್ಯತೆಗೆ ಕಾರಣಗಳಾಗಿವೆ. ಪಂಜಾಬಿ ಜನರ ಆಹಾರದಲ್ಲಿ ಮುಖ್ಯವಾಗಿ ಬೇಳೆ ಮತ್ತು ರೊಟ್ಟಿ ಇರುತ್ತದೆ. ಕರಾವಳಿಯಲ್ಲಿ ಜನರು ಅನ್ನ ಮತ್ತು ಮೀನು ತಿನ್ನುತ್ತಾರೆ. ಅದೇ ರೀತಿ, ಕೆಲವು ಪ್ರದೇಶಗಳು ಕೆಲವು ವಿಶೇಷ ಖಾದ್ಯಗಳಿಗೆ ಪ್ರಸಿದ್ಧವಾಗಿವೆ. ಉದಾಹರಣೆಗೆ, ಮಹಾರಾಷ್ಟ್ರದಲ್ಲಿ ಹೂರಣದ ಹೋಳಿಗೆ, ದಕ್ಷಿಣ ಭಾರತದಲ್ಲಿ ಇಡ್ಲಿ ಸಾಂಬಾರ, ಇತ್ಯಾದಿ. ಪದಾರ್ಥಗಳು ಆ ಪ್ರದೇಶಗಳ ವಿಶೇಷತೆಗಳಾಗಿದ್ದರೂ, ದೇಶಾದ್ಯಂತ ಅವುಗಳನ್ನು ಇಷ್ಟಪಟ್ಟು ತಿನ್ನಲಾಗುತ್ತದೆ.

### ವೇಶ ಭೂಷಣಗಳಲ್ಲಿಯ ವೈವಿಧ್ಯತೆ :-



ಭಾರತದ ವಿವಿಧ ಭಾಗಗಳಲ್ಲಿ ವಾಸಿಸುವ ಜನರ ವೇಷಭೂಷಣಗಳು ವಿಭಿನ್ನವಾಗಿವೆ. ಕಾಶ್ಮೀರ ಮತ್ತು ಪಂಜಾಬ್‌ನ ಮಹಿಳೆಯರು ಸಲ್ವಾರ್-ಕಮೀಜ್-ದುಪಟ್ಟಾ ಧರಿಸುತ್ತಾರೆ. ರಾಜಸ್ಥಾನದ ಮಹಿಳೆಯರು ಬಣ್ಣ ಬಣ್ಣಗಳ ಚೋಲಿ-ಘಾಗ್ರಾ ಮತ್ತು ಚುನರಿಯನ್ನು ಧರಿಸುತ್ತಾರೆ. ನಾಗಲ್ಯಾಂಡ್ ಮತ್ತು ಮೀಜೋರಾಮ್‌ನಂತಹ ಈಶಾನ್ಯದ ಗುಡ್ಡಗಾಡು ರಾಜ್ಯಗಳಲ್ಲಿಯ ಮಹಿಳೆಯರು ಪ್ಯಾಂಟ್ ಸೂಟ್‌ಗಳನ್ನು ಧರಿಸುತ್ತಾರೆ. ಭಾರತದಲ್ಲಿಯ ಮಹಿಳೆಯರ ಉಡುಪುಗಳಲ್ಲಿ ಸೀರೆ ವಿಶೇಷವಾಗಿ ಪ್ರಸಿದ್ಧವಾಗಿದೆ.

ಪುರುಷರ ಉಡುಪಿನಲ್ಲಿಯೂ ವೈವಿಧ್ಯತೆ ಕಾಣಿಸುತ್ತದೆ. ಕೆಲವರು ಪೈಜಾಮಾ ಧರಿಸುತ್ತಾರೆ, ಕೆಲವರು ಧೋತಿ ಧರಿಸುತ್ತಾರೆ, ಕೆಲವರು ಲುಂಗಿ ಧರಿಸುತ್ತಾರೆ ಮತ್ತು ಕೆಲವರು ಪ್ಯಾಂಟ್ ಧರಿಸುತ್ತಾರೆ. ಶರ್ಟ್, ಕುರ್ತಾ, ಜಬ್ಬಾ, ಜಾಕೆಟ್ ಅಥವಾ ಕೋಟುಗಳನ್ನು ಧರಿಸುತ್ತಾರೆ. ಕೆಲವರ ತಲೆಗೆ ಪೇಟಾ ಧರಿಸುತ್ತಾರೆ. ಕೆಲವರು ತಲೆಗೆ ಟೊಪ್ಪಿಗೆ ಧರಿಸುತ್ತಾರೆ. ವಿವಿಧ ಪ್ರದೇಶಗಳಲ್ಲಿ ಹಲವು ರೀತಿಯ ಪೇಟಾ ಮತ್ತು ಟೋಪಿಗಳು ಕಂಡುಬರುತ್ತವೆ. ಈಗಿನ ಕಾಲದಲ್ಲಿ, ಸಾಂಪ್ರದಾಯಿಕ ಉಡುಪಿನ ಜೊತೆಗೆ ಜನರು ವಿವಿಧ ರೀತಿಯ ಬಟ್ಟೆಗಳನ್ನು ಧರಿಸುತ್ತಾರೆ.

### ಆಟ :

ಭಾರತದಲ್ಲಿ ಅನೇಕ ಪ್ರಕಾರದ ಆಟಗಳನ್ನು ಆಡಲಾಗುತ್ತದೆ. ಲಗೋರಿ, ಚಿನ್ನಿ-ದಾಂಡು, ಕುಸ್ತಿ, ಕಬಡ್ಡಿ ಮತ್ತು ಪುಗಡಿ ಮುಂತಾದ ಪಾರಂಪರಿಕ ಆಟಗಳು ಇಂದಿಗೂ ಜನ-ಪ್ರಿಯವಾಗಿವೆ. ಮಲ್ಲಖಂಬ ಈ ಆಟದಿಂದ ಶರೀರವು ಚುರುಕಾಗಿ

ಮತ್ತು ಗಟ್ಟಿಮುಟ್ಟಾಗಿರುತ್ತದೆ ಮತ್ತು ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಚದುರಂಗದಾಟವು ಬುದ್ಧಿಚಾತುರ್ಯವನ್ನು ಬೆಳೆಸುವ ಆಟವಾಗಿದ್ದು ಭಾರತದಲ್ಲಿ ಪ್ರಾಚೀನ ಕಾಲದಿಂದಲು ಆಡಲಾಗುತ್ತಿದೆ.

ಆಟಗಳು ನಮ್ಮ ಜೀವನದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿವೆ. ಏಕೆಂದರೆ ಆಟಗಳಿಂದಾಗಿ ಏಕತೆ ಮತ್ತು ಸಹಕಾರದ ಗುಣಗಳು ಹೆಚ್ಚುತ್ತವೆ. ನಾಯಕತ್ವ ಗುಣ ಬೆಳೆಯುತ್ತದೆ. ಕ್ರೀಡೆಗಳಲ್ಲಿ, ಗೆಲುವು ಅಥವಾ ಸೋಲಿಗಿಂತ ದೃಢ ನಿಶ್ಚಯ ಮತ್ತು ಉತ್ಸಾಹ ಹೆಚ್ಚು ಮುಖ್ಯವಾಗಿರುತ್ತದೆ. ಆಟಗಳಲ್ಲಿ ನಿರ್ದಿಷ್ಟ ನಿಯಮಗಳಿವೆ. ಆಟಗಾರರು ಆ ನಿಯಮಗಳನ್ನು ಪಾಲಿಸಬೇಕಾಗುತ್ತದೆ.



### ನಿಮಗೆ ಇದು ಗೊತ್ತಿದೆಯೇ?

ಭಾರತೀಯ ಆಟವಾದ ಕಬಡ್ಡಿ ಈಗ ಜಾಗತಿಕ ಮಾನ್ಯತೆ ಪಡೆದಿದೆ. ಢಾಕಾದಲ್ಲಿ ನಡೆದ ಜಾಗತಿಕ ಸ್ಥರದ ಕಬಡ್ಡಿ ಸ್ಪರ್ಧೆಯಲ್ಲಿ ಭಾರತೀಯ ಮಹಿಳಾ ತಂಡವು ಜಯಗಳಿಸಿದೆ.



ವಿಶ್ವ ಚಾಂಪಿಯನ್ ಭಾರತೀಯ ಮಹಿಳಾ ಕಬಡ್ಡಿ ತಂಡ 2025



### ನಿಮಗೆ ಇದು ಗೊತ್ತಿದೆಯೇ?

- ಖಾಶಾಬಾ ಜಾಧವ್ ಇವರು ಸಾತಾರಾದ ನಿವಾಸಿಗರಾಗಿದ್ದು. ಅವರು ಭಾರತೀಯ ಫ್ರೀಸ್ಟೈಲ್ ಕುಸ್ತಿಪಟು ಆಗಿದ್ದರು. ಅವರು 1952ರ ಹೆಲಸಿಂಕಿ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು. ಸ್ವತಂತ್ರ ಭಾರತಕ್ಕೆ ಓಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯರಾಗಿದ್ದರು



ಖಾಶಾಬಾ ಜಾಧವ



ಕೋನೇರು ಹಂಪಿ

- ಆಂಧ್ರಪ್ರದೇಶದ ನಿವಾಸಿಯಾದ ಕೊನೆರು ಹಂಪಿ ಭಾರತದ ಅತ್ಯಂತ ಕಿರಿ ವಯಸ್ಸಿನ ಗ್ರ್ಯಾಂಡ್ ಮಾಸ್ಟರ್ ಆಗಿರುವ ಮಹಿಳೆ. ಅವರು ಚೆಸ್ (ಚದುರಂಗ) ಆಟದಲ್ಲಿ ಪ್ರಾವಿಣ್ಯವನ್ನು ಹೊಂದಿದ್ದಾರೆ.

- ನಾಗಪೂರದ ದಿವ್ಯಾ ದೇಶಮುಖ ಇವರು ಚೆಸ್ (ಚದುರಂಗ) ಆಟ ಆಡುತ್ತಾರೆ. ಅವರು 2025ರಲ್ಲಿ ಮಹಿಳಾ ಚೆಸ್ (ಚದುರಂಗ) ವಿಶ್ವಕಪ್ ಗೆದ್ದಿದಾರೆ. ದಿವ್ಯಾ ದೇಶಮುಖ್ ಅವರು ಏಷ್ಯನ್ ಚಾಂಪಿಯಯನ್ ಶಿಪ್, ವಿಶ್ವ ಜೂನಿಯರ್ ಚೆಸ್ ಚಾಂಪಿಯನ್ ಶಿಪ್ ಮತ್ತು ಯೂತ್ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದಿದ್ದಾರೆ.



ದಿವ್ಯ ದೇಶಮುಖ

## ಲೋಕಕಲೆ

ಲೋಕಕಲೆಯು ನಮ್ಮ ಸಾಂಸ್ಕೃತಿಕ ಪರಂಪರೆ ಇದೆ. ಈ ಕಲೆಗಳಿಂದ ನಮಗೆ ಆನಂದ ಸಿಗುತ್ತದೆ. ಸಹಜತೆಯಿಂದ ಲೋಕ ಶಿಕ್ಷಣ ಸಿಗುತ್ತದೆ ಮತ್ತು ಸಂಸ್ಕೃತಿಯ ಜೋಪಾಸನೆಯನ್ನು ಮಾಡಲಾಗುತ್ತದೆ.

ರಾಷ್ಟ್ರೀಯ ಸಂತ ಗಾಡಗೆ ಬಾಬಾ ಅವರು ತಮ್ಮ ಕೀರ್ತನೆಗಳ ಮೂಲಕ ಜನರ ಮನಸ್ಸಿನಲ್ಲಿ ಶಿಕ್ಷಣದ ಮತ್ತು ಸ್ವಚ್ಛತೆಯ ಮಹತ್ವವನ್ನು ಮೂಡಿಸಿದರು. ಲೋಕಶಾಹಿರ ಅಣ್ಣಭಾವು ಸಾಠೆ, ಶಾಹಿರ ಅಮರ ಶೇಖ ಮತ್ತು ದ.ನ. ಗವಾಣಕರ ಇವರು ತಮ್ಮ ಶಾಹಿರಿ ಮೂಲಕ ಲೋಕ-ಜಾಗೃತಿ ಮಾಡಿದರು.

ಸಂತರು ಜನರಿಗೆ ಸಮಾನತೆಯ ಸಂದೇಶವನ್ನು ನೀಡಿದರು. ಅವರು ಜನರಿಗೆ ದಯೆ, ಅಹಿಂಸೆ, ಪರೋಪಕಾರ, ಸೇವೆ, ಸಮಾನತೆ, ಭ್ರಾತೃತ್ವ(ಬಂಧುಭಾವ) ಇತ್ಯಾದಿ ಸದ್ಗುಣಗಳನ್ನು ಕಲಿಸಿದರು. ಶ್ರೀ ಚಕ್ರಧರ ಸ್ವಾಮಿ, ಸಂತ ನಾಮದೇವ, ಸಂತ ಜ್ಞಾನೇಶ್ವರ, ಸಂತ ಚೊಖಾಮೇಳಾ, ಸಂತ ಏಕನಾಥ, ಸಂತ ತುಕರಾಮ,ಸಂತ ಗೋರಾಕುಂಬಾರ, ಸಂತ ನರಹರಿ, ಸಂತ ಮುಕ್ತಾಬಾಯಿ, ಸಂತ ಜನಾಬಾಯಿ, ಸಂತ ಸೋಯರಾಬಾಯಿ, ಸಂತ ಕಾನ್ಹೋಪಾತ್ರಾ, ಸಂತ ಬಹಿಣಾ ಬಾಯಿ ಶಿವುರಕರ ಇವರು ತಮ್ಮ ಕೀರ್ತನ, ಅಭಂಗ ಹಾಗೂ ಭಾರುಡಗಳ ಮೂಲಕ ಲೋಕ ಜಾಗೃತಿ ಗೊಳಿಸಿದರು.

ಪಂಜಾಬದ ಭಾಂಗಡಾ, ಕರ್ನಾಟಕದ ಯಕ್ಷಗಾನ, ಗೋವಾದ ಕುದುರೆ ಕುಣಿತ ನೃತ್ಯ, ನಾಗಾಲ್ಯಾಂಡ ಮತ್ತು ಮೇಘಾಲಯದ ಬಿದಿರು ನೃತ್ಯ, ಗುಜರಾತಿನ ಗರಬಾ ಮತ್ತು ದಾಂಡಿಯಾ, ರಾಜಸ್ಥಾನದ ಘೂಮರ ನೃತ್ಯ, ಆಸಾಮದ ಬಿಹು ನೃತ್ಯ, ಮಹಾರಾಷ್ಟ್ರದ ಲಾವಣಿ ನೃತ್ಯಗಳು ಈ ಕಲೆಗಳು ಆಯಾ ರಾಜ್ಯಗಳ ವಿಶೇಷ ಗುರುತುಗಳಾಗಿವೆ. ವಿವಿಧ ರಾಜ್ಯಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ವಾಸ್ತುಕಲೆ ಇತ್ಯಾದಿ ವಿವಿಧ ಪ್ರಕಾರದ ಕಲೆಗಳು ಕಂಡುಬರುತ್ತದೆ.

## ಮಹಾರಾಷ್ಟ್ರದಲ್ಲಿಯ ವಿವಿಧ ಲೋಕಕಲೆ


ಲಾವಣಿ


ಪೊವಾಡಾ


ದಶಾವತಾರ


ಭಜನ/ಕೀರ್ತನ


ಭಾರೂಡ


ಗೊಂಧಳ


ತಮಾಷಾ


ಕೋಳಿ ನೃತ್ಯ



ಪಂಜಾಬ - ಭಾಂಗಡಾ



ಕರ್ನಾಟಕ - ಯಕ್ಷಗಾನ



ಗೋವಾ - ಕುದುರೆ ಕುಣಿತದ ನೃತ್ಯ



ನಾಗಾಲ್ಯಾಂಡ/ ಮೇಘಾಲಯ ಬಾಂಬೂ ನೃತ್ಯ



ಗುಜರಾತ - ಗರಬಾ ಮತ್ತು ಕೋಲಾಟ



ರಾಜಸ್ಥಾನ - ಘೂಮರ



ಆಸಾಮ - ಬಿಹು



ಮಹಾರಾಷ್ಟ್ರ - ಲಾವಣಿ

ವಿವಿಧ ರಾಜ್ಯಗಳಲ್ಲಿಯ ನೃತ್ಯ

ನಮ್ಮ ದೇಶವು ಕಲೆ, ಆಹಾರ, ಭಾಷೆ, ವೇಶಭೂಷಣಗಳು, ಹಬ್ಬಗಳು ಮತ್ತು ಸಂಪ್ರದಾಯಗಳಲ್ಲಿ ವೈವಿಧ್ಯತೆಯನ್ನು ಕಂಡುಬರುತ್ತವೆ. ಆದರೆ, ವಿವಿಧತೆಯಲ್ಲಿ ಏಕತೆ ಇದು ನಮ್ಮ ದೇಶದ ವೈಶಿಷ್ಟ್ಯವಾಗಿದೆ.

## ಸ್ವಾಧ್ಯಾಯ

**ಪ್ರ.1 ಸಂಕಲ್ಪನೆ ಚಿತ್ರವನ್ನು ಪೂರ್ಣಗೊಳಿಸಿರಿ.**



**ಪ್ರ.2 ರಾಜ್ಯದಲ್ಲಿ ಆಚರಿಸಲಾಗುವ ಹಬ್ಬಗಳನ್ನು ಬರೆಯಿರಿ.**

| | ರಾಜ್ಯ | ಹಬ್ಬ |
|---|---|---|
| (1) | ಮಹಾರಾಷ್ಟ್ರ | ------------------------------------------------ |
| (2) | ಆಂಧ್ರಪ್ರದೇಶ | ------------------------------------------------ |
| (3) | ತಮಿಳುನಾಡು | ------------------------------------------------ |
| (4) | ಕೇರಳ | ------------------------------------------------ |

**ಪ್ರ.3 ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ರಾಜ್ಯ | ವೇಶ ಭೂಷಣ | ಆಹಾರ ಪದ್ಧತಿ |
|---|---|---|
| ಪಂಜಾಬ | --------------- <br> --------------- | --------------- <br> --------------- |
| --------------- <br> --------------- | --------------- <br> --------------- | ಹುರಣದ ಹೋಳಿಗೆ |
| ರಾಜಸ್ಥಾನ | --------------- <br> --------------- | --------------- <br> --------------- |

**ಪ್ರ.4 ಮಹಾರಾಷ್ಟ್ರದಲ್ಲಿ ಯಾವ ಯಾವ ಆಟಗಳನ್ನು ಆಡಲಾಗುತ್ತದೆ?**

(1) ----------------------------------------------------------------------------

(2) ----------------------------------------------------------------------------

(3) ----------------------------------------------------------------------------

(4) ----------------------------------------------------------------------------

**ಉಪಕ್ರಮ**

- ಕುಟುಂಬದಲ್ಲಿಯ ಹಿರಿಯರ ಸಹಾಯದಿಂದ ಚಿತ್ರಗಳ ಮೂಲಕ ಪ್ರದೇಶದಲ್ಲಿಯ ವಿವಿಧ ಜಾನಪದ ಕಲೆಗಳು, ವೇಷಭೂಷಣಗಳು, ಆಹಾರ ಮತ್ತು ಆಟಗಳ ಬಗ್ಗೆ ತಿಳಿದುಕೊಳ್ಳಿರಿ.
- ಮಹಾರಾಷ್ಟ್ರದ ವಿವಿಧ ಜಾನಪದ ಕಲೆಗಳಿಗೆ ಸಂಬಂಧಿಸಿದ ವೀಡಿಯೊಗಳನ್ನು ಅಂತರ್ಜಾಲ ಬಳಸಿ ಹುಡುಕಿರಿ.

***



# 8. ಸಾರಿಗೆ ಸಂಪರ್ಕ





**ಮಕ್ಕಳೇ, ಮೇಲಿನ ಚಿತ್ರವನ್ನು ಸರಿಯಾಗಿ ನಿರೀಕ್ಷಿಸಿರಿ. ನೀವು ನೋಡಿದ ಅಥವಾ ಬಳಸಿದ ಸಾರಿಗೆ ಸಾಧನಗಳನ್ನು ಗುರುತಿಸಿರಿ ಮತ್ತು ಚಿತ್ರದ ಕೆಳಗೆ ಇರುವ ಚೌಕಟ್ಟಿನಲ್ಲಿ ✓ ಹೀಗೆ ಗುರುತು ಹಾಕಿರಿ.**

- ಭೂಮಿಯ ಮೇಲೆ ಬಹಳ ದೂರದ ವರೆಗೆ ಪ್ರಯಾಣಿಸಲು ಬಳಸುವ ಸಾಧನಗಳನ್ನು ಗುರುತಿಸಿರಿ. ಅದರ ಪಕ್ಕದಲ್ಲಿರುವ ಚೌಕಟ್ಟಿನಲ್ಲಿ ಅದನ್ನು ○ ಗುರುತಿಸಿ ಹಾಕಿರಿ.
- ಉಳಿದ ಉಪಕರಣಗಳನ್ನು ನೀವು ಎಂದಾದರೂ ನೋಡಿದ್ದೀರಾ? ಎಲ್ಲಿ ನೋಡಿದ್ದಿರಿ? ಅವುಗಳನ್ನು ಯಾವ ಕಾಲದಲ್ಲಿ ಬಳಸಲಾಗಿದೆ ಎಂದು ನೀವು ಭಾವಿಸುತ್ತೀರಿ? ನಿಮ್ಮ ಸ್ನೇಹಿತರು ಮತ್ತು ಶಿಕ್ಷಕರೊಂದಿಗೆ ಇವನ್ನು ಚರ್ಚಿಸಿರಿ.

ಮೇಲಿನ ಚಟುವಟಿಕೆಯಿಂದ, ನಾವು ವಿಭಿನ್ನ ಕಾಲಗಳಲ್ಲಿ ವಿಭಿನ್ನ ಸಾರಿಗೆ ಸಾಧನಗಳನ್ನು ಬಳಸಿದ್ದೇವೆ ಎಂಬುದನ್ನು ನೀವು ಗಮನಿಸಬಹುದು. ನಾವು ಈಗ ಬಳಸುವ ಸಾಧನಗಳು ಹಿಂದಿನ ಸಾರಿಗೆ ಸಾಧನಗಳಿಗಿಂತ ವೇಗವಾಗಿ ಮತ್ತು ಸುರಕ್ಷಿತವಾಗಿವೆ.

## ಸಾರಿಗೆ



ಸಾರಿಗೆಯು ಹೇಗೆ ನಡೆಯುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳೋಣ.

ಪ್ರಾಚೀನ ಕಾಲದಲ್ಲಿ ಮಾನವರು ಪ್ರಾಣಿಗಳನ್ನು ವಾಹನಗಳಾಗಿ ಬಳಸುತ್ತಿದ್ದರು. ನಂತರ, ಚಕ್ರವನ್ನು ಕಂಡುಹಿಡಿಯಲಾಯಿತು. ಚಕ್ರಗಳನ್ನು ಹೊಂದಿರುವ ವಾಹನವನ್ನು ತಯಾರಿಸಲಾಯಿತು ಮತ್ತು ಅದನ್ನು ಎಳೆಯಲು ಸಾಕು ಪ್ರಾಣಿಗಳನ್ನು ಬಳಸಲಾಯಿತು. ಇಂದಿಗೂ ಸಹ, ಕೆಲವು ಸ್ಥಳಗಳಲ್ಲಿ ಪ್ರಾಣಿಗಳಿಂದ ಎಳೆಯುವ ವಾಹನಗಳನ್ನು ಬಳಸಲಾಗುತ್ತದೆ.



ತಂತ್ರಜ್ಞಾನ ವಿಕಸಿತಗೊಂಡಂತೆ, ಪ್ರಾಣಿಗಳ ಸ್ಥಾನವನ್ನು ಯಂತ್ರಗಳು ಆಕ್ರಮಿಸಿಕೊಂಡಿವೆ. ಯಂತ್ರದ ಸಹಾಯದಿಂದ ನಡೆಯುವ ವಾಹನಗಳಿಂದ ಪ್ರವಾಸವು ಸುಲಭ, ಹೆಚ್ಚು ಆರಾಮದಾಯಕ ಮತ್ತು ವೇಗವಾಗಿ ಸಾಗಿದೆ.



### ನಿಮಗೆ ಇದು ಗೊತ್ತಿದೆಯೇ?





ಹಾವರ್ ಕ್ರಾಫ್ಟ್ - ನೀರು ಮತ್ತು ನೆಲದ ಮೇಲೆ ಚಲಿಸಬಲ್ಲ ವಾಹನ.



### ಮಾಡಿನೋಡಿರಿ

**ಸಾರಿಗೆ ಮತ್ತು ಸಂವಹನ ಮಾರ್ಗಗಳು**

- ಭೂ ಮಾರ್ಗ
  - ರಸ್ತೆ ಮಾರ್ಗ
  - ರೈಲು ಮಾರ್ಗ
- ಜಲ ಮಾರ್ಗ
  - ಆಂತರಿಕ/ಆಂತರ್ಗತ
  - ಸಮುದ್ರ
- ವಾಯು ಮಾರ್ಗ
  - ದೇಶಾಂತರ್ಗತ ವಾಯು ಮಾರ್ಗ
  - ಅಂತರರಾಷ್ಟ್ರೀಯ ವಾಯು ಮಾರ್ಗ

| ರಸ್ತೆ ಮಾರ್ಗ | ರೈಲು ಮಾರ್ಗ | ಆಂತರಿಕ/ಆಂತರ್ಗತ | ಸಮುದ್ರ | ದೇಶಾಂತರ್ಗತ ವಾಯು ಮಾರ್ಗ | ಅಂತರರಾಷ್ಟ್ರೀಯ ವಾಯು ಮಾರ್ಗ |
|---|---|---|---|---|---|
| ------- | ------- | -------- | -------- | -------- | ---------- |
| ------- | ------- | -------- | -------- | -------- | ---------- |
| ------- | ------- | -------- | -------- | -------- | ---------- |
| ------- | ------- | -------- | -------- | -------- | ---------- |

**ಕೆಳಗೆ ಕೊಟ್ಟ ವಾಹನಗಳ ಹೆಸರುಗಳನ್ನು ಯೋಗ್ಯ ಸ್ಥಳಗಳಲ್ಲಿ ಬರೆಯಿರಿ-**

ಬಸ್ಸು, ಕಾರು, ಹೆಲಿಕಾಪ್ಟರ್, ದೋಣಿ, ರಿಕ್ಷಾ, ವಿಮಾನ, ಸೈಕಲ್, ಮೆಟ್ರೋ, ರಾಕೇಟ್, ರೈಲು, ತೆಪ್ಪ, ಹಡಗು, ಚಂದ್ರಯಾನ



**ಕೆಳಗಿನ ಕೃತಿಗಳನ್ನು ಪೂರ್ಣ ಮಾಡಿರಿ.**

ಸಿಗ್ನಲ್ ಮೇಲಿನ ಬಣ್ಣದ ದೀಪಗಳ ಅರ್ಥವನ್ನು ಬರೆಯಿರಿ.



(1) ---------------------------------------------------------------

---------------------------------------------------------------

(2) ---------------------------------------------------------------

---------------------------------------------------------------

(3) ---------------------------------------------------------------

---------------------------------------------------------------

**ರಸ್ತೆ ಮೇಲಿನ ಗುರುತುಗಳು, ಚಿಹ್ನೆಗಳು ಮತ್ತು ಅವುಗಳ ಅರ್ಥಗಳನ್ನು ಹೊಂದಿಸಿರಿ.**

| ಗುಂಪು 'ಅ' | ಗುಂಪು 'ಬ' |
|---|---|
|  | **ಇಲ್ಲಿ ವಾಹನಗಳನ್ನು ನಿಲ್ಲಿಸಬಾರದು** |
|  | **ಹಾರ್ನ್ ಬಾರಿಸಬೇಡಿ** |
|  | **ಸ್ಪಿಡ ಬ್ರೇಕರ್ / ಗತಿರೋಧಕ** |
|  | **ಕೆಲಸಗಾರ ಕೆಲಸ ಮಾಡುತ್ತಿದ್ದಾನೆ** |
|  | **ಮುಂದೆ ಶಾಲೆ ಇದೆ** |

**ಸರಕು ಸಾಗಾಣಿಕೆ**

ವಸ್ತು, ಸರಕು ಅಥವಾ ಕಚ್ಚಾ ಸರಕು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವ ಪ್ರಕ್ರಿಯೆಗೆ ಸರಕು ಸಾಗಾಣಿಕೆ ಎನ್ನುತ್ತಾರೆ. ದೊಡ್ಡ-ದೊಡ್ಡ ವಸ್ತುಗಳಿಂದ ಹಿಡಿದು ನಾಜೂಕಾದ ಗಾಜಿನ ಸಾಮಾನುಗಳವರೆಗೆ ಸರಕುಗಳನ್ನು ಸಾಗಿಸಲಾಗುತ್ತದೆ. ಅವುಗಳನ್ನು ಅವಶ್ಯಕತೆಗೆ ಅನುಗುಣವಾಗಿ ಟ್ರಕ್, ರೈಲು, ಹಡಗು ಅಥವಾ ವಿಮಾನಗಳಂತಹ ವಾಹನಗಳ ಮೂಲಕ ಸಾಗಿಸಲಾಗುತ್ತದೆ. ಸರಕುಗಳನ್ನು ಸಾಗಿಸುವ ರೈಲನ್ನು 'ಸರಕು ಸಾಗಾಣಿಕ ರೈಲು' ಎಂದು ಕರೆಯಲಾಗುತ್ತದೆ.

ದೊಡ್ಡ ನಗರಗಳಲ್ಲಿ, ನೀರು ಗ್ಯಾಸ್‌ದಂತಹ ಸಂಗತಿಗಳನ್ನು ಪೈಪ್‌ಗಳ ಮೂಲಕ ಸಾಗಿಸಲಾಗುತ್ತದೆ.

**ಪೋಷಕರ ಸಹಾಯದಿಂದ ತಿಳಿದುಕೊಳ್ಳೋಣ.**

- ಯಾವ ವಾಹನಕ್ಕೆ ಇಂಧನದ ಅವಶ್ಯಕತೆ ಇಲ್ಲ ಅಂತಹ ವಾಹನ ಯಾವುದು?
- ದುರ್ಗಮ ಪರ್ವತ/ಗುಡ್ಡಗಾಡು ಪ್ರದೇಶಗಳಲ್ಲಿ ಪ್ರಯಾಣಿಸಲು ಯಾವ ಪ್ರಾಣಿಗಳನ್ನು ಬಳಸಲಾಗುತ್ತದೆ?




ಆಧುನಿಕ ಕಾಲದಲ್ಲಿಯ ವಿದ್ಯುತ್ (EV) ವಾಹನಗಳು



ರಸ್ತೆಗಳನ್ನು ನಿರ್ಮಿಸಲು ಕಷ್ಟಕರವಾದ ಸ್ಥಳಗಳಲ್ಲಿ ರೋಪ್-ವೇಗಳನ್ನು ಬಳಸಲಾಗುತ್ತದೆ. ಪರ್ವತ ಹಾಗೂ ದುರ್ಗಮ ಪ್ರದೇಶಗಳಲ್ಲಿ ಅಥವಾ ಗಣಿಗಳಲ್ಲಿ, ರೋಪ್-ವೇಗಳನ್ನು ಬಳಸಲಾಗುತ್ತದೆ. ಉದಾ. ರಾಯಗಡ ರೋಪ್-ವೇ.



ಹಿಂದಿನ ಕಾಲದಲ್ಲಿ, ಜನರು ಪ್ರಯಾಣಕ್ಕಾಗಿ ಪಲ್ಲಕ್ಕಿಗಳು ಅಥವಾ ಪೆಟ್ಟಿಗೆಗಳನ್ನು ಬಳಸುತ್ತಿದ್ದರು.



ಮೆಟ್ರೋ



**ವಿಚಾರ ಮಾಡಿರಿ.**

ನಿಮಗೆ ಚಂದ್ರಪುರದ ತಾಡೋಬಾ ಹುಲಿ ಅಭಯಾರಣ್ಯಕ್ಕೆ ಭೇಟಿ ನೀಡಲು ಹೋಗುವುದಿದೆ. ನೀವೂ ಎರಡು ದಿನಗಳ ಕಾಲ ಅಲ್ಲಿಯೇ ಇರುವುವರಿದ್ದಿರಿ. ಈ ಪ್ರವಾಸಕ್ಕೆ ಹೋಗಲು ನೀವು ಹೇಗೆ ತಯಾರಿ ಮಾಡುವಿರಿ?

- ಪ್ರವಾಸಕ್ಕೆ ಯಾವಾಗ ಹೊರಡುತ್ತೀರಿ? ..............................
- ಪ್ರವಾಸದ ಸಾಧನಗಳು ..............................
- ಪ್ರವಾಸಕ್ಕೆ ಬೇಕಾದ ಸಮಯ ..............................
- ಪ್ರವಾಸಕ್ಕೆ ಬೇಕಾಗುವ ಸಾಮಗ್ರಿಗಳು ..............................
- ಮಾರ್ಗದಲ್ಲಿಯ ಪ್ರಮುಖ ಸ್ಥಳಗಳು ..............................

## ನಿಮಗೆ ಇದು ಗೊತ್ತಿದೆಯೇ?

- 16 ಎಪ್ರಿಲ್ 1853 ರಂದು, ಭಾರತದ ಮೊದಲನೆಯ ರೈಲು ಮುಂಬಯಿದಿಂದ ಠಾಣೆಯ ವರೆಗೆ ಓಡಿಸಲಾಯಿತು. ಅದನ್ನು ಕಲ್ಲಿದ್ದಲಿನಿಂದ ನಡೆಸಲಾಗಿತ್ತು.
- ಭಾರತದ ಮೊದಲನೆಯ ಮೆಟ್ರೋ ಕೋಲಕತ್ತಾದಲ್ಲಿ ಪ್ರಾರಂಭಿಸಲಾಯಿತು.
- ಮಹಾಪೂರ ಪರಿಸ್ಥಿತಿ ಉದ್ಭವಿಸಿದಾಗ ಅಲ್ಲಿಗೆ, ಬೇರೆ ಯಾವುದೇ ಸಾರಿಗೆ ಸಾಧನಗಳಿಂದ ತಲುಪಲು ಸಾಧ್ಯವಾಗದಿದ್ದರೆ, ಪ್ಯಾರಾಶೂಟಗಳ ಸಹಾಯದಿಂದ ಸಂಪರ್ಕ ಸಾಧಿಸಬಹುದು. ಜೀವನಾವಶ್ಯಕ ವಸ್ತುಗಳನ್ನು ತಲುಪಿಸಲು ಪ್ಯಾರಾಶೂಟಗಳನ್ನು ಬಳಸಬಹುದು.



**ಸಂದೇಶ ವಹನ :**

ಮಾಹಿತಿಯ ಆದಾನ - ಪ್ರಧಾನಕ್ಕೆ 'ಸಂದೇಶವಹನ'ವೆಂದು ಕರೆಯುತ್ತಾರೆ.

**ವಿಚಾರ ಮಾಡಿರಿ.**

ನಿಮ್ಮ ಸ್ನೇಹಿತನು ಬೇರೆ ಊರಲ್ಲಿ ವಾಸಿಸುತ್ತಿದ್ದಾನೆ ಮತ್ತು ನೀವು ಅವನ ಹುಟ್ಟುಹಬ್ಬಕ್ಕೆ ಶುಭ ಹಾರೈಸಲು ಬಯಸಿದರೆ, ಈ ಕೆಳಗಿನವುಗಳಲ್ಲಿ ಯಾವ ಪರ್ಯಾಯವು ನಿಮಗೆ ಸುಲಭವಾಗಿದೆ?

- ತಕ್ಷಣ ಅವನ ಮನೆಗೆ ಹೋಗುವುದು.
- ಅಂಚೆ ಮೂಲಕ ಅವನಿಗೆ ಪತ್ರ ಅಥವಾ ಉಡುಗೊರೆ ಕಾರ್ಡ್ ಕಳುಹಿಸುವದು.
- ಅವನನ್ನು ದೂರವಾಣಿ ಮೂಲಕ ಸಂಪರ್ಕಿಸುವದು.
- ಅವನಿಗೆ ಮೊಬೈಲ್ ಫೋನ್‌ನಿಂದ ಶುಭಾಶಯ ಸಂದೇಶವನ್ನು ಕಳುಹಿಸುವುದು.
- ಇ-ಮೇಲ್ ಮಾಡುವುದು.
- ಪಾರಿವಾಳದ ಕಾಲಿಗೆ ಒಂದು ಚೀಟಿ ಕಟ್ಟಿ ಅದನ್ನು ಆತನ ಕಡೆಗೆ ಕಳುಹಿಸುವದು.

## ನಿಮಗೆ ಇದು ಗೊತ್ತಿದೆಯೇ?

ಹಿಂದಿನ ಕಾಲದಲ್ಲಿ ಪಾರಿವಾಳಗಳ ಮೂಲಕ ಸಂದೇಶವನ್ನು ಕಳುಹಿಸಲಾಗುತ್ತಿತ್ತು. ಅದಕ್ಕಾಗಿ ಪಾರಿವಾಳಗಳನ್ನು ಸಾಕಿ ಅವುಗಳಿಗೆ ಪ್ರಶಿಕ್ಷಣ ಕೊಡಲಾಗುತ್ತಿತ್ತು. ಹಿಂದೆ ರಾಜರ ಸಂದೇಶ ವಾಹಕರು (ದೂತ) ಕುದುರೆಗಳು ಅಥವಾ ಒಂಟೆಗಳ ಮೇಲೆ ಸಂದೇಶಗಳನ್ನು ಕಳುಹಿಸುತ್ತಿದ್ದರು. ಈ ಕೆಲಸ ಕಷ್ಟಕರ ಮತ್ತು ಅಪಾಯಕಾರಿಯಾಗಿತ್ತು. ನಂತರ, ಅಂಚೆ ಸೇವೆಯನ್ನು ಪ್ರಾರಂಭಿಸಲಾಯಿತು.

**ಅಂಚೆ :** ನಾವು ದೇಶಾದ್ಯಂತ ಮತ್ತು ವಿದೇಶಗಳಿಗೆ ಅಂಚೆ ಮೂಲಕ ಪತ್ರಗಳು ಮತ್ತು ವಸ್ತುಗಳನ್ನು ಕಳುಹಿಸಬಹುದು. ಮಹತ್ವದ ಪತ್ರಗಳನ್ನು ಸಾಧ್ಯವಾದಷ್ಟು ಬೇಗ ತಲುಪಿಸಲು 'ಸ್ಪೀಡ್ ಪೋಸ್ಟ್' ಸೌಲಭ್ಯವನ್ನು ಬಳಸಲಾಗುತ್ತದೆ. ಬಸ್ಸುಗಳು, ರೈಲುಗಳು, ಹಡಗುಗಳು ಮತ್ತು ವಿಮಾನಗಳಂತಹ ವಾಹನಗಳನ್ನು ನಮ್ಮ ವಸ್ತುಗಳನ್ನು ದೇಶಾ ವಿದೇಶಗಳಿಗೆ ಕಳುಹಿಸಲು ಬಳಸಲಾಗುತ್ತದೆ.

**ನೀವೂ ಎಂದಾದರೂ ಅಂಚೆ ಕಚೇರಿಗೆ ಹೋಗಿದ್ದೀರಾ? ಅಲ್ಲಿ ಏನು ನೋಡಿದ್ದೀರಿ ಎಂಬೂದನ್ನು ಹೇಳಿರಿ.**

**ದೂರವಾಣಿ :** ದೂರವಾಣಿಯ ಆವಿಷ್ಕಾರದಿಂದ ಜಗತ್ತಿನಲ್ಲಿ ಒಂದು ದೊಡ್ಡ ಕ್ರಾಂತಿಯನ್ನು ತಂದಿತು. ದೂರದಲ್ಲಿ ವಾಸಿಸುವ ಜನರ ಜೊತೆಗೆ ಸುಲಭವಾಗಿ ಸಂವಾದ ಸಾಧಿಸಲು ಸಾಧ್ಯವಾಯಿತು. ಜಗತ್ತು ಹತ್ತಿರ ಬಂದಿತು. ಅದರ ಅತ್ಯಾಧುನಿಕ ರೂಪ ವೆಂದರೆ 'ಮೊಬೈಲ್ ಫೋನ್'.


ಡ್ರೋನ್

**ಸಂದೇಶ ಸಂವಹನ ಮತ್ತು ಮಾಹಿತಿ ಪ್ರಸರಣದ ಇತರ ಸಾಧನಗಳು:**

ರೇಡಿಯೋ, ಟಿವ್ಹಿ, ಮಾಸಿಕಗಳು, ವೃತ್ತಪತ್ರಿಕೆಗಳು ಡ್ರೋನ್‌ಗಳು ಇವುಗಳ ಮೂಲಕ ಸಂದೇಶವಹನ ನಡೆಸಲಾಗುತ್ತದೆ. ವಿವಿಧ ರೀತಿಯ ಮಾಹಿತಿಯನ್ನು ಒದಗಿಸಲಾಗುತ್ತದೆ.

## ನಿಮಗೆ ಇದು ಗೊತ್ತಿದೆಯೇ?

- ಅಂಚೆ ಟಿಕೆಟ್‌ಗಳು ನಮಗೆ ಬಹಳಷ್ಟು ಮಾಹಿತಿಯನ್ನು ಒದಗಿಸುತ್ತೇವೆ. ಅವುಗಳ ಮೇಲೆ ಪ್ರಮುಖ ಘಟನೆಗಳ ಮತ್ತು ಮಹತ್ವದ ವ್ಯಕ್ತಿಗಳ ಚಿತ್ರಗಳು ಮುದ್ರಿಸಲಾಗುತ್ತದೆ. ಉದಾ. ಬಿರಸಾ ಮುಂಡಾ ಇವರೊಬ್ಬ ಕ್ರಾಂತಿಕಾರಕರಿದ್ದರು. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಈ ಟಿಕೆಟ್ ಅವರದ್ದಾಗಿದೆ.



ಬಿರಸಾ ಮುಂಡಾ

- ಕೆಲವರು ದೇಶೀಯ-ವಿದೇಶಿಯ ಅಂಚೆ ಟಿಕೆಟ್‌ಗಳನ್ನು ಸಂಗ್ರಹಿಸುತ್ತಾರೆ.
- ಭಾರತದ ಮೊದಲ ಅಂಚೆ ಕಚೇರಿಯನ್ನು 1774ರಲ್ಲಿ ಕೋಲಕತ್ತಾದಲ್ಲಿ ಆರಂಭಿಸಲಾಯಿತು.
- ಭಾರತದ ಮೊದಲ ನಾಗರಿಕ ವಿಮಾನಯಾನ ಕಂಪನಿ ಟಾಟಾ ಏರ್‌ಲೈನ್ಸ್ ಅನ್ನು 1932 ರಲ್ಲಿ ಮುಂಬಯಿನಲ್ಲಿ ಸ್ಥಾಪಿಸಲಾಯಿತು
- ಜಗತ್ತಿನಾದ್ಯಂತ ಸಂದೇಶ ವಹನಕ್ಕಾಗಿ ಉಪಗ್ರಹಗಳನ್ನು ಬಳಸಲಾಗುತ್ತದೆ.


ಉಪಗ್ರಹ

**ಕಂಡು ಹಿಡಿಯಿರಿ.**

- ದೂರವಾಣಿಯನ್ನು ಕಂಡುಹಿಡಿದವರು ಯಾರು?
- ಕಂಪ್ಯೂಟರ್/ಸಂಗಣಕ ಕಂಡುಹಿಡಿದವರು ಯಾರು?

## ಸ್ವಾಧ್ಯಾಯ

**ಪ್ರ.1 ಹೆಸರುಗಳನ್ನು ಬರೆಯಿರಿ.**

(ಅ) ರಸ್ತೆಯ ಮೇಲೆ ಸಂಚರಿಸುವ ವಾಹನಗಳು ------------------------------------------------

(ಆ) ಜಲಮಾರ್ಗ ಮೂಲಕ ಸಂಚರಿಸುವ ವಾಹನಗಳು ------------------------------------------------

(ಇ) ಲೋಹ ಮಾರ್ಗದ ಮೂಲಕ ಸಂಚರಿಸುವ ವಾಹನಗಳು ------------------------------------------------

(ಈ) ವಾಯು ಮಾರ್ಗದಿಂದ ಸಂಚರಿಸುವ ವಾಹನಗಳು ------------------------------------------------

**ಪ್ರ.2 ಸಂಕಲ್ಪನೆ ಚಿತ್ರ ಪೂರ್ಣ ಮಾಡಿರಿ.**




**ಪ್ರ.3 ಯೋಗ್ಯ ಪರ್ಯಾಯಕ್ಕೆ ಗೋಲು ಹಾಕಿರಿ.**

(1) ಸರಕು ಸಾಗಾಣಿಕೆಯ ರೈಲು ಗಾಡಿ – (ಮೆಟ್ರೋ, ಸರಕು ರೈಲು, ಲೋಕಲ್ ಟ್ರೇನ್)

(2) ಗುಡ್ಡಗಾಡು ಪ್ರದೇಶಗಳಲ್ಲಿ ಮತ್ತು ಗಣಿಗಳಲ್ಲಿ ಬಳಸುವ ವಾಹನಗಳ ಪ್ರಕಾರ – (ಪಲ್ಲಕ್ಕಿ, ರಿಕ್ಷಾ, ರೋಪ–ವೇ)

(3) ಅತಿ ಶಿಘ್ರ ಪತ್ರಗಳನ್ನು ತಲುಪಿಸುವ ಸೌಲಭ್ಯ – (ಟಪಾಲು, ಸ್ಪೀಡ್ ಪೋಸ್ಟ್, ಟೆಲಿಗ್ರಾಮ್)

(4) ಪ್ರಾಚೀನ ಕಾಲದಲ್ಲಿ ಸಂದೇಶಗಳನ್ನು ಕಳುಹಿಸಲು ಬಳಸುತ್ತಿದ್ದ ಪಕ್ಷಿ – (ಹದ್ದು, ಪಾರಿವಾಳ, ಗಿಳಿ)

**ಪ್ರ.4 ಪಠ್ಯಪುಸ್ತಕದ ಆರಂಭದಲ್ಲಿ QR ಕೋಡ್‌ನಲ್ಲಿ ನೀಡಲಾದ ಮಹಾರಾಷ್ಟ್ರದ ಪ್ರವಾಸಿ ನಕಾಶೆಯನ್ನು ನಿಮ್ಮ ಮುಂದೆ ಇಟ್ಟುಕೊಂಡು, ನೀವು ನಿಮ್ಮ ವಾಸಿಸುವ ಸ್ಥಳದಿಂದ ನಿಮ್ಮ ಇಷ್ಟವಾದ ಯಾವುದೇ ಪ್ರವಾಸಿ ಸ್ಥಳಕ್ಕೆ ಹೋಗುವುದಿದೆ.**

(1) ನೀವು ಯಾವ ವಾಹನಗಳನ್ನು ಬಳಸುವಿರಿ?

(2) ದಾರಿಯಲ್ಲಿ ಯಾವ ದೊಡ್ಡ ಊರು ಹತ್ತುತ್ತವೆ?

(3) ಅಲ್ಲಿ ಮುಖ್ಯವಾಗಿ ಏನನ್ನು ನೋಡಲು ದೊರಕುವುದು?

**ಪ್ರ.5 ಮೊಬೈಲ್ ಫೋನ್‌ಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿರಿ. ಆದರ ಲಾಭ ಹಾಗೂ ಹಾನಿಗಳ ಬಗ್ಗೆ ಮಾಹಿತಿಯನ್ನು ಬರೆಯಿರಿ.**

| ಲಾಭ | ಹಾನಿ |
|---|---|
| ------------------------------------------ | ------------------------------------------ |
| ------------------------------------------ | ------------------------------------------ |
| ------------------------------------------ | ------------------------------------------ |

**ಉಪಕ್ರಮ**

- ಪ್ರಾಚೀನ ಕಾಲದಲ್ಲಿ ಬಳಸುತ್ತಿದ್ದ ಸಾರಿಗೆ ಸಾಧನಗಳ ಚಿತ್ರಗಳನ್ನು ತೆಗೆದುಕೊಂಡು, ಅವುಗಳನ್ನು ಒಂದು ವಹಿಯಲ್ಲಿ ಅಂಟಿಸಿರಿ ಮತ್ತು ಹೆಸರುಗಳನ್ನು ಬರೆಯಿರಿ.
- ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಅಂಗವಿಕಲರಿಗೆ ಯಾವ ಸೌಲಭ್ಯಗಳಿವೆ? ಪೋಷಕರ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಿ ಬರೆಯಿರಿ.

***

# 9. ಐತಿಹಾಸಿಕ ಕಟ್ಟಡಗಳು

'ಜೀವನ ಶಿಕ್ಷಣ ವಿದ್ಯಾ ಮಂದಿರ' ಶಾಲೆಯ ದ್ವಿತೀಯ ಸತ್ರ ಪ್ರಾರಂಭವಾಯಿತು. ಶಿಕ್ಷಕರು ತರಗತಿಯಲ್ಲಿ ಬಂದರು. ಅವರು ಮಕ್ಕಳಿಗೆ ರಜೆಯ ದಿನಗಳಲ್ಲಿ ಏನೇನು ಮಾಡಿದ್ದೀರಿ? ಎಂದು ಕೇಳಿದರು. ನಿಮ್ಮಲ್ಲಿ ಯಾರಾದರೂ ಬೇರೆ ಊರಿಗೆ ಹೋಗಿದ್ದೀರಾ ಎಂದು ಕೇಳಿದರು. ಕೆಲವು ವಿದ್ಯಾರ್ಥಿಗಳು ಕೈ ಎತ್ತಿದರು. ಶಿಕ್ಷಕರು ಕೇಳಿದಳು 'ನೀವು ಭೇಟಿ ನೀಡಿದ ಸ್ಥಳದಲ್ಲಿನ ಗುಹೆಗಳು, ಕೋಟೆಗಳು, ಅರಮನೆಗಳು, ಮಹಾನ್ ವ್ಯಕ್ತಿಗಳ ಜನ್ಮಸ್ಥಳಗಳು, ವಸ್ತುಸಂಗ್ರಹಾಲಯಗಳು, ಸ್ತಂಭಗಳು ಮುಂತಾದ ಐತಿಹಾಸಿಕ ಫೋಟೋಗಳನ್ನು ನನಗೆ ಮೊಬೈಲ್‌ನಲ್ಲಿ ಕಳುಹಿಸಿರಿ. ಮುಂದಿನ ವಾರದಲ್ಲಿ ನಾವು ಅವುಗಳ ಪ್ರದರ್ಶನವನ್ನು ಆಯೋಜಿಸೋಣ.

**ವಿಚಾರ ಮಾಡಿರಿ.**

**ರಜೆಯಲ್ಲಿ ನೀವು ಯಾವ ಯಾವ ಹೊಸ ಚಟುವಟಿಕೆಗಳನ್ನು ಮಾಡಬಹುದು?**

ಶಿಕ್ಷಕರು ವರ್ಗದಲ್ಲಿ ಬಂದರು ಮತ್ತು ಎಲ್ಲಾ ಮಕ್ಕಳಿಗೆ ಕಣ್ಣು ಮುಚ್ಚಲು ಹೇಳಿದರು ಯಾರೂ ಕಣ್ಣು ತೆರೆಯಬೇಡಿರಿ, ಸಪ್ಪಳ ಮಾಡಬೇಡಿರಿ. ಹೀಗೆ ಸೂಚನೆ ಕೊಟ್ಟರು. ಶಿಕ್ಷಕರು ತರಗತಿಯಲ್ಲಿ ಫಲಕದ ಮೇಲೆ ಕಾಗದಗಳನ್ನು ಅಂಟಿಸಿದರು. ಮಕ್ಕಳಿಗೆ ಕಾಗದಗಳನ್ನು ಅಂಟಿಸುವ ಸಪ್ಪಳ ಕೇಳಿಸಿತು. ಸೂಚನೆ ನೀಡಿದ ತಕ್ಷಣ ಮಕ್ಕಳು ತಮ್ಮ ಕಣ್ಣುಗಳನ್ನು ತೆರೆದರು. ಅವರಿಗೆ ಆಶ್ಚರ್ಯವಾಯಿತು. ಮಕ್ಕಳು ಒಂದೇ ಧ್ವನಿಯಲ್ಲಿ 'ವಾವ್! ವಾವ್!' ಎಂದು ಉದ್ಗರಿಸಿದರು.

ಮಕ್ಕಳ ರಜೆಯಲ್ಲಿ ನೋಡಿದ ಕಟ್ಟಡಗಳ ಮತ್ತು ವಸ್ತುಗಳ ಫೋಟೋಗಳನ್ನು ಹೊಂದಿರುವ ಎರಡು ಅಥವಾ ಮೂರು ದೊಡ್ಡ ಕಾಗದದ ಹಾಳೆಗಳು ಇದ್ದವು. ಮಕ್ಕಳು ತಾವು ತೆಗೆದ ಫೋಟೋಗಳನ್ನು ನೋಡಿ ಸಂತೋಷಪಟ್ಟರು. ಆಗ ಶಿಕ್ಷಕರು ''ಈಗ, ಒಂದೊಂದಾಗಿ, ನೀವು ತೆಗೆದ ಫೋಟೋಗಳ ಬಗ್ಗೆ ನಮಗೆ ಮಾಹಿತಿ ಹೇಳಿರಿ. ಮೊದಲು ನಮಗೆ ಯಾರು ಹೇಳುವಿರಿ''? ಎಂದರು.

**ಇದನ್ನು ಮಾಡಿ ನೋಡಿರಿ.**

**ನೀವು ಭೇಟಿ ನೀಡಿದ ಐತಿಹಾಸಿಕ ಸ್ಥಳಗಳ ಪ್ರವಾಸದ ಫೋಟೋಗಳ ಚಾರ್ಟ್‌ನ್ನು ತಯಾರಿಸಿರಿ. ತರಗತಿಯಲ್ಲಿ ಚಾರ್ಟ್‌ಗಳನ್ನು ಪ್ರದರ್ಶಿಸಿರಿ.**

ಉಮಾ ಕೈ ಎತ್ತಿ ಹೇಳಿದಳು, ''ಮೇಡಂ, ನಾನು ನನ್ನ ತಂದೆ ತಾಯಿಯವರು ಜೊತೆಗೆ ಶಿವನೇರಿ ಕೋಟೆಗೆ ಹೋಗಿದ್ದೆ. ನನ್ನ ತಂದೆ ತಾಯಿಯವರು ಶಿವರಾಯರ ಜನಿಸಿದ ಕೋಟೆಯ ಕಥೆಯನ್ನು ನನಗೆ ಹೇಳಿದರು. ಶಿವನೇರಿಯ ಮೇಲೆ ನಾನು ಗುಹೆಗಳು, ಜಲಪಾನ ಕೇಂದ್ರ, ತಟರಕ್ಷಣೆ ಗೋಡೆ, ಶಿವಾಯಿ ದೇವಿಯ ಮಂದಿರ, ಗೋಪುರಗಳನ್ನು ನೋಡಿದೆ. ನಾನು ಈ ಪ್ರವಾಸವನ್ನು ಎಂದಿಗೂ ಮರೆಯುವುದಿಲ್ಲ''.



ಛತ್ರಪತಿ ಶಿವಾಜಿ ಮಹಾರಾಜರ ಜನ್ಮಸ್ಥಾನ – ಶಿವನೇರಿ ಕೋಟೆ



ನಂದಿವರ್ಧನ (ನಗರಧನ) ಭೂಯಿಕೋಟ ಕೋಟೆ



ರಾಮಟೇಕನಲ್ಲಿಯ ಶ್ರೀ ರಾಮ ಮಂದಿರ

ಇದನ್ನು ಕೇಳಿ ನಂದು ಎದ್ದು ನಿಂತನು, ಅವನು ಅಂದನು, ''ನಾನು ವಿದರ್ಭದ **ರಾಮಟೆಕ**ಗೆ ಹೋಗಿದ್ದೆ. ರಾಮಟೆಕ ಇದು ನಾಗಪೂರ ಜಿಲ್ಲೆಯಲ್ಲಿಯ ಒಂದು ನಗರವಿದೆ. ರಾಮಟೆಕನಲ್ಲಿ ಪ್ರಭು ಶ್ರೀರಾಮನ ದೇವಸ್ಥಾನವಿದೆ. ರಾಮ ನವಮಿಯಂದು ಇಲ್ಲಿ ಜಾತ್ರೆ ನೆರೆಯುತ್ತದೆ. ಮಹಾಕವಿ ಕಾಳಿದಾಸರು ಮೇಘದೂತ ಈ ಮಹಾಕಾವ್ಯವನ್ನು ಇಲ್ಲಿಯೇ ರಚಿಸಿದ್ದಾರೆ''. ರಾಮಟೆಕ ಹತ್ತಿರ ನಂದಿವರ್ಧನ (ನಗರಧನ) ಎಂಬ ಭೂಯಿಕೊಟ ಕೋಟೆ ಇದೆ. ಎಲ್ಲ ಮಕ್ಕಳು ಕುತೂಹಲದಿಂದ ನೋಡುತ್ತಿದ್ದರು.

ಶಿಕ್ಷಕರು ಒಂದು ಫೋಟೋ ತೋರಿಸಿ ''ಈ ವಾಡೆಗೆ ಯಾರು ಭೇಟಿ ನೀಡಿದ್ದೀರಿ?'' ಎಂದು ಕೇಳಿದಳು. ಗಾರ್ಗಿ ಕೈ ಎತ್ತಿದಳು. ಗಾರ್ಗಿ ಹೇಳತೊಡಗಿದಳು, ''ನಾವು ರಜೆಯಲ್ಲಿ ಪುಣೆಗೆ ಹೋಗಿದ್ದೆವು. ಪುಣೆಯಲ್ಲಿ ಮಹಾತ್ಮ ಫುಲೆ ಮತ್ತು ಸಾವಿತ್ರಿಬಾಯಿಫುಲೆಯವರ ಮನೆಯನ್ನು ನೋಡಿದೆವು. ಅವರ ಮನೆಯ ಆವರಣದಲ್ಲಿ ಒಂದು ಸಣ್ಣ ಬಾವಿ ಇದೆ. ಆ ಸಮಯದಲ್ಲಿ ಮಹಾತ್ಮ ಫುಲೆಯವರು ಎಲ್ಲಾ ಜಾತಿ ಮತ್ತು ಧರ್ಮದ ಜನರಿಗೆ ಈ ಬಾವಿಯಿಂದ ನೀರು ತುಂಬಲು ಅವಕಾಶ ನೀಡಿದ್ದರು. **ಫುಲೆ ವಾಡಾ**ವನ್ನು ಮಹಾರಾಷ್ಟ್ರ ಸರಕಾರವು ಪರಂಪರೆಯ ಸ್ಥಳ ವೆಂದು ಘೋಷಿಸಿದೆ''.



ಮಹಾತ್ಮ ಫುಲೆ ವಾಡ-ಬಾವಿ

ತಾಯಿ ನನಗೆ ಹೇಳಿದಳು; ''ಫುಲೆ ದಂಪತಿಗಳಿಂದಾಗಿ ನಾವು ಬಹಳಷ್ಟು ಕಲಿತಿದ್ದೇವೆ. ನನ್ನ ತಾಯಿ ನನಗೆ ಅವರ ಕಥೆಯನ್ನು ಹೇಳಿದಳು. ನಂತರ ನಾವು ಅವರ ಹೆಸರಿನ **'ಸಾವಿತ್ರಿಬಾಯಿ ಫುಲೆ' ಪುಣೆ ವಿಶ್ವವಿದ್ಯಾಲಯಕ್ಕೆ** ಭೇಟಿ ನೀಡಿದ್ದೇವೆ. ವಿಶ್ವವಿದ್ಯಾಲಯದ ಆವರಣವನ್ನು ನೋಡಿ ನಾವು ಸುಸ್ತಾದೇವು. ವಸ್ತುಸಂಗ್ರಹಾಲಯಗಳು, ಉದ್ಯಾನಗಳು, ಪ್ರತಿಮೆಗಳು, ಪ್ರಯೋಗಶಾಲೆಗಳು, ಗ್ರಂಥಾಲಯಗಳು, ಸುರಂಗ ಮಾರ್ಗಗಳು, ಹೀಗೆ ಎಲ್ಲವನ್ನು ನೋಡಿದ್ದೇವೆ.

ಅಲ್ಲಿಂದ ಸೇನಾಪತಿ ಬಾಪಟ ರಸ್ತೆಯಲ್ಲಿರುವ **'ಭಾರತ ರತ್ನ ಡಾ. ಬಾಬಾಸಾಹೇಬ್ ಅಂಬೇಡಕರ'** ಸಂಗ್ರಹಾಲಯ ನೋಡಲು ಹೋಗಿದ್ದೇವು. ಡಾ. ಬಾಬಾಸಾಹೇಬ್ ಅಂಬೇಡಕರ ಅವರು ಎಷ್ಟು ಅಭ್ಯಾಸ ಮಾಡಿದ್ದಾರೆ ಮತ್ತು ಅಭ್ಯಾಸದಿಂದಾಗಿ ಅವರು ಹೇಗೆ ಮಹಾನರಾದರು ಎಂದು ನನ್ನ ತಾಯಿ ನನಗೆ ಹೇಳಿದಳು. ಆ ಸಂಗ್ರಹಾಲಯದಲ್ಲಿ ಅವರು

ಪಡೆದ 'ಭಾರತ ರತ್ನ' ಪದಕವನ್ನು ಇರಿಸಲಾಗಿದೆ. ಈ ಹೊಸ ಮಾಹಿತಿ ನನಗೆ ದೊರಕಿತು. ನಮ್ಮ ಪಠ್ಯಪುಸ್ತಕಗಳನ್ನು ತಯಾರಿಸುವ **'ಬಾಲಭಾರತಿ'** ಕಟ್ಟಡಕ್ಕೂ ನಾವು ಭೇಟಿ ನೀಡಿದ್ದೇವೆ, ಅಲ್ಲಿ ನಮ್ಮ ಪಠ್ಯಪುಸ್ತಕಗಳನ್ನು ತಯಾರಿಸಲಾಗುತ್ತದೆ''.



ಭಾರತ ರತ್ನ ಪದಕ

ಜಾಫರ ಹೇಳಿದನು, ''ನಾನು ಬುಲಡಾನಾಗೆ ಹೋಗಿದ್ದೆ. ಅಲ್ಲಿ ಉಲ್ಕಾಪಾತದಿಂದಾಗಿ ತಯಾರಾದ **'ಲೋಣಾರ ಸರೋವರ'**ವನ್ನು ನಾನು ನೋಡಿದೆ. ಈ ಸರೋವರದ ನೀರು ಕ್ಷಾರಯುಕ್ತವಾಗಿರುವುದರಿಂದ ಕುಡಿಯಬೇಡ ಎಂದು ನನ್ನ ತಂದೆಯವರು ಹೇಳಿದರು. ನನಗೆ ಆಶ್ಚರ್ಯವೆನಿಸಿತು. ಬರುವಾಗ ರಾಜಮಾತಾ ಜಿಜಾವು ಅವರ ಜನ್ಮಸ್ಥಳವಾದ **ಸಿಂಧಖೇಡ್ ರಾಜಾ** ಗ್ರಾಮವನ್ನು ನೋಡಿದ್ದೇವು''.

ನಾನು ಮುಂಬೈಗೆ ಹೋಗಿದ್ದೆ. ನನ್ನ ಜೀವನದಲ್ಲಿ ಮೊದಲ ಬಾರಿಗೆ ಸಮುದ್ರ ನೋಡಿದೆ. ಸಮುದ್ರ ದಂಡೆಯಲ್ಲಿರುವ **'ಗೇಟ ವೇ ಆಫ ಇಂಡಿಯಾ'** ಈ ವಾಸ್ತು ನೋಡಿದೆ. ಎಂದು ಫಾತಿಮಾ ಹೇಳಿದಳು.


ಲೋಣಾರ ಸರೋವರ

ಅಮೃತಾ ಹೇಳಿದಳು, ''ನಾನು ಕೊಂಕಣಕ್ಕೆ ಹೋಗಿದ್ದೆ. ನಾನು **'ಸಿಂಧುದುರ್ಗ'** ಈ ಜಲದುರ್ಗವನ್ನು ನೋಡಿದೆ. ಈ ಕೋಟೆಯನ್ನು ನೋಡಲು ನಮಗೆ ಸಮುದ್ರಮೂಲಕ ದೋಣಿಯಲ್ಲಿ ಪ್ರವಾಸ ಮಾಡಬೇಕಾಯಿತು. ದೋಣಿಯು ಅಲ್ಲಾಡುತ್ತಿತ್ತು. ನಾನು ಮೊದಲು ಬಾರಿಗೆ ನೀರಿನಲ್ಲಿಯ ಕೋಟೆಯನ್ನು ನೋಡಿದೆ. ಈ ಕೋಟೆಯಲ್ಲಿ ಸಿಹಿನೀರಿನ ಬಾವಿ ಇದೆ.


ಸಿಂಧುದುರ್ಗ

ನಂತರ, ನಾವು 'ರೋಪ-ವೇ' ಸಹಾಯದಿಂದ ರಾಯಗಡ ಕೋಟೆಯ ಮೇಲೆ ಹೋದೆವು. ನಾವು ರೋಪ-ವೇಯನ್ನು ನೋಡಿದೆವು ಮತ್ತು ಅದರಲ್ಲಿ ಕುಳಿತೆವು. **'ರಾಯಗಡ'** ಒಂದು ಭವ್ಯವಾದ ಕೋಟೆಯಾಗಿದೆ. ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕ ಈ ಕೋಟೆಯ ಮೇಲೆ ಆಗಿತ್ತು. ಸ್ವರಾಜ್ಯದ ರಾಜಧಾನಿಯಾಗಿದ್ದ ಈ ಕೋಟೆ ನನಗೆ ತುಂಬಾ ಇಷ್ಟವಾಯಿತು. ಈ ಕೋಟೆಯ ಮೇಲೆ ಛತ್ರಪತಿ ಶಿವಾಜಿ ಮಹಾರಾಜರ ಸಮಾಧಿ ಇದೆ''.



ರಾಯಗಡ ಕೋಟೆ



### ಹೇಳಿರಿ ನೋಡೋಣ!

- ನೀವು ಭೇಟಿ ಕೊಟ್ಟ ಐತಿಹಾಸಿಕ ಸ್ಥಳದ ಮಾಹಿತಿ ಸ್ವಲ್ಪದರಲ್ಲಿ ಹೇಳಿರಿ.
- ಐತಿಹಾಸಿಕ ಸ್ಥಳಕ್ಕೆ ಭೇಟಿ ನೀಡುವಾಗ ಯಾವ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು?
- 'ವಿಶ್ವ ಪರಂಪರೆಯ ಸ್ಥಳ'ಗಳ ಪಟ್ಟಿಯಲ್ಲಿ ಸೇರಿಸಲಾದ ಮಹಾರಾಷ್ಟ್ರದ ಕೋಟೆಗಳ ಬಗ್ಗೆ ಮಾಹಿತಿ ಪೋಷಕರ ಸಹಾಯದಿಂದ, ತಿಳಿದುಕೊಳ್ಳಿರಿ ಹಾಗೂ ತರಗತಿಯಲ್ಲಿ ಹೇಳಿರಿ.

ಶಿಕ್ಷಕರು ಅಂದರು, ''ನೋಡಿ, ನಾವು ಎಷ್ಟೊಂದು ವಿಷಯಗಳನ್ನು ಕಲಿತಿದ್ದೇವೆ. ಹಳೆಯ ಕಟ್ಟಡಗಳನ್ನು ನೋಡುವುದು, ಅವುಗಳ ಬಗ್ಗೆ ಕಲಿಯುವುದು, ಆ ಸ್ಥಳಕ್ಕೆ ಭೇಟಿ ನೀಡುವುದು ಒಂದು ಪರಂಪರೆಯ ಪ್ರವಾಸ. ಇಂದು ನಾವು ಫೋಟೋಗಳ ಮೂಲಕ ಮಾತ್ರ ಪರಂಪರೆಯ ಪ್ರವಾಸವನ್ನು ಕೈಗೊಂಡಿದ್ದೇವೆ. ಅಂತಹ ಐತಿಹಾಸಿಕ ಸ್ಥಳಗಳಲ್ಲಿ ಅನೇಕ ಪರಂಪರೆಯ ಪ್ರವಾಸಗಳನ್ನು ಸಹ ಆಯೋಜಿಸಲಾಗಿದೆ. ಪ್ರವಾಸಗಳು ಹಳೆಯ ವಸ್ತುಗಳು ಮತ್ತು ಕಟ್ಟಡಗಳ ಬಗ್ಗೆ ನಮಗೆ ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ನಾವು ಖಂಡಿತವಾಗಿಯೂ ಅಲ್ಲಿಗೆ ಹೋಗಬೇಕು''.

''ನಾವು ಆ ಸ್ಥಳಗಳ ಕಾಳಜಿ ವಹಿಸಬೇಕು, ಅಲ್ಲವೇ? ಈ ಐತಿಹಾಸಿಕ ಕಟ್ಟಡಗಳ ಮೇಲೆ ನಾವು ನಮ್ಮ ಹೆಸರುಗಳನ್ನು ಬರೆಯಬಾರದು. ಅಲ್ಲಿ ಕಸವನ್ನು ಎಸೆಯಬಾರದು. ಪ್ಲಾಸ್ಟಿಕ್ ಬಾಟಲಿಗಳನ್ನು ಎಸೆಯಬಾರದು. ನಮ್ಮ ಪರಂಪರೆಯನ್ನು ನಾವು ಎಚ್ಚರಿಕೆಯಿಂದ ಸಂರಕ್ಷಿಸಬೇಕು''.

# ಸ್ವಾಧ್ಯಾಯ

**ಪ್ರ.1 ಸಂಕಲ್ಪನೆ ಚಿತ್ರವನ್ನು ಪೂರ್ಣ ಮಾಡಿರಿ.**

(2) **ಶಿವನೇರಿ**
- ಗುಹೆ
- 
- 
- 
- 

(2) **ಸಿಂಧುದುರ್ಗ**
- ಜಲದುರ್ಗ
- 
- 

(3) **ರಾಯಗಡ**
- ಶಿವರಾಯರ ಪಟ್ಟಾಭಿಷೇಕ
- 
- 
- 

**ಪ್ರ.2 ಸರಿಯಾದ ಜೋಡಿಗಳನ್ನು ಹೊಂದಿಸಿರಿ.**

| ಗುಂಪು 'ಅ' | ಗುಂಪು 'ಬ' |
|---|---|
| (1) ರಾಮಟೆಕ್ ಮಂದಿರ | (ಅ) ಸಿಂದಖೇಡ ರಾಜಾ |
| (2) ರಾಜಮಾತಾ ಜಿಜಾವು ಜನ್ಮಸ್ಥಳ | (ಆ) ಸೇನಾಪತಿ ಬಾಪಟ ರಸ್ತೆ, ಪುಣೆ. |
| (3) ಡಾ. ಬಾಬಾಸಾಹೇಬ್ ಅಂಬೇಡಕರ ಸಂಗ್ರಹಾಲಯ | (ಇ) ನಾಗಪೂರ |

**ಪ್ರ.3 ಸರಿಯಾದ ಉತ್ತರ ಬರೆಯಿರಿ.**

(1) ಸಾವಿತ್ರಿಬಾಯಿ ಫುಲೆಯವರ ಹೆಸರಿನ ವಿಶ್ವವಿದ್ಯಾಲಯ –

(2) ಪಠ್ಯಪುಸ್ತಕ ನಿರ್ಮಿತಿ ಕೇಂದ್ರ –

**ಪ್ರ.4 ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

(1) ಸಿಂಧುದುರ್ಗ ಒಂದು ಗಿರಿದುರ್ಗವಾಗಿದೆ.

(2) ಶಿವನೇರಿ ಕೋಟೆಗೆ ರೋಪ-ವೇ ಮೂಲಕ ಹೋಗಬೇಕಾಗುತ್ತದೆ.

**ಪ್ರ.5 ಯಾವ ಕಾಳಜಿ ತೆಗೆದುಕೊಳ್ಳುವಿರಿ?**

**ಐತಿಹಾಸಿಕ ಕಟ್ಟಡಗಳು / (ವಾಸ್ತುಗಳು)**

- ಕಸ ಹಾಕಬಾರದು

### ಉಪಕ್ರಮ

- ನಿಮ್ಮ ಪರಿಸರದಲ್ಲಿರುವ ಐತಿಹಾಸಿಕ ಕಟ್ಟಡಗಳಿಗೆ ಭೇಟಿ ನೀಡಿ ಅವುಗಳ ಬಗ್ಗೆ ಮಾಹಿತಿ ಬರೆಯಿರಿ.
- ಕೋಟೆಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ವಹಿಯಲ್ಲಿ ಅಂಟಿಸಿರಿ.
- ಮಹಾತ್ಮ ಫುಲೆಯವರಿಗೆ ಸಂಬಂಧಿಸಿದ ಕಿಶೋರ್ ಮಾಸಿಕದಲ್ಲಿ ಕಥೆಗಳಿಗಾಗಿ ಪಠ್ಯಪುಸ್ತಕದ ಆರಂಭದಲ್ಲಿ ನೀಡಲಾದ QR ಕೋಡ್‌ನಲ್ಲಿರುವ ಲಿಂಕ್‌ನ್ನು ನೋಡಿ.

***



# 10 ಶೌರ್ಯ ಮತ್ತು ಕ್ರಾಂತಿಯ ಕಥೆ



| | | |
|---|---|---|
|  ಛತ್ರಪತಿ ಶಿವಾಜಿ ಮಹಾರಾಜ |  ಮಹಾತ್ಮ ಜ್ಯೋತಿರಾವ ಫುಲೆ |  ಸಾವಿತ್ರಿಬಾಯಿ ಫುಲೆ |
|  ಮಹಾರಾಜ ಸಯಾಜಿರಾವ್ ಗಾಯಕವಾಡ |  ರಾಜರ್ಷಿ ಶಾಹು ಮಹಾರಾಜ |  ಪಂಡಿತಾ ರಮಾಬಾಯಿ |
|  ಮಹರ್ಷಿ ಧೋಂಡೊ ಕೇಶವ ಕರ್ವೆ |  ಡಾ.ಬಾಬಾಸಾಹೇಬ್ ಅಂಬೇಡಕರ |  ಡಾ. ಪಂಜಾಬರಾವ ದೇಶಮುಖ |



**ಇದನ್ನು ಮಾಡಿ ನೋಡಿರಿ.**

ಚಿತ್ರಗಳಲ್ಲಿರುವ ಮಹಾನ್ ವ್ಯಕ್ತಿಗಳ ಬಗ್ಗೆ ಮಾಹಿತಿಯನ್ನು ಅಂತರ್ಜಾಲದ ಸಹಾಯದಿಂದ ಸಂಗ್ರಹಿಸಿರಿ. ಇದಕ್ಕಾಗಿ ಕರ್ಮವೀರ ಭಾವುರಾವ ಪಾಟೀಲ ಅವರ ಉದಾಹರಣೆಯನ್ನು ಕೆಳಗೆ ನೀಡಲಾಗಿದೆ.

**ಕರ್ಮವೀರ ಭಾವುರಾವ ಪಾಟೀಲ**




‘ರಯತ ಶಿಕ್ಷಣ ಸಂಸ್ಥೆ’ ಭಾರತದಲ್ಲಿ ಹಳೆಯ ಮತ್ತು ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಯಾಗಿದೆ. ಈ ಸಂಸ್ಥೆಯ ಸಂಸ್ಥಾಪಕ ಕರ್ಮವೀರ ಭಾವುರಾವ ಪಾಟೀಲ ಅವರು ಎಲ್ಲಾ ಜಾತಿ ಧರ್ಮಗಳ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸಲು ಪ್ರಯತ್ನಿಸಿದರು. ಅವರು ವಿದ್ಯಾರ್ಥಿಗಳಿಗಾಗಿ ವಸತಿ ಗೃಹಗಳನ್ನು ಪ್ರಾರಂಭಿಸಿದರು ಮತ್ತು ‘ಗಳಿಸಿರಿ ಹಾಗೂ ಕಲಿಯಿರಿ’ ಪ್ರಯೋಜನೆಯನ್ನು ಪ್ರಾರಂಭಿಸಿದರು.

ಶಿಕ್ಷಕರು ತರಗತಿಗೆ ಬಂದರು. ಎಲ್ಲಾ ವಿದ್ಯಾರ್ಥಿಗಳು ಎದ್ದು ನಿಂತರು. ಶಿಕ್ಷಕ ಹೇಳಿದರು, ''ಇಂದು ನಾನು ನಿಮಗೆ ಮಹಾನ ವ್ಯಕ್ತಿಗಳ ಬಗ್ಗೆ ಹೇಳುತ್ತೇನೆ''.

ಶಿಕ್ಷಕರು ಹೇಳ ತೊಡಗಿದರು.

### ಶಿರೀಷ ಕುಮಾರ

ಬ್ರಿಟಿಷ ಸರಕಾರವು ಭಾರತೀಯರ ಮೇಲೆ ಅನ್ಯಾಯ ಮಾಡುತ್ತಿತ್ತು. ಬ್ರಿಟಿಷ ಆಡಳಿತವು ಭಾರತೀಯರನ್ನು ಶೋಷಣೆ ಮಾಡುತ್ತಿತ್ತು. ಭಾರತೀಯ ಜನರು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ್ದರು. 'ಗೆಲ್ಲೋಣ ಇಲ್ಲವೇ ಮಡಿಯೋಣ' ಎಂಬ ಘೋಷಣೆ ಎಲ್ಲಡೆ ಹರಡಿತ್ತು. 1942ರಲ್ಲಿ ಮಹಾತ್ಮ ಗಾಂಧೀಜಿಯವರು ಬ್ರಿಟಿಷರಿಗೆ ''ಭಾರತ ಬಿಟ್ಟು ತೊಲಗಿರಿ'' ಎಂದು ಹೇಳಿದರು.


ಶಿರೀಷ ಕುಮಾರ

ನಮ್ಮ ದೇಶದಲ್ಲಿ ಬ್ರಿಟಿಷ ವಿರೋಧಿ ವಾತಾವರಣ ಬಿಸಿಯಾಗಿತ್ತು. ದೇಶಾದ್ಯಂತ ಪ್ರತಿಭಟನೆಗಳು ಆರಂಭವಾದವು. ಶಾಲಾ ವಿದ್ಯಾರ್ಥಿಗಳು ಸಹ ಈ ಚಳವಳಿಯಲ್ಲಿ ಸಹಭಾಗಿಯಾದರು. ಖಾನದೇಶದಲ್ಲಿಯ ನಂದುರಬಾರದ 16 ವರ್ಷದ ವಿದ್ಯಾರ್ಥಿ ಶಿರೀಷ ಕುಮಾರ ಬ್ರಿಟಿಷರ ವಿರುದ್ಧ ಮೆರವಣಿಗೆ ನಡೆಸಲು ನಿರ್ಧರಿಸಿದನು. ಅವನು ಮತ್ತು ಅವನ ಸಹಕಾರಿಗಳಾದ ಶಶಿಧರ, ಲಾಲದಾಸ, ಘನಶ್ಯಾಮ ಮತ್ತು ಧನಸುಖಲಾಲ ಇವರು ಬ್ರಿಟಿಷರ ವಿರುದ್ಧ ಚಳವಳಿ ನಡೆಸಿದರು. ನಂದುರಬಾರದ ಧ್ವಜ ಚೌಕದಲ್ಲಿ ಶಾಲಾ ವಿದ್ಯಾರ್ಥಿಗಳ ನೇತೃತ್ವದಲ್ಲಿ ಮೆರವಣಿಗೆ ಶಾಂತಿಯುತವಾಗಿ ನಡೆದಿತ್ತು. ಪೊಲೀಸರು ಶಿರೀಷ ಕುಮಾರ ಹಾಗೂ ಅವರ ಸ್ನೇಹಿತರಿಗೆ ಮೆರವಣಿಗೆಯನ್ನು ವಿಸರ್ಜನೆ ಮಾಡಲು ಆದೇಶಿಸಿದರು. ಶಿರೀಷ ಕುಮಾರ ಮತ್ತು ಅವರ ಸ್ನೇಹಿತರು ಈ ಆದೇಶವನ್ನು ಕೇಳಲಿಲ್ಲ. 9 ಸಪ್ಟೆಂಬರ 1942 ರಂದು, ಪೊಲೀಸರು ಈ ಹೋರಾಟದ ಮೇಲೆ ಗುಂಡು ಹಾರಿಸಿದರು. ಈ ಗುಂಡಿನ ದಾಳಿಯಲ್ಲಿ, ಈ ಎಲ್ಲ ವಿದ್ಯಾರ್ಥಿಗಳು ತಮ್ಮ ದೇಶಕ್ಕಾಗಿ ಹುತಾತ್ಮರಾದರು.


**ಕಂಡು ಹಿಡಿಯಿರಿ ನೋಡೋಣ.**

ವಸ್ತಾದ ಲಹುಜಿ ಸಾಳವೆ, ರಾಜಗುರು ಮತ್ತು ಕ್ರಾಂತಿಸಿಂಹ ನಾನಾ ಪಾಟೀಲ ಅವರ ಕೃತಿಗಳ ಬಗ್ಗೆ ಮಾಹಿತಿಯನ್ನು ಒದಗಿಸುವ ಪುಸ್ತಕಗಳನ್ನು ಹುಡುಕಿರಿ ಮತ್ತು ಓದಿರಿ.

### ಶಾಂತಿ ಘೋಷ, ಸುನೀತಿ ಚೌಧರಿ

ಬಂಗಾಳದ ಇಬ್ಬರು ಶಾಲಾ ಹುಡುಗಿಯರ ಕಥೆ. ಅವರು ಶಾಂತಿ ಘೋಷ ಮತ್ತು ಸುನಿತಿ ಚೌಧರಿ. ಅವರಿಬ್ಬರೂ ಸಹಪಾಠಿಗಳು ಆಗಿದ್ದರು. ಶಾಂತಿಯವರ ತಂದೆ ದೇವೇಂದ್ರನಾಥ ಒಬ್ಬ ಪ್ರಾಧ್ಯಾಪಕರು ಆಗಿದ್ದರು. ಅವರು ತಮ್ಮ ಮಗಳಿಗೆ ದೇಶಭಕ್ತಿಯ ಸಂಸ್ಕಾರವನ್ನು ಕೊಟ್ಟಿದರು. ಶಾಲಾ-ವಯಸ್ಸಿನ ಶಾಂತಿಗೆ ಮಾತ್ರ ತಿಳಿದಿದ್ದು ಬ್ರಿಟಿಷರು ನಮ್ಮ ಶತ್ರುಗಳು ನಾವು ಅವರನ್ನು ಸೋಲಿಸಿ ಸ್ವಾತಂತ್ರ್ಯ ಪಡೆಯಬೇಕು. 1931ರಲ್ಲಿ ಅವರಿಗೆ ನೇತಾಜಿ ಸುಭಾಷ ಚಂದ್ರ ಭೋಸ ಅವರ ಭಾಷಣವನ್ನು ಕೇಳುವ ಅವಕಾಶ ಸಿಕ್ಕಿತು. ಅವರು ತುಂಬಾ ಉತ್ಸುಕರಾಗಿದ್ದರು. ಶಾಂತಿ ಘೋಷ ಇವರು ತಮ್ಮ ವಹಿಯಲ್ಲಿ ನೇತಾಜಿ ಸುಭಾಷ ಚಂದ್ರ ಬೋಸ ಅವರ ಸಹಿಯನ್ನು ಪಡೆದರು.


ಶಾಂತಿ ಘೋಷ


ಸುನೀತಿ ಚೌಧರಿ

ಮುಂದೆ, ಅವರು 'ಯುಗಾಂತರ' ಎಂಬ ಕ್ರಾಂತಿಕಾರಿ ಸಂಘಟನೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಈ ಸಮಯದಲ್ಲಿ, ಬಂಗಾಳದ ಕೊಮಿಲ್ಲಾ ಪ್ರದೇಶದ ಬ್ರಿಟಿಷ್ ಅಧಿಕಾರಿ ಸ್ಟೀವ್ಹನ್ಸ್ ಭಾರತೀಯರ ಮೇಲೆ ದೌರ್ಜನ್ಯ ಮಾಡುತ್ತಿದ್ದರು. ಚಳುವಳಿ ನಡೆಸುತ್ತಿದ್ದ ಜನರ ಮೇಲೆ ಲಾಠಿ ಪ್ರಹಾರ ಮಾಡುತ್ತಿದ್ದರು. ಜನರ ತಲೆ ಒಡೆಯುವವರೆಗೆಅವರನ್ನು ಹೊಡೆಯುತ್ತಿದ್ದರು. ನಾವು ಅವರ ಅನ್ಯಾಯವನ್ನು ಸಹಿಸುವದಿಲ್ಲ, ಅವರಿಬ್ಬರೂ ಈ ದುಷ್ಟ ಬ್ರಿಟಿಷ್ ಅಧಿಕಾರಿಗೆ ಪಾಠ ಕಲಿಸಲು ನಿರ್ಧರಿಸಿದರು.

ಸ್ಟೀವ್ಹನ್ಸಗೆ ಪ್ರಾಣದ ಭಯವಿತ್ತು. ಅವನು ತನ್ನ ಸ್ವಂತದ ಮನೆಯಲ್ಲಿಯೇ ಕಚೇರಿಯನ್ನು ಸ್ಥಾಪಿಸಿದ್ದನು. ಮನೆಯ ಸುತ್ತಲೂ ಕಾವಲುಗಾರರನ್ನು ಇರಿಸಿದ್ದನು. ನಾಗರಿಕರು ಅವನಿಗೆ ಭೇಟಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಅವನನ್ನು ಭೇಟಿಯಾಗಲು ಇವರಿಬ್ಬರೂ ನಿರ್ಧರಿಸಿದರು. ಅವರಿಬ್ಬರಿಗೂ ಪಿಸ್ತೂಲುಗಳನ್ನು ಬಳಸುಲು ತರಬೇತಿ ನೀಡಲಾಗಿತ್ತು. ಭಯವಿಲ್ಲದೆ, ಇಬ್ಬರೂ ಸ್ಟೀವ್ಹನ್ಸ ಮನೆಗೆ ಹೋದರು. ಆವನು ಅವರಿಬ್ಬರನ್ನು ಭೇಟಿಯಾಗಲು ಹೊರಬಂದನು. ಮಾತನಾಡಿದ ನಂತರ, ಸುನೀತಿ ಮರೆಮಾಡಿ ತಂದಿದ್ದ ಪಿಸ್ತೂಲನ್ನು ಹೊರತೆಗೆದು, ಅವನಿಗೆ ಗುಂಡು ಹಾರಿಸಿದಳು. ಅವನು ಸ್ಥಳದಲ್ಲೇ ಕುಸಿದು ಬಿದ್ದನು. ಅವರಿಬ್ಬರನ್ನೂ ಬಂಧಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು. ನಂತರ, ಅವರನ್ನು 1939ರಲ್ಲಿ ಬಿಡುಗಡೆ ಮಾಡಲಾಯಿತು.

**ತಿಳಿದು ಕೊಳ್ಳೋಣ.**

ಇ.ಸ. 1818ರಲ್ಲಿ ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡ ನಂತರ, ಮಹಾರಾಷ್ಟ್ರದಲ್ಲಿ ಕ್ರಾಂತಿಕಾರಿಯಾಗಿದ್ದ ಉಮಾಜಿ ನಾಯಕ, ಬ್ರಿಟಿಷರ ವಿರುದ್ಧ ಹೋರಾಟವನ್ನುಪ್ರಾರಂಭಿಸಿದರು. ಉಮಾಜಿ ಬ್ರಿಟಿಷರ ವಿರುದ್ಧ ಹೋರಾಡಲು ಮತ್ತು ಬ್ರಿಟಿಷ ಆಳ್ವಿಕೆಯನ್ನು ಉರುಳಿಸಲು ಕರೆ ನೀಡಿದರು. ಅವರ ಕೆಲಸವು ಪುಣೆ, ಸಾತಾರ, ಅಹಿಲ್ಯಾನಗರ ಮುಂತಾದ ಪ್ರದೇಶಗಳಿಗೆ ಹರಡಿತು.

ನಂತರ, ಅವರ ಪರಂಪರೆ ಕ್ರಾಂತಿಕಾರಿ ವಾಸುದೇವ ಬಲವಂತ ಫಡಕೆ ಮತ್ತು ಚಾಪೇಕರ ಸಹೋದರರು ಮುಂದುವರಿಸಿದರು. ಚಾಪೇಕರ ಸಹೋದರರಿಂದ ಸ್ಫೂರ್ತಿ ಪಡೆದು, ಸ್ವಾತಂತ್ರ್ಯ ಹೋರಾಟಗಾರ ವಿನಾಯಕ ದಾಮೋದರ ಸಾವಕರರವರು ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸಿದರು.

**ನಿಮಗೆ ಇದು ಗೊತ್ತಿದೆಯೇ?**

ಪುಣೆ ಜಿಲ್ಲೆಯ ಅಂಬೇಗಾವ್ ತಾಲೂಕಿನ ಮಹಾಳುಂಗೆ ಗ್ರಾಮದ ಬಾಬು ಗೇನು ಸೈದ ಎಂಬ ಯುವಕ. ಅವರು ಮುಂಬಯಿಯ ಬಟ್ಟೆ ಗಿರಣಿಯಲ್ಲಿ ಕೆಲಸ ಮಾಡುತಿದ್ದರು. 1930ರಲ್ಲಿ, ಮುಂಬಯಿನಲ್ಲಿ ವಿದೇಶಿ ವಸ್ತುಗಳ ವಿರುದ್ಧ ಬಹಿಷ್ಕಾರ ಚಳುವಳಿ ಪ್ರಾರಂಭವಾಯಿತು. ಬಾಬು ಗೇನು ಈ ಚಳುವಳಿಯ ಮುಂದಾಳುತನ ವಹಿಸಿದ್ದರು. ಒಮ್ಮೆ ಸರಕು ಸಾಗಣೆಯಲ್ಲಿ ವಿದೇಶಿ ಬಟ್ಟೆಗಳ ಸಾಗಾಣಿಕೆ ಮಾಡಲಾಗುತ್ತಿತ್ತು. ಆ ಸಮಯದಲ್ಲಿ, ಬಾಬು ಗೇನು ಕೈಯಲ್ಲಿ ತ್ರಿವರ್ಣ ಧ್ವಜದೊಂದಿಗೆ ಸರಕು ಸಾಗಾಣಿಕೆಯ ಮೋಟಾರಿನ ಮುಂದೆ ಅಡ್ಡ ಬಿದ್ದನು. ಮೋಟಾರ ಚಾಲಕನು ಬಾಬು ಗೇನು ಅವರ ದೇಹದ ಮೇಲೆ ಹಾಯಿಸಿದನು. ಅವರು ದೇಶದ ಸಲುವಾಗಿ ತಮ್ಮನ್ನು ತಾವು ಹುತಾತ್ಮ್ಯ ಸ್ವೀಕರಿಸಿದರು.


ಬಾಬು ಗೇನು

### ತಿಳಿದುಕೊಳ್ಳೋಣ ಬನ್ನಿರಿ.



ಸಂವಿಧಾನ ಸಭೆಯ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದ ಅವರಿಗೆ ಭಾರತೀಯ ಸಂವಿಧಾನದ ಕರಡನ್ನು ಸಲ್ಲಿಸುತ್ತಿರುವ ಡಾ. ಬಾಬಾಸಾಹೇಬ್ ಅಂಬೇಡಕರ್.

ಡಾ. ರಾಜೇಂದ್ರ ಪ್ರಸಾದ್ ಅವರ ನಾಯಕತ್ವದಲ್ಲಿ 9 ಡಿಸೆಂಬರ 1946 ರಂದು ಸಂವಿಧಾನ ಸಮಿತಿಯನ್ನು ಸ್ಥಾಪಿಸಲಾಯಿತು. 15 ಆಗಸ್ಟ 1947 ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ನಂತರ 21 ಆಗಸ್ಟ 1947 ರಂದು ಕರಡು ಸಮಿತಿಯನ್ನು ಸ್ಥಾಪಿಸಲಾಯಿತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಕರಡು ಸಮಿತಿಯ ಅಧ್ಯಕ್ಷರಾಗಿದ್ದರು. ಅವರ ನಾಯಕತ್ವ ದಲ್ಲಿ ಸಂವಿಧಾನದ ಅಂತಿಮ ಕರಡನ್ನು 26 ನವೆಂಬರ್ 1949 ರಂದು ಸಂವಿಧಾನ ಸಮಿತಿಗೆ ಸಲ್ಲಿಸಲಾಯಿತು. 26 ಜನವರಿ, 1950 ರಿಂದ ಸಂವಿಧಾನ ಜಾರಿಗೆ ಬಂದಿತು. ಆದ್ದರಿಂದ, 26 ನವೆಂಬರ್‌ವನ್ನು 'ಸಂವಿಧಾನ ದಿನ' ವೆಂದು ಆಚರಿಸಲಾಗುತ್ತದೆ.

## ಸ್ವಾಧ್ಯಾಯ

**ಪ್ರ.1 ಕೆಳಗೆ ಕೊಟ್ಟ ವ್ಯಕ್ತಿಗಳಿಗೆ ಸಂಬಂಧಿಸಿದ ಸ್ಥಳಗಳ ಹೆಸರುಗಳನ್ನು ಕಂಸಿನಲ್ಲಿ ಕೊಡಲಾಗಿದೆ. ಅವುಗಳನ್ನು ಅವರ ಹೆಸರುಗಳ ಮುಂದೆ ಬರೆಯಿರಿ.** (ನಂದೂರಬಾರ, ಕೊಮಿಲ್ಲಾ, ಪುಣೆ, ಮಹಾಳುಂಗೆ)

(1) ಬಾಬು ಗೇನು ಸೈದ --------------------------

(2) ಶಿರೀಷ ಕುಮಾರ --------------------------

(3) ಸ್ಟೀವನ್ಸ --------------------------

(4) ಆದ್ಯ ಕ್ರಾಂತಿಕಾರಿ ಉಮಾಜಿ ನಾಯಿಕ --------------------------

**ಪ್ರ.2 ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

(1) ಶಿರೀಷ ಕುಮಾರ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ನಡೆದ ಚಳುವಳಿಯಲ್ಲಿ ಯಾರು ಯಾರು ಭಾಗವಹಿಸಿದ್ದರು?

(2) ಶಾಂತಿ ಘೋಷ ಮತ್ತು ಸುನೀತಿ ಚೌಧರಿಯವರು ಯಾವ ಕ್ರಾಂತಿಕಾರಿ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದರು?

(3) ರಯತ ಶಿಕ್ಷಣ ಸಂಸ್ಥೆಯನ್ನು ಯಾರು ಸ್ಥಾಪಿಸಿದರು?

**ಪ್ರ.3 ಬರೆಯಿರಿ ನೋಡೋಣ.**

(1) ಬ್ರಿಟಿಷರ ವಿರುದ್ಧ ಗಾಂಧೀಜಿಯವರ ಘೋಷಣೆ –

(2) ಶಾಂತಿ ಘೋಷ ಅವರಲ್ಲಿ ದೇಶಭಕ್ತಿ ತುಂಬಿದವರು–

(3) ಚಾಪೇಕರ್ ಸಹೋದರರಿಂದ ಸ್ಫೂರ್ತಿ ಪಡೆದು ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸಿದವರು –

(4) ಕರ್ಮವೀರ ಭಾವುರಾವ ಪಾಟೀಲ ಅವರು ಪ್ರಾರಂಭಿಸಿದ ಯೋಜನೆಯ ಸ್ವರೂಪ –

**ಪ್ರ.4 ಹೆಸರು ಬರೆಯಿರಿ.**

(1) ಡಾ. ರಾಜೇಂದ್ರ ಪ್ರಸಾದ್ ಇವರ ನೇತೃತ್ವದಲ್ಲಿ ಸ್ಥಾಪಿಸಲಾದ ಸಮಿತಿ ...............................

(2) ಕರಡು ಸಮಿತಿಯ ಅಧ್ಯಕ್ಷರು ..............................................................

**ಪ್ರ.5 ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಮಾಹಿತಿ ಬರೆಯಿರಿ.**

(1) ಶಿರೀಷ ಕುಮಾರ

(2) ಬಾಬು ಗೇನು ಸೈದ

**ಉಪಕ್ರಮ**

- ನಿಮ್ಮ ಶಾಲೆಯಲ್ಲಿ ಯಾವ-ಯಾವ ಮಹಾನ ವ್ಯಕ್ತಿಗಳ ಛಾಯಾ ಚಿತ್ರಗಳು ಇವೆ ಅವುಗಳ ಪಟ್ಟಿಯನ್ನು ತಯಾರಿಸಿರಿ.
- ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಮಹಿಳೆಯರ ಬಗ್ಗೆ ಮಾಹಿತಿಯನ್ನು ಪಡೆದು ಅವರ ಪಟ್ಟಿಯನ್ನು ತಯಾರಿಸಿರಿ.
- ನಿಮ್ಮ ಪರಿಸರದಲ್ಲಿಯ ಒಬ್ಬ ಮಹಾನ ವ್ಯಕ್ತಿಯ ಜೀವನದಲ್ಲಿಯ ಒಂದು ಸ್ಫೂರ್ತಿದಾಯಕ ಘಟನೆಯನ್ನು ಆರಿಸಿರಿ ಮತ್ತು ಅದರ ಬಗ್ಗೆ ಬರೆಯಿರಿ. ಸಾಧ್ಯವಾದರೆ, ಆ ವ್ಯಕ್ತಿಯ ಚಿತ್ರವನ್ನು ಅಂಟಿಸಿರಿ.

***



# 11. ಪರಿಸರ ಸಂರಕ್ಷಣೆ: ನನ್ನ ಜವಾಬ್ದಾರಿ



ಮಹಾತ್ಮ ಗಾಂಧೀಜಿಯವರ ಜಯಂತಿಯನ್ನು ಆಚರಿಸಲು ಎಲ್ಲ ವಿದ್ಯಾರ್ಥಿಗಳು 2 ಅಕ್ಟೋಬರ್ ರಂದು ಮೈದಾನದಲ್ಲಿ ಹಾಜರಿದ್ದರು. ಮುಖ್ಯಾಧ್ಯಾಪಿಕೆಯ ಸೂಚನೆಯಂತೆ ಶಾಲಾ ಸ್ವಚ್ಛತಾ ಅಭಿಯಾನವನ್ನು ಪ್ರಾರಂಭಿಸಲಾಯಿತು. ವಿನಯನು ಸ್ವಚ್ಛ, ಅಚ್ಚುಕಟ್ಟಾದ ಬಟ್ಟೆಗಳನ್ನು ಧರಿಸಿ ಮೊದಲ ಸಾಲಿನಲ್ಲಿ ನಿಂತಿದ್ದನು. ವಿನಯನಿಗೆ ಇಂಥಹ ಕೆಲಸವೆಂದರೆ ಬೇಸರ. ಅವನು ತನ್ನ ಹೊಟ್ಟೆಯನ್ನು ಹಿಡಿದುಕೊಂಡು ಹೊಟ್ಟೆನೋವು ಇರುವಂತೆ ನಟಿಸಿ ಪಕ್ಕಕ್ಕೆ ಕುಳಿತನು. ವಿನಯನು ಸ್ವಚ್ಛತೆಯಲ್ಲಿ ಭಾಗವಹಿಸದಿರಲು ಕಾರಣವನ್ನು ಮುಖ್ಯಾಧ್ಯಾಪಿಕೆಯು ಅರ್ಥಮಾಡಿಕೊಂಡರು. ಅವರು ವಿನಯನನ್ನು ತಮ್ಮ ಆಫೀಸಿನಲ್ಲಿ ಕರೆದು ತಮ್ಮ ಪಕ್ಕದಲ್ಲಿ ಕೂರಿಸಿದರು. ಅವನಿಗೆ ಕೆಲವು ಚಿತ್ರ ಕಾರ್ಡ್‌ಗಳನ್ನು ತೋರಿಸಿ ಪ್ರಶ್ನೆಗಳನ್ನು ಕೇಳಿದರು. ವಿನಯನು ಚಿತ್ರಗಳನ್ನು ನಿರೀಕ್ಷಿಸಲು ಪ್ರಾರಂಭಿಸಿದರು.

**ಮಾಡಿ ನೋಡಿರಿ.**

**ಚಿತ್ರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿರಿ.**





  

**ಹೇಳಿರಿ ನೋಡೋಣ**

ಎಲ್ಲರೂ ಸಂತೋಷದಿಂದ ಪಾದಚಾರಿ ಮಾರ್ಗದಲ್ಲಿ ನಡೆಯಲು ಏಕೆ ಪ್ರಾರಂಭಿಸಿದರು?

ವಿನಯನು ಮುಖ್ಯಾಧ್ಯಾಪಕಿಯನ್ನು, ''ಸ್ವಚ್ಛತೆ ಎಂದರೇನು ಮತ್ತು ನಾವು ಅದನ್ನು ಏಕೆ ಮಾಡಬೇಕು?'' ಎಂದು ಕೇಳಿದನು.

ಮುಖ್ಯಾಧ್ಯಾಪಿಕೆಯು ಹೇಳಲು ಪ್ರಾರಂಭಿಸಿದರು, ''ಸ್ವಚ್ಛತೆ ಎಂದರೆ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ರೋಗ ರುಜಿನಗಳು ಹರಡುವದನ್ನು ತಡೆಯಲು ತೆಗೆದುಕೊಳ್ಳುವ ಕಾಳಜಿಯಾಗಿದೆ. ಇದಕ್ಕಾಗಿ ಸ್ವತಃ, ಸಾರ್ವಜನಿಕ ಸ್ಥಳಗಳ ಮತ್ತು ಪರಿಸರದ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವದು ಮಹತ್ವದ್ದಾಗಿರುತ್ತದೆ. ವೈಯಕ್ತಿಕ ಸ್ವಚ್ಛತೆಯ ಜೊತೆಗೆ, ಮನೆ ಮತ್ತು ಪರಿಸರ ಸ್ವಚ್ಛತೆಯಲ್ಲಿ ಕಸವನ್ನು ಯೋಗ್ಯ ಸ್ಥಳದಲ್ಲಿ ಎಸೆಯುವದು ಮತ್ತು ಒಳಚರಂಡಿಯನ್ನು ಸರಿಯಾಗಿ ವಿಲೇವಾರಿ ಮಾಡುವುದು ಒಳಗೊಂಡಿದೆ. ಇದರಿಂದಾಗಿ ಎಲ್ಲೆಡೆ ಸ್ವಚ್ಛತೆ ಕಂಡು ಬರುತ್ತದೆ. ಸ್ವಚ್ಛತೆಯಿಂದಾಗಿ ಎಲ್ಲೆಡೆ ಆನಂದದಾಯಕ ಹಾಗೂ ಪ್ರಸನ್ನ ವಾತಾವರಣ ಇರುತ್ತದೆ.

**ವಿಚಾರ ಮಾಡಿರಿ ಮತ್ತು ಹೇಳಿರಿ.**

- ಶರೀರವನ್ನು ನಿಯಮಿತವಾಗಿ ಸ್ವಚ್ಛಗೊಳಿಸದಿದ್ದರೆ ಏನಾಗುತ್ತವೆ?
- ಪರಿಸರದಲ್ಲಿ ಕಸ ಹಾಗೂ ಕೆಟ್ಟ ವಾಸನೆ ಇದ್ದರೆ ಏನಾಗುತ್ತದೆ?
- ನಮ್ಮ ಮನೆ, ಶಾಲೆ, ಪರಿಸರ, ಊರು ಹಾಗೂ ನಗರ ಇವುಗಳನ್ನು ಯಾರು ಸ್ವಚ್ಛಗೊಳಿಸುತ್ತಾರೆ?

ವಿನಯನ ತಲೆಯಲ್ಲಿ ಹಲವಾರು ಪ್ರಶ್ನೆಗಳು ಹುಟ್ಟಿಕೊಂಡವು. ವಿನಯನು ಮಾತನಾಡಲು ಪ್ರಾರಂಭಿಸಿದನು. ''ನಾವು ಪ್ರತಿ ವರ್ಷ 2 ಅಕ್ಟೋಬರ ರಂದು ಮಹಾತ್ಮಾ ಗಾಂಧಿಜೀಯವರ ಜನ್ಮ ದಿನದ ಅಂಗವಾಗಿ ಸ್ವಚ್ಛತಾ ಅಭಿಯಾನವನ್ನು ಆಚರಿಸುತ್ತೇವೆ. ಹಾಗಾದರೆ ಅದಕ್ಕೂ ಮೊದಲು ಸ್ವಚ್ಛತೆಗೆ ಮಹತ್ವವಿರಲಿಲ್ಲವೆ? ಸ್ವಚ್ಛತೆಗಾಗಿ ಯಾರೂ ಕೆಲಸ ಮಾಡಲಿಲ್ಲವೇ?'' ಮುಖ್ಯಾಧ್ಯಾಪಿಕೆಯು ವಿನಯನಿಗೆ ಸ್ವಚ್ಛತೆಯ ಬಗ್ಗೆ ಹೇಳಲು ಪ್ರಾರಂಭಿಸಿದರು.

## ನಿಮಗೆ ಇದು ಗೊತ್ತಿದೆಯೇ?

ನಮ್ಮ ಭಾರತದಲ್ಲಿ ಸ್ವಚ್ಛತೆಯ ಪರಂಪರೆಯು ಬಹಳ ಹಳೆಯದು. ಪ್ರಾಚೀನ ಜನರು ಸಹ ಸ್ವಚ್ಛತೆಯನ್ನು ಮುಖ್ಯವೆಂದು ಪರಿಗಣಿಸಿದ್ದರು. ಸಾವಿರಾರು ವರ್ಷಗಳ ಹಿಂದೆ, ಭಾರತದಲ್ಲಿ ಮೊಹೆಂಜೋದಾರೋ ಮತ್ತು ಹರಪ್ಪದಂತಹ ಸುಂದರವಾದ ನಗರಗಳು ಇದ್ದವು. ಈ ಅತ್ಯಂತ ಹಳೆಯ ನಗರಗಳಲ್ಲಿ ಉತ್ತಮ ರಸ್ತೆಗಳು, ಒಳಚರಂಡಿ ವ್ಯವಸ್ಥೆಗಳು ಮತ್ತು ಸಾರ್ವಜನಿಕ ಸ್ನಾನಗೃಹಗಳಿದ್ದವು. ಜನರು ತಮ್ಮ ಮನೆಗಳು, ರಸ್ತೆಗಳು ಮತ್ತು ಜಲಮೂಲಗಳನ್ನು ಸ್ವಚ್ಛವಾಗಿಡುತ್ತಿದ್ದರು.

## ನಿಮಗೆ ಇದು ಗೊತ್ತಿದೆಯೇ?



ರಾಷ್ಟ್ರಸಂತ ಗಾಡಗೆ ಬಾಬಾ

ರಾಷ್ಟ್ರಸಂತ ಗಾಡಗೆ ಬಾಬಾ ಅವರು ಅಮರಾವತಿ ಜಿಲ್ಲೆಯ ಶೇಣಗಾವನಲ್ಲಿ ಜನಿಸಿದರು. ಅವರ ಹೆಸರು ಡೆಬುಜಿ ಝಿಂಗರಾಜಿ ಜಾನೋರಕರ. ಅವರು ಯಾವಾಗಲೂ ಪೊರಕೆಯನ್ನು ಹತ್ತಿರ ಇಟ್ಟುಕೊಳ್ಳುತ್ತಿದ್ದರು. ಅವರ ಮೈಮೇಲೆ ಹರಕುಮುರುಕು ಕೌದಿ ಮತ್ತು ಕೈಯಲ್ಲೊಂದು ಮಡಕೆ ಹೀಗೆ ಅವರ ವೇಷವಾಗಿತ್ತು. ಆದಕ್ಕಾಗಿಯೇ ಜನರು ಅವರನ್ನು 'ಗಾಡಗೆ ಬಾಬಾ' ಎಂದು ಕರೆಯುತ್ತಿದ್ದರು. ಅವರು ಭೇಟಿ ನೀಡಿದ ಹಳ್ಳಿಗಳನ್ನು ಗುಡಿಸಿ ಸ್ವಚ್ಛಗೊಳಿಸುತ್ತಿದ್ದರು. ಮಹಾರಾಷ್ಟ್ರ ರಾಜ್ಯದಲ್ಲಿ, 'ಸಂತ ಗಾಡಗೆ ಬಾಬಾ ಗ್ರಾಮ ಸ್ವಚ್ಛತಾ ಅಭಿಯಾನ'ವನ್ನು ಜಾರಿಗೊಳಿಸಲಾಗಿವೆ. ಈ ಅಭಿಯಾನದಲ್ಲಿ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು, ಮನೆಯ, ಸ್ವತದ ಹಾಗೂ ಪರಿಸರದ ಸ್ವಚ್ಛತೆ, ಜೊತೆಗೆ ಒಳಚರಂಡಿ ನಿಯೋಜನೆ, ಕಸದ ವಿಲೇವಾರಿ ಇತ್ಯಾದಿಗಳಿಗೆ ಸಂಗತಿಗಳನನ್ನು ಮಾಡುವುದು ಅಪೇಕ್ಷಿತವಾಗಿದೆ.

''ಸ್ವಚ್ಛತೆಯ ಪ್ರಾರಂಭವು ವೈಯಕ್ತಿಕ ಸ್ವಚ್ಛತೆಯಿಂದ ಪ್ರಾರಂಭವಾಗುತ್ತದೆ. ಅದರ ಜೊತೆಗೆ ಪರಿಸರ ಹಾಗೂ ಸಾರ್ವಜನಿಕ ಸ್ಥಳಗಳ ಸ್ವಚ್ಛತೆಯು ಅಷ್ಟೇ ಮಹತ್ವದ್ದಾಗಿರುತ್ತದೆ. ಸ್ವತಃದ ಹಾಗೂ ಪರಿಸರದ ಸ್ವಚ್ಛತೆ ಇಡುವ ಜವಾಬ್ದಾರಿ ಪ್ರತಿಯೊಬ್ಬ ವ್ಯಕ್ತಿಯದು ಆಗಿದೆ''.

ಎಲ್ಲ ವಿದ್ಯಾರ್ಥಿಗಳು ಹೊರಗಿನ ಪರಿಸರ ಸ್ವಚ್ಛಗೊಳಿಸುತ್ತಿದ್ದರು. ಕೆಲವು ಮಕ್ಕಳು ಮೈದಾನದಲ್ಲಿ ಬೆಳೆದ ಹುಲ್ಲನ್ನು ತೆಗೆಯುತ್ತಿದ್ದರು, ಇನ್ನು ಕೆಲವು ಮಕ್ಕಳು ಗಿಡದಿಂದ ಉದುರಿದ ಎಲೆಗಳನ್ನು ಸಂಗ್ರಹಿಸುತ್ತಿದ್ದರು. ಇದನ್ನು ನೋಡಿ ವಿನಯನು, ''ನಮ್ಮ ಮೈದಾನದಲ್ಲಿ ಬಹಳಷ್ಟು ಮರಗಳಿವೆ. ದೊಡ್ಡ ಮರಗಳ ಎಲೆಗಳು ಬಿದ್ದು ಕಸವಾಗುತ್ತವೆ. ನಾವು ಅದರಿಂದ ಗೊಬ್ಬರ ತಯಾರಿಸುತ್ತೇವೆ ಎಂದು ಹೇಳಿದನು''.

ಮುಖ್ಯಾಧ್ಯಾಪಿಕೆಯು ಅಂದರು, ''ನಾವು ಪ್ರತಿ ವರ್ಷ ಜೂನ ತಿಂಗಳಿನಲ್ಲಿ ವೃಕ್ಷಾರೋಪಣೆ ಮಾಡುತ್ತೇವೆ.'' ವಿನಯ ಅಂದನು, ''ಮೇಡಂ, ವೃಕ್ಷಾರೋಪಣೆ ಎಂದರೇನು?'' ''ವೃಕ್ಷಾರೋಪಣೆ ಎಂದರೆ ಹೊಸ ಗಿಡಗಳನ್ನು ನೆಡುವುದು. ಈ ವರ್ಷ ನೀನು ಎಲ್ಲಿ ಮತ್ತು ಎಷ್ಟು ಹೊಸ ಮರಗಳನ್ನು ನೆಟ್ಟಿದ್ದೀಯಾ? ''ನಾನು ನನ್ನ ಮನೆಯ ಹಿತ್ತಲಿನಲ್ಲಿ ಎರಡು ಮರಗಳನ್ನು ನೆಟ್ಟಿದ್ದೇನೆ'' ಎಂದು ವಿನಯ.

### ಹೇಳಿರಿ ನೋಡೋಣ!

- ವರ್ಷವಿಡಿ ಹಚ್ಚ ಹಸಿರಾಗಿ ಇರುವ ಗಿಡಗಳು ಯಾವವು?
- ಮರಗಳೇ ಇಲ್ಲದಿದ್ದರೆ ಏನು ಆಗುತ್ತಿತ್ತು?

### ಮಾಡಿ ನೋಡಿರಿ.

- ಮುಟ್ಟಿದರೆ ಮುನಿಯುವ ಸಸಿಯ ಎಲೆಗಳಿಗೆ ನಿಧಾನವಾಗಿ ಸ್ಪರ್ಶ ಮಾಡಿ ನೋಡಿರಿ.
- ಒಂದು ಕುಂಡದಲ್ಲಿ ಸಸಿಯನ್ನು ನೆಟ್ಟು ಅದರ ನಿರೀಕ್ಷಣೆ ಮಾಡಿರಿ.

ಮುಖ್ಯಾಧ್ಯಾಪಕೆಯು ಮಾತನಾಡ ತೊಡಗಿದರು, ''ಮರಗಳಿಗೂ ಜೀವವಿರುತ್ತದೆ. ಅವುಗಳು ಬದುಕುವ ಸಲುವಾಗಿ, ನೀರು, ಗಾಳಿ ಹಾಗೂ ಸೂರ್ಯಪ್ರಕಾಶ ಇವುಗಳ ಅವಶ್ಯಕತೆ ಇದೆ. ಡಾ. ಜಗದೀಶ್‌ಚಂದ್ರ ಬೋಸ್ ಈ ಭಾರತೀಯ ಶಾಸ್ತ್ರಜ್ಞರು ಜಗತ್ತಿನಲ್ಲಿ ಮೊಟ್ಟ ಮೊದಲು ಸಿದ್ಧ ಪಡಿಸಿದವರು, ಅವುಗಳಿಗೆ ನಮ್ಮಂತೆಯೇ ಜೀವ ಇರುತ್ತದೆ. ಅವುಗಳಿಗೆ ನಮ್ಮಂತೆಯೇ ಸಂವೇದನೆಗಳಿರುತ್ತವೆ. ಅಂದರೆ ಅವುಗಳಿಗೆ ಆನಂದವಾಗುತ್ತದೆ, ದುಃಖವಾಗುತ್ತದೆ, ಚಳಿ-ಬಿಸಿಲು ತಿಳಿಯುತ್ತದೆ ಮತ್ತು ಅವುಗಳಿಗೆ ಸ್ಪರ್ಶ ಕೂಡ ತಿಳಿಯುತ್ತದೆ''.

ನಾವು ಹೊಸ ಮರಗಳನ್ನು ನೆಡಬೇಕು, ಅವುಗಳನ್ನು ಬದುಕಿಸಬೇಕು. ವೃಕ್ಷಗಳನ್ನು ಕಡಿಯುವುದು ನಿಲ್ಲಿಸಬೇಕು ಕಾರಣ ಗಿಡಗಳು ನಮಗೆ ಸಾಕಷ್ಟು ಸಂಗತಿಗಳನ್ನು ಕೋಡುತ್ತದೆ.



**ಯೋಚನೆ ಮಾಡಿರಿ ಮತ್ತು ಬರೆಯಿರಿ.**






## ನಿಮಗೆ ಇದು ಗೊತ್ತಿದೆಯೇ?

- **ಚಿಪಕೊ ಚಳುವಳಿ 1973:** ಅರಣ್ಯವನ್ನು ಉಳಿಸುವ ಹೋರಾಟ. ಹಿಮಾಲಯದ ಅಡಿಯಲ್ಲಿ ಹೆಚ್ಚಿನ ಸಂಖ್ಯೆಯ ಮರಗಳನ್ನು ಕಡಿಯಲಾಗುವುದಿತ್ತು. ಇದರ ವಿರುದ್ಧವಾಗಿ ಚಂಡಿಪ್ರಸಾದ ಭಟ್ಟ ಹಾಗೂ ಸುಂದರಲಾಲ ಬಹುಗುಣಾ ಇವರು ಪ್ರತಿಭಟನೆ ಮಾಡಿದರು. ಗಿಡಗಳನ್ನು ಕಡಿಯಬಾರದೆಂದು ಸ್ತ್ರಿಯರು ಗಿಡಗಳಿಗೆ ಅಪ್ಪಿಕೊಂಡು ಅವುಗಳ ರಕ್ಷಣೆ ಮಾಡಿದರು.
- 5 ಜೂನ ಈ ದಿನವನ್ನು ಪ್ರತಿ ವರ್ಷ 'ಜಾಗತಿಕ ಪರ್ಯಾವರಣ ದಿನ' ಎಂದು ಆಚರಿಸಲಾಗುತ್ತದೆ.



**ತಿಳಿದು ಕೊಳ್ಳೋಣ**

ದೇವರಾಯಿ (ದೇವರ ಬನ) ಎಂದರೆ ದೇವರ ಹೆಸರಿನಲ್ಲಿ ಇರಿಸಲಾಗಿರುವ ಪವಿತ್ರ ಅರಣ್ಯ. ದೇವರಾಯಿ ನೈಸರ್ಗಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಜೈವ ವೈವಿಧ್ಯತೆಯನ್ನು ಕಾಪಾಡಿಕೊಳ್ಳಲು ಅವುಗಳ ಸಂರಕ್ಷಿಸುವುದು ಅವಶ್ಯಕವಾಗಿದೆ. ಇಲ್ಲಿಯ ಮರಗಳನ್ನು ಕಡಿಯುವದನ್ನು ನಿಷೇಧಿಸಲಾಗುತ್ತದೆ.

ಅಹಿಲ್ಯಾನಗರ ಜಿಲ್ಲೆಯಲ್ಲಿಯ ಸಂಗಮನೇರನಲ್ಲಿರುವ ಪೆಮಗಿರಿ ಕೋಟೆಯ ಸಮೀಪದಲ್ಲಿ ಒಂದು ದೊಡ್ಡ ಆಲದ ಮರವಿದೆ. ಈ ಮರವನ್ನು 'ಮಹಾವಟವೃಕ್ಷ' ಎಂದೂ ಕರೆಯಲಾಗುತ್ತದೆ. ಇದು ಮಹಾರಾಷ್ಟ್ರ ರಾಜ್ಯದಲ್ಲಿಯ ಎಲ್ಲಕ್ಕೂ ದೊಡ್ಡ ಮರವಿದೆ ಎಂದು ನಂಬಲಾಗಿದೆ. ಈ ಮರವನ್ನು ಜನರ ಸಹ ಭಾಗದಿಂದ ಸಂರಕ್ಷಿಸಲಾಗಿದೆ. ಸ್ವರಾಜ್ಯ ಸಂಕಲ್ಪಕ ಶಹಾಜಿ ರಾಜೇ ಇವರು ಪೆಮಗಿರಿ ಕೋಟೆಯ ಮೇಲೆ ಸ್ವರಾಜ್ಯ ಸ್ಥಾಪಿಸಲು ಪ್ರಯತ್ನಿಸಿದ್ದರು.



ಮಹಾವಟ ವೃಕ್ಷ-ಪೆಮಗಿರಿ



**ಸಾಲುಮರದ ತಿಮ್ಮಕ್ಕ :** ಇವರು ಕರ್ನಾಟಕದಲ್ಲಿಯ ಪರಿಸರವಾದಿಯಾಗಿದ್ದರು. ಅವರು ವಯಸ್ಸಿನ ನೂರು ವರ್ಷ ದಾಟಿದ್ದರು. ಸಾಲುಮರದ ಎಂದರೆ ಮರಗಳ ಸಾಲು. ಅವರು ಜೀವವಿಡಿ ಮರಗಳನ್ನು ನೆಟ್ಟರು. ಆರಂಭದಲ್ಲಿ ಅವರು 385 ಆಲದ ಮರಗಳನ್ನು ನೆಟ್ಟರು. ಅವುಗಳ ಬೆಳವಣಿಗೆಗೆ ಅವರು ಹೆಚ್ಚಿನ ಗಮನ ನೀಡಿದರು. ನಂತರ, ಅವರು ಅರಳಿ ಮತ್ತು ಅತ್ತಿ ಮರಗಳೆ ತಮ್ಮ ಮಕ್ಕಳೆಂದು ಹೇಳುತ್ತಿದ್ದರು. ಅವರ ಮರ ನೆಡುವ ಕಾರ್ಯಕ್ಕಾಗಿ ಅವರಿಗೆ ಭಾರತ ಸರಕಾರವು 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿತು.


ಸಾಲಮರದ ತಿಮ್ಮಕ್ಕ


ಸಂತ ತುಕಾರಾಮ

ಸಂತ ತುಕಾರಾಮರು ಅಭಂಗದಲ್ಲಿ ಹೇಳಿದ್ದಾರೆ.

''ವೃಕ್ಷವಲ್ಲಿ ಆಮ್ಹಾ ಸೋಯರಿ ವನಚರೆ ।
ಪಕ್ಷಿಹಿ ಸುಸ್ವರೆ ಆಳವಿತೀ ॥

ಮುಖ್ಯಾಧ್ಯಾಪಕಿಯರು ವಿನಯನ ಜೊತೆ ಮಾತನಾಡುತ್ತ ನಾಲ್ಕನೇ ತರಗತಿಯಲ್ಲಿ ಹೋದರು. ಅವರು ನಾಲ್ಕನೆಯ ತರಗತಿಯ ಪುಸ್ತಕವನ್ನು ತೆಗೆದು ''ಛತ್ರಪತಿ ಶಿವಾಜಿ ಮಹಾರಾಜರ 'ಆಜ್ಞಾ ಪತ್ರ'ವನ್ನು ತೋರಿಸುತ್ತ ವಿನಯನಿಗೆ ಹೇಳಿದರು, ''ಛತ್ರಪತಿ ಶಿವಾಜಿ ಮಹಾರಾಜರ ಆಜ್ಞಾಪತ್ರದಲ್ಲಿ ವೃಕ್ಷ ಸಂರಕ್ಷಣೆಯ ಧೋರಣೆಯನ್ನು ಹೇಳಲಾಗಿದೆ. ಮರಗಳಿಂದ ಹವೆ ಶುದ್ಧವಿರುತ್ತದೆ, ಭೂಮಿಯ ಸವಕಳಿಯನ್ನು ತಡೆಯಲು ಸಹಾಯ ಮಾಡುತ್ತದೆ, ಪ್ರದೂಷಣೆ ಕಡಿಮೆ ಆಗುತ್ತದೆ, ಮಳೆಯ ನೀರನ್ನು ಹಿಡಿದಿಟ್ಟುಕೊಳ್ಳಲಾಗುತ್ತದೆ. ನಮಗೆ ಹಣ್ಣುಗಳು, ತರಕಾರಿಗಳು, ಔಷಧೀಯ ಸಸ್ಯಗಳು, ಕಟ್ಟಿಗೆಗಳು ಹೀಗೆ ಅನೇಕ ವಸ್ತುಗಳ ದೊರೆಯುತ್ತವೆ. ಅವು ವಿವಿಧ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ಆಶ್ರಯವನ್ನು ಒದಗಿಸುತ್ತದೆ. ವೃಕ್ಷಾರೋಪಣೆ ಮತ್ತು ವೃಕ್ಷ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ''.

ಇದನ್ನೆಲ್ಲಾ ಕೇಳಿದ ವಿನಯನು, ''ನಾನು ಸ್ವಚ್ಛತಾ ಕೆಲಸ ಮಾಡಲು ದೂರು ಸರಿಯುತ್ತಿದ್ದೆ, ಆದರೆ ಈಗ ನನಗೆ ಸ್ವಚ್ಛತೆಯ ಮಹತ್ವವು ಅರ್ಥವಾಗಿದೆ. ಅದರ ಜೊತೆಗೆ ವೃಕ್ಷಾರೋಪಣೆಯ ಲಾಭ ತಿಳಿದುಕೊಂಡನು. ಇಂದಿನಿಂದ, ನಾನು ವೈಯಕ್ತಿಕ ಸ್ವಚ್ಛತೆಯ ಜೊತೆಗೆ ಪರಿಸರ ಸ್ವಚ್ಛತೆ ಹಾಗೂ ವೃಕ್ಷಾರೋಪಣೆಯ ಕಾರ್ಯದಲ್ಲಿ ಎಲ್ಲರಕ್ಕಿಂತ ಮುಂದೆ ಇರುವೆನು''.

## ಸ್ವಾಧ್ಯಾಯ

**ಪ್ರ.1 ಯೋಗ್ಯ ಶಬ್ದ ಬರೆದು ವಾಕ್ಯ ಪೂರ್ಣಗೊಳಿಸಿ.**

(1) 2 ಅಕ್ಟೋಬರ ರಂದು ------------------ ಇವರ ಜಯಂತಿಯನ್ನು ಆಚರಿಸಲಾಗುತ್ತದೆ.

(2) ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಮೊಹೊಂಜೊದಾರ ಮತ್ತು ------------------ ಗಳಂಥಹ ಸುಂದರ ನಗರಗಳಿದ್ದವು.

(3) ರಾಷ್ಟ್ರಸಂತ ಗಾಡಗೆ ಬಾಬಾರವರ ಜನ್ಮ ಅಮರಾವತಿ ಜಿಲ್ಲೆಯಲ್ಲಿಯ ------------------ ಎಂಬಲ್ಲಿ ಆಯಿತು.

(4) ಭಾರತ ಸರಕಾರವು ------------------ ಅವರಿಗೆ ವೃಕ್ಷಾರೋಪಣೆಗಾಗಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿತು.

**ಪ್ರ.2 ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

**ಸ್ವಚ್ಛತೆ**

| ವೈಯಕ್ತಿಕ ಸ್ವಚ್ಛತೆ | ಸಾರ್ವಜನಿಕ ಸ್ವಚ್ಛತೆ |
| --- | --- |
| (1) ------------------------------ | ------------------------------ |
| (2) ------------------------------ | ------------------------------ |
| (3) ------------------------------ | ------------------------------ |
| (4) ------------------------------ | ------------------------------ |
| (5) ------------------------------ | ------------------------------ |

**ಪ್ರ.3 ಸರಿಯಾದ ಜೋಡಿಗಳನ್ನು ಹೊಂದಿಸಿರಿ.**

| ಗುಂಪು 'ಅ' | ಉತ್ತರ | ಗುಂಪು 'ಬ' |
| --- | --- | --- |
| (1) ವಿಶ್ವ ಪರ್ಯಾವರಣ ದಿನ | | (ಅ) ವೃಕ್ಷಾರೋಪಣೆ |
| (2) ದೇವರಾಯಿ (ದೇವ ಬನ) | | (ಆ) ಆಜ್ಞಾ ಪಾತ್ರ |
| (3) ಛತ್ರಪತಿ ಶಿವಾಜಿ ಮಹಾರಾಜ | | (ಇ) 5 ಜೂನ್ |
| (4) ಸಾಲುಮರದ ತಿಮ್ಮಕ್ಕ | | (ಈ) ದೇವರ ಹೆಸರಿನ ಕಾಡು |

**ಪ್ರ.4 ಪರಿಸರದಲ್ಲಿರುವ ಗಿಡ-ಮರಗಳ ಉದಾಹರಣೆಗಳನ್ನು ಬರೆಯಿರಿ.**




**ಉಪಕ್ರಮ**

- ಬೀಜಮಾತಾ ರಾಹಿಬಾಯಿ ಪೋಪೆರೆ ಇವರ ಮಾಹಿತಿಯನ್ನು ಪಾಲಕ/ಪೋಷಕರ ಸಹಾಯದಿಂದ ಸಂಗ್ರಹಿಸಿರಿ.
- ನಿಮ್ಮ ಪರಿಸರದಲ್ಲಿಯ ಸ್ವಚ್ಛತೆಯ ಕಾರ್ಮಿಕರನ್ನು ಭೇಟಿ ಮಾಡಿ ಅವರೊಡನೆ ಸಂದರ್ಶನ ಮಾಡಿರಿ.
- ಮಹಾರಾಷ್ಟ್ರದಲ್ಲಿರುವ ದೇವರಾಯಿ (ದೇವರ ಬನ) ಅಭಯಾರಣ್ಯಗಳ ಮಾಹಿತಿಯನ್ನು ಇಂಟರ್‌ನೆಟ್ ಮೂಲಕ ಸಂಗ್ರಹಿಸಿರಿ.
- ನೀವು ಬಳಸುವ ಸಿರಿ ಧಾನ್ಯಗಳು ಮತ್ತು ಬೀಜಗಳನ್ನು ಸಂಗ್ರಹಿಸಿ ಅವುಗಳಿಂದ ಸಸಿಗಳನ್ನು ತಯಾರಿಸಿರಿ.

***





# 12. ರಾಷ್ಟ್ರೀಯ ಏಕಾತ್ಮತೆ



**ಪ್ರಸಂಗ 1**

ಒಂದು ದಿವಸ ಏನಾಯಿತೆಂದರೆ, ವಿವಿಧ ಬಣ್ಣಗಳು ಪರಸ್ಪರ ಜೊತೆಗೆ ಜಗಳವಾಡಲು ಪ್ರಾರಂಭಿಸಿದವು. ಕೆಂಪು ಬಣ್ಣ ಅಂದಿತು, ''ನಾನು ಅತ್ಯಂತ ಸುಂದರ. ನನ್ನ ಬಣ್ಣ ದಾಸವಾಳದಂತಿದೆ, ಉದಯಿಸುತ್ತಿರುವ ಸೂರ್ಯನಂತೆ ಇದೆ''. ಬಿಳಿಯ ಬಣ್ಣವು ಹೇಳಿತು, ''ಇಲ್ಲ, ನಾನು ಅತ್ಯಂತ ಸುಂದರ. ನನ್ನ ಬಣ್ಣ ಶಾಂತತೆಯದ್ದಾಗಿದೆ''. ಹಸಿರು ಬಣ್ಣ ಹೇಳಿತು, ''ಇಲ್ಲ! ನನ್ನ ಬಣ್ಣ ಮರದ, ಎಲೆಗಳದ್ದು ಇದೆ. ನಾನಿಲ್ಲದೆ ನೀವು ಪೃಥ್ವಿಯ ಕಲ್ಪನೆಯನ್ನು ಮಾಡಲು ಸಾಧ್ಯವಿಲ್ಲ''. ನೀಲಿ ಬಣ್ಣ ಹೇಳಿತು, ''ಓಹೋ! ಹಾಗಾದರೆ ಆಕಾಶವಿಲ್ಲದೆ, ಸಮುದ್ರವಿಲ್ಲದೆ ನೀವು ಜಗತ್ತಿನ ಕಲ್ಪನೆಯನ್ನು ಮಾಡಬಲ್ಲಿರಾ?''.

ಅಷ್ಟರಲ್ಲಿ ಬೀಸುತ್ತಿದ್ದ ತಂಗಾಳಿ ಅವರಿಗೆ ಹೇಳಿತು, ''ಅಯ್ಯೋ, ಹೀಗೆ ಜಗಳವಾಡಬೇಡಿ! ನಮ್ಮ ಭಾರತ ದೇಶದ ರಾಷ್ಟ್ರಧ್ವಜದಲ್ಲಿ ನೋಡಿರಿ, ಬೇರೆ ಬೇರೆ ಬಣ್ಣಗಳು ಹೇಗೆ ಒಟ್ಟಿಗೆ ಸೇರಿ ನಲಿಯುತ್ತಿವೆ. ಬನ್ನಿ, ಅವುಗಳಿಂದ ಏನನ್ನಾದರೂ ಕಲಿಯೋಣ! ಭಾರತದ ರಾಷ್ಟ್ರಧ್ವಜವು ನಮ್ಮ ದೇಶದ ಏಕತೆಯ, ಸ್ವಾತಂತ್ರ್ಯದ ಮತ್ತು ಸಾರ್ವಭೌಮತ್ವದ ಸಂಕೇತವಾಗಿದೆ''.

ನಮ್ಮ ದೇಶವು ವಿವಿಧ ಸಂಕೇತಗಳನ್ನು ಹೊಂದಿದೆ. ಈ ಸಂಕೇತಗಳು ನಮ್ಮಲ್ಲಿ ಏಕತೆಯ ಭಾವನೆಯನ್ನು ಜಾಗೃತವಾಗಿ ಇಡಲು ಸಹಾಯ ಮಾಡುತ್ತವೆ. ಅವು ನಮ್ಮ ದೇಶದ ಮೌಲ್ಯಗಳನ್ನು ನೆನಪು-ಮಾಡಿಕೊಡುತ್ತವೆ. ರಾಷ್ಟ್ರಧ್ವಜದಂತೆಯೇ, ರಾಷ್ಟ್ರೀಯ ಏಕಾತ್ಮತೆಯ ಸಂಕೇತವಾದಂತಹ ನಮ್ಮ 'ರಾಷ್ಟ್ರಗೀತೆ'. ಭಾರತದ ರಾಷ್ಟ್ರಗೀತೆ 'ಜನ ಗಣ ಮನ' ಇದು ಇದೆ. ನಾವೆಲ್ಲರೂ ಭಿನ್ನ ಭಿನ್ನ ಭಾಷೆಗಳನ್ನು ಮಾತನಾಡುತ್ತಿದ್ದರೂ ಈ ಹಾಡು ನಮಗೆಲ್ಲರಿಗೂ ಕಂಠ ಪಾಠವಾಗಿದೆ. ರಾಷ್ಟ್ರಗೀತೆ ನಡೆದಾಗ ಎಲ್ಲರೂ ಸಾವಧಾನ ಸ್ಥಿತಿಯಲ್ಲಿ ಎದ್ದು ನಿಂತು ಗೌರವಿಸಬೇಕು, ಇದು ನಮ್ಮೆಲ್ಲರ ಕರ್ತವ್ಯವಾಗಿದೆ. ಅದೇ ರೀತಿ, 'ವಂದೇ ಮಾತರಂ' ನಮ್ಮ ರಾಷ್ಟ್ರಿಯ ಗೀತೆಯಾಗಿದೆ.



### ಇದು ನಿಮಗೆ ಗೊತ್ತಿದೆಯೇ?

**ಭಾರತದ ರಾಷ್ಟ್ರಧ್ವಜದಲ್ಲಿರುವ ಬಣ್ಣಗಳ ಅರ್ಥವನ್ನು ಹುಡುಕಿ ಬರೆಯಿರಿ.**

ಕೇಸರಿ – ------------------------------------------------------------

ಬಿಳಿ – ------------------------------------------------------------

ಹಸಿರು – ------------------------------------------------------------

**ಅಶೋಕ ಚಕ್ರ – ಇದು ಪ್ರಗತಿಯ ಮತ್ತು ಚಲನೆಯ ಸಂಕೇತವಾಗಿದೆ. ಇದು ಇಪ್ಪತ್ತುನಾಲ್ಕು ಗೆರೆಗಳನ್ನು ಹೊಂದಿದೆ.**

ನಮ್ಮ ಭಾರತ ದೇಶದಲ್ಲಿ ಬೇರೆ ಬೇರೆ ಜನರು ಬೇರೆ ಬೇರೆ ರಾಜ್ಯಗಳಲ್ಲಿ ವಾಸಿಸುತ್ತಾರೆ. ಬೇರೆ ಬೇರೆ ಭಾಷೆಗಳನ್ನು ಮಾತನಾಡುತ್ತಾರೆ. ಬೇರೆ ಬೇರೆ ಬಟ್ಟೆಗಳನ್ನು ಧರಿಸುತ್ತಾರೆ. ಬೇರೆ ಬೇರೆ ಹಬ್ಬಗಳನ್ನು ಆಚರಿಸುತ್ತಾರೆ. ನಾವೆಲ್ಲರೂ ಒಂದೇ ಇದ್ದು, ಒಂದೇ ದೇಶದ ನಾಗರಿಕರಾಗಿದ್ದೇವೆ.



**ಪ್ರಸಂಗ 2**

ರಾಷ್ಟ್ರೀಯ ಏಕಾತ್ಮತೆಯ ಬಗ್ಗೆ ಶಿಕ್ಷಕಿಯರು ಹೇಳಿದರು, ‘‘ತರಗತಿಯಲ್ಲಿ ಸುತ್ತಮುತ್ತಲು ನೋಡಿರಿ. ನಾವು ಒಬ್ಬರಿಗೊಬ್ಬರು ವಿಭಿನ್ನವಾಗಿ ಕಾಣುತ್ತೇವೆ. ಆದರೂ ನಾವೂ ಈ ತರಗತಿಯಲ್ಲಿ ಒಟ್ಟಿಗೆ ಕಲಿಯುತ್ತಿದ್ದೇವೆ. ನಾವು ಕಥೆಗಳನ್ನು ಹೇಳುತ್ತೇವೆ, ಹಾಡುಗಳನ್ನು ಹಾಡುತ್ತೇವೆ. ಕೆಲವೊಮ್ಮೆ ನಮ್ಮಲ್ಲಿ ಜಗಳವಾಗುತ್ತವೆ, ನಾವು ಅವುಗಳನ್ನು ಸಂವಾದದ ಮೂಲಕ ಪರಿಹರಿಸುತ್ತೇವೆ. ನಾವು ಒಬ್ಬರಿಗೊಬ್ಬರ ಕಾಳಜಿ ತೆಗೆದುಕೊಳ್ಳುತ್ತೇವೆ, ಒಬ್ಬರನ್ನೊಬ್ಬರು ಗೌರವಿಸುತ್ತೇವೆ. ಈ ತರಗತಿಯಂತೆಯೇ, ‘ವೈವಿಧ್ಯತೆಯಿಂದ ಕೂಡಿದ’ ಈ ನಮ್ಮ ಭಾರತ ದೇಶವಿದೆ. ಹೀಗೆ ಬೇರೆ ಬೇರೆ ಇದ್ದರೂ ಒಂದು ದೇಶದಲ್ಲಿ ಸಾಮರಸ್ಯದಿಂದ ಬದುಕುವುದು, ನಾವೆಲ್ಲರೂ ‘ಭಾರತೀಯರು’ ಎಂದು ಗುರುತಿಸಿಕೊಳ್ಳುವುದು ಇದನ್ನೇ ‘ರಾಷ್ಟ್ರೀಯ ಏಕಾತ್ಮತೆ’ ಎಂದು ಕರೆಯಲಾಗುತ್ತದೆ.

**ಓದಿರಿ.**

ಅನೇಕ ಅವಯವಗಳಿಂದ ಆಗುತ್ತದೆ ಒಬ್ಬ ಮನುಷ್ಯ.
ಅನೇಕ ಬಣ್ಣಗಳಿಂದ ಕೂಡಿ ಆಗುತ್ತದೆ ಕಾಮನಬಿಲ್ಲು.
ಅನೇಕ ಹೂವುಗಳಿಂದ ಅಲಂಕರಿಸುತ್ತದೆ ಈ ಹೂದಾನಿ.
ಅನೇಕ ಭಾಷೆಗಳಲ್ಲಿ ಹಾಡುತ್ತೇವೆ ನಾವು ಹಾಡು.
ಅನೇಕ ಸಂಸ್ಕೃತಿಗಳು, ವಿವಿಧ ಹಬ್ಬಗಳು, ಹಲವು ವೇಷಭೂಷಗಳು.
ಅನೇಕ ಜನರು ಒಟ್ಟಾಗಿ ನಿರ್ಮಿಸುತ್ತೇವೆ ಈ ನಮ್ಮ ದೇಶ.

**ಹೇಳಿರಿ ನೋಡೋಣ!**

**ಪ್ರಸಂಗ 3**

ಕಲ್ಪನೆ ಮಾಡಿರಿ, ಶಾಲೆಯ ಹೊಸ ವರ್ಷ ಪ್ರಾರಂಭವಾಗಿದೆ. ನಿಮ್ಮ ತರಗತಿಯಲ್ಲಿ ಹೊಸ ವಿದ್ಯಾರ್ಥಿನಿ ಪ್ರವೇಶ ತೆಗೆದುಕೊಂಡಿದ್ದಾಳೆ. ಅವಳ ಮಾತೃಭಾಷೆ ಬಂಗಾಲಿ ಇದೆ. ನೀವು ಅವಳೊಡನೆ ಹೇಗೆ ಸಂವಾದ ನಡೆಸುತ್ತೀರಿ? ನೀವು ಅವಳಿಗೆ ಹೇಗೆ ಸಹಾಯ ಮಾಡುವಿರಿ? ಅವಳಿಗೆ ತರಗತಿಯಲ್ಲಿ ಹೊಂದಿಕೊಳ್ಳಲು ನೀವು ಏನು ಮಾಡುವಿರಿ? ಶಿಕ್ಷಕರ ಸಹಾಯದಿಂದ ಚರ್ಚೆ ಮಾಡಿರಿ.

**ಚಿತ್ರವನ್ನು ಬಣ್ಣಿಸಿರಿ.**

| ರಾಷ್ಟ್ರಧ್ವಜ | ರಾಷ್ಟ್ರೀಯ ಪಕ್ಷಿ |
|---|---|
|  |  |

| ರಾಷ್ಟ್ರೀಯ ಹಣ್ಣು | ರಾಷ್ಟ್ರೀಯ ಹೂವು |
| --- | --- |
|  |  |



### ಕಂಡು ಹಿಡಿಯೋಣ

**ರಾಜ್ಯಪಕ್ಷಿ, ರಾಜ್ಯಹಣ್ಣು , ರಾಜ್ಯಪ್ರಾಣಿ ಹಾಗೂ ರಾಜ್ಯಹೂವು ಇವುಗಳ ಮಾಹಿತಿಯನ್ನು ಅಂತರ್ಜಾಲದ ಸಹಾಯದಿಂದ ಹುಡುಕಿರಿ.**

1 ಮೇ 1960ರಂದು ಮಹಾರಾಷ್ಟ್ರ ರಾಜ್ಯವು ನಿರ್ಮಾಣವಾಯಿತು. 1ಮೇ ಈ ದಿನವನ್ನು ಮಹಾರಾಷ್ಟ್ರ ರಾಜ್ಯ ದಿನ ಎಂದು ಆಚರಿಸಲಾಗುತ್ತದೆ. ರಾಜ್ಯಕ್ಕೆ ಹೇಗೆ ರಾಜ್ಯದಿನವಿದೆ ಹಾಗೆಯೇ ರಾಜ್ಯಗೀತೆ, ರಾಜ್ಯಪಕ್ಷಿ, ರಾಜ್ಯಹಣ್ಣು, ರಾಜ್ಯಪ್ರಾಣಿ ಹಾಗೂ ರಾಜ್ಯಹೂವು ಇತ್ಯಾದಿ ಸಂಗತಿಗಳಿರುತ್ತವೆ.

ರಾಷ್ಟ್ರೀಯ ಏಕಾತ್ಮತೆಗಾಗಿ ಬೇರೆ ಬೇರೆ ಚಿಹ್ನೆಗಳು ಮತ್ತು ಲಾಂಛನಗಳು ಹೇಗೆ ಮುಖ್ಯವಾಗಿವೆಯೋ ಹಾಗೆಯೇ ಬೇರೆ ಬೇರೆ ರಾಷ್ಟ್ರೀಯ ಹಬ್ಬಗಳು, ಸಹ ಮುಖ್ಯವಾಗಿವೆ. 15 ಆಗಸ್ಟ 1947 ರಂದು ನಮಗೆ ಸ್ವಾತಂತ್ರ್ಯ ದೊರೆಕಿತು. ಆದ್ದರಿಂದ ನಾವು 15 ಆಗಸ್ಟ ಈ ದಿನವನ್ನು 'ಸ್ವಾತಂತ್ರ್ಯ ದಿನ' ಎಂದು ಆಚರಿಸುತ್ತೇವೆ. 26 ಜನವರಿ 1950 ರಿಂದ ಭಾರತೀಯ ಸಂವಿಧಾನವು ಜಾರಿಗೆ ಬಂದಿತು, ಆದ್ದರಿಂದ 26 ಜನವರಿ ಈ ದಿನವನ್ನು 'ಗಣರಾಜ್ಯೋತ್ಸವ ದಿನ' ಎಂದು ಆಚರಿಸುತ್ತೇವೆ. ಈ ಎಲ್ಲಾ ದಿನಗಳನ್ನು ಎಲ್ಲಾ ಭಾರತೀಯರು ಒಂದಾಗಿ ಸೇರಿ ಆಚರಿಸುತ್ತಾರೆ. ಈ ದಿನದಂದು ದೇಶದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.



### ಇದು ನಿಮಗೆ ಗೊತ್ತಿದೆಯೇ?

ರಾಕೇಶ್ ಶರ್ಮಾ: 1984 ರಲ್ಲಿ ರಾಕೇಶ್ ಶರ್ಮಾ ಇವರು ಭಾರತದ ಮೊದಲ ಗಗನಯಾತ್ರಿಯಾದರು. ಆಗಿನ ಪ್ರಧಾನಿ ಇಂದಿರಾ ಗಾಂಧಿಯವರರು ಕೇಳಿದರು, ''ಅಂತರಾಳದಲ್ಲಿಂದ ಭಾರತವು ಹೇಗೆ ಕಾಣಿಸುತ್ತದೆ?'' ರಾಕೇಶ್ ಶರ್ಮಾ ಅವರು, ''ಸಾರೆ ಜಾಹಾಂಸೆ ಅಚ್ಛಾ!'' ಎಂದು ಉತ್ತರಿಸಿದರು.

(ಪಠ್ಯಪುಸ್ತಕದ ಆರಂಭದಲ್ಲಿ ನೀಡಿರುವ QR ಕೋಡನಲ್ಲಿರುವ ಲಿಂಕ್ ಮೂಲಕ ರಾಕೇಶ್ ಶರ್ಮಾ ಅವರ ವ್ಹಿಡಿಯೋ ನೋಡಿರಿ.)

## ಸ್ವಾಧ್ಯಾಯ

**ಪ್ರ.1 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

(1) ಭಾರತೀಯ ರಾಷ್ಟ್ರ ಧ್ವಜದ ಸಂಕ್ಷಿಪ್ತ ವರ್ಣನೆಯನ್ನು ಬರೆಯಿರಿ.

(2) ಭಾರತದ ಮೊದಲ ಗಗನಯಾತ್ರಿಯ ಹೆಸರೇನು?

(3) ನಮ್ಮ ರಾಷ್ಟ್ರೀಯ ಹೂವು ಯಾವುದು?

**ಪ್ರ.2 ಸರಿಯಾದ ಪದ ಆರಿಸಿ ಬರೆಯಿರಿ.**

(1) ತ್ರಿವರ್ಣ ಧ್ವಜದ ಮೇಲಿರುವ ಚಕ್ರ ----------------------

(ಅ) ಸುದರ್ಶನ ಚಕ್ರ (ಆ) ಅಶೋಕ ಚಕ್ರ (ಇ) ಪರಮವೀರ ಚಕ್ರ (ಈ) ಜಚಕ್ರ

(2) 15 ಆಗಸ್ಟ ----------------------

(ಅ) ಸ್ವಾತಂತ್ರ್ಯ ದಿನ (ಆ) ಸಂವಿಧಾನ ದಿನ (ಇ) ಮಹಾರಾಷ್ಟ್ರ ದಿನ (ಈ) ಗಣರಾಜ್ಯದಿನ

**ಪ್ರ.3 ಹೊಂದಿಸಿ ಬರೆಯಿರಿ.**

| ಗುಂಪು 'ಅ' | ಗುಂಪು 'ಬ' |
|---|---|
| (1) ರಾಷ್ಟ್ರೀಯ ಪಕ್ಷಿ | (ಅ) ಜನ ಗಣ ಮನ |
| (2) ರಾಷ್ಟ್ರೀಯ ಹಣ್ಣು | (ಆ) ವಂದೇ ಮಾತರಂ |
| (3) ರಾಷ್ಟ್ರೀಯ ಗೀತೆ | (ಇ) ಮಾವಿನ ಹಣ್ಣು |
| (4) ರಾಷ್ಟ್ರಗೀತೆ | (ಈ) ನವಿಲು |

**ಪ್ರ.4 ನಿಮ್ಮ ಮಾತೃಭಾಷೆಯ ಹೆಸರು ಹೇಳಿ, ಮಹಾರಾಷ್ಟ್ರದ ನೆರೆ-ಹೊರೆಯ ರಾಜ್ಯಗಳ ಭಾಷೆಗಳ ಹೆಸರು ಬರೆಯಿರಿ.**

**ಪ್ರ.5 ಪಾಠ್ಯಪುಸ್ತಕದ ಮುಖಪೃಷ್ಠದ ನಿರೀಕ್ಷಣೆ ಮಾಡಿ. ಭಾರತದಲ್ಲಿಯ ವೈವಿಧ್ಯತೆಯ ಬಗ್ಗೆ ಸ್ಪಷ್ಟ ಮಾಡಿರಿ.**

### ಉಪಕ್ರಮ

- ರಾಷ್ಟ್ರೀಯ ಪ್ರತಿಕಗಳ ಮಾಹಿತಿ ಪಡೆಯಿರಿ ಹಾಗೂ ಅವುಗಳ ಚಿತ್ರಗಳನ್ನು ಸಂಗ್ರಹಿಸಿರಿ.
- ದೇಶ ಭಕ್ತಿ ಗೀತೆಗಳನ್ನು ಸಂಗ್ರಹಿಸಿರಿ ಮತ್ತು ಅವುಗಳನ್ನು ಪುಸ್ತಕದಲ್ಲಿ ಅಂಟಿಸಿರಿ.
- ನೀವು ವಾಸಿಸುವ ಜಿಲ್ಲೆಯ ಗಡಿಯಲ್ಲಿರುವ 2-3 ಜಿಲ್ಲೆಗಳಲ್ಲಿ ಯಾವ ಆಡುಭಾಷೆಗಳನ್ನು ಮಾತನಾಡಲಾಗುತ್ತದೆ ಎಂಬುದನ್ನು ಇಂಟರನೇಟ್‌ದ ಸಹಾಯದಿಂದ ಪಡೆಯಿರಿ.

***

# 13. ಕೇಳೋಣ, ಮಾತನಾಡೋಣ ಮತ್ತು ಅರ್ಥಮಾಡಿಕೊಳ್ಳೋಣ




**ಚಿತ್ರದಲ್ಲಿ ಏನು ಕಾಣಿಸುತ್ತದೆ ಅದನ್ನು ಹೇಳಿರಿ?**

- ನಿಮ್ಮ ಶಾಲೆಯಲ್ಲಿ ಧ್ವಜಾರೋಹಣ ಸಮಾರಂಭವನ್ನು ಯಾವ ಯಾವ ದಿನಾಂಕದಂದು ಆಚರಿಸುತ್ತಾರೆ?
- ನೀವು ಧ್ವಜಾರೋಹಣ ಸಲುವಾಗಿ ಯಾವ ಸಿದ್ಧತೆಗಳನ್ನು ಮಾಡುವಿರಿ ಎಂಬುದನ್ನು ನಿಮ್ಮ ಗುಂಪಿನಲ್ಲಿ ಚರ್ಚಿಸಿರಿ.
- ಹತ್ತು ರೂಪಾಯಿ ನೋಟನ್ನು ತೆಗೆದುಕೊಳ್ಳಿರಿ. ಅದರ ಮೇಲಿನ ಚಿತ್ರದ ಬಗ್ಗೆ ನಿಮ್ಮ ಪೋಷಕರೊಂದಿಗೆ, ಶಿಕ್ಷಕರೊಂದಿಗೆ ಮತ್ತು ಇತರರೊಂದಿಗೆ ಚರ್ಚೆ ಮಾಡಿರಿ.

ವಿದ್ಯಾರ್ಥಿ ಮಿತ್ರರೆ, ಇತರರ, ಪೋಷಕರ ಹಾಗೂ ಶಿಕ್ಷಕರ ಹೇಳಿಕೆಯನ್ನು ಶಾಂತವಾಗಿ ಕೇಳಬೇಕು. ನಮ್ಮ ಆಲೋಚನೆಗಳನ್ನು ದೃಢವಾಗಿ ವ್ಯಕ್ತಪಡಿಸಬೇಕು. ನಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುವಾಗ, ನಾವು ಇನ್ನಿತರ ಅಭಿಪ್ರಾಯಗಳನ್ನು ಕೂಡ ಗೌರವಿಸಬೇಕು. ಆದರಿಂದ ನಮ್ಮ ನಾಯಕತ್ವ ಗುಣಗಳು ಬೆಳೆಯುತ್ತವೆ.



## ಕೇಳೋಣ ಮತ್ತು ಮಾತನಾಡೋಣ

- ರಾಜ್ಯಗೀತೆಯನ್ನು ಕೇಳಿರಿ ಮತ್ತು ರಾಗಬದ್ಧವಾಗಿ, ಲಯಬದ್ಧವಾಗಿ ಹಾಡಿರಿ.
- ಧ್ವಜಾರೋಹಣ ಸಮಾರಂಭದಲ್ಲಿ ನೀವು ಯಾವ ಘೋಷಣೆಗಳನ್ನು ಕೂಗುತ್ತೀರಿ ಎಂದು ತಿಳಿಸಿರಿ.

**ಕೆಳಗಿನ ಸಂದರ್ಭಗಳಲ್ಲಿ ನೀವು ಏನು ಮಾಡುವಿರಿ?**

- ನಿಮ್ಮ ಸ್ನೇಹಿತ ಅನಾರೋಗ್ಯದಿಂದ ಬಳಲುತ್ತಿದ್ದಾನೆ.
- ಸ್ನೇಹಿತನ ಅಜ್ಜಿಗೆ ಕಡಿಮೆ ಕಾಣಿಸುತ್ತಿದೆ. ಅವಳಿಗೆ ರಸ್ತೆಯ ಆಚೆಗೆ ಹೋಗುವುದು ಇದೆ.
- ನಿಮ್ಮ ಮನೆಯಲ್ಲಿಯ ವ್ಯಕ್ತಿ ಮೇಲಿಂದ ಮೇಲೆ ಮೊಬೈಲ್ ನೋಡುತ್ತಾರೆ.

## ತಿಳಿದುಕೊಳ್ಳೋಣ ಬನ್ನಿರಿ

# ಒಗ್ಗಟ್ಟಿನಲ್ಲಿ ಬಲ

### ಗುಬ್ಬಚ್ಚಿಗಳು ಮತ್ತು ಬೇಟೆಗಾರ.

ನನ್ನ ಪ್ರೀತಿಯ ಮಕ್ಕಳೇ, ನೀವು ಈ ಕಥೆಯನ್ನು ಕೇಳಿದ್ದೀರಾ? ಇಲ್ಲದಿದ್ದರೆ ಕೇಳಿರಿ.

ಒಂದು ದಟ್ಟವಾದ ಕಾಡಿನಲ್ಲಿ ಒಂದು ದೊಡ್ಡ ಆಲದ ಮರದ ಮೇಲೆ ಅನೇಕ ಗುಬ್ಬಚ್ಚಿಗಳು ವಾಸವಾಗಿದ್ದವು. ಆ ಆಲದ ಮರಕ್ಕೆ ಚಿಕ್ಕದಾದ ಕೆಂಪು ಆಲದ ಹಣ್ಣುಗಳಿದ್ದವು. ಗುಬ್ಬಚ್ಚಿಗಳು ಅವುಗಳನ್ನು ಕೀಳುತ್ತಿದ್ದವು. ಒಂದು ಜಾಣ ಮತ್ತು ಅನುಭವಿ ಗುಬ್ಬಿ ಇತ್ತು. ಅದು ಯಾವಾಗಲು ಎಲ್ಲರಿಗೂ ಒಟ್ಟಿಗೆ ಇರಲು ಹೇಳುತ್ತಿತ್ತು.

ಒಂದು ದಿವಸ, ಒಬ್ಬ ಬೇಟೆಗಾರನು ಕಾಡಿಗೆ ಬಂದನು. ಆಲದ ಮರದ ಬಳಿ ಅನೇಕ ಗುಬ್ಬಚ್ಚಿಗಳು ಇರುವದನ್ನು ಅವನು ನೋಡಿದನು. ಈ ಗುಬ್ಬಚ್ಚಿಗಳನ್ನು ಹಿಡಿಯಬೇಕೆಂದು ಅವನು ಯೋಚಿಸಿದನು. ಅದಕ್ಕಾಗಿ ಅವನು ಒಂದು ಉಪಾಯವನ್ನು ರೂಪಿಸಿದನು. ಅವನು ಮರದ ಕೆಳಗೆ ಗುಬ್ಬಚ್ಚಿಗಳಿಗೆ ಬಹಳಷ್ಟು ಕಾಳುಗಳನ್ನು ಹಾಕಿದನು. ಅವನು ಅದರ ಮೇಲೆ ಬಲೆಯನ್ನು ಹರಡಿಸಿ ಹತ್ತಿರದಲ್ಲಿಯೇ ಅಡಗಿಕೊಂಡು ಗುಬ್ಬಚ್ಚಿಗಳಿಗಾಗಿ ಕಾಯುತ್ತಿದ್ದನು.

ಸ್ವಲ್ಪ ಹೊತ್ತಿನಲ್ಲೇ, ಗುಬ್ಬಚ್ಚಿಗಳು ಬೀಜಗಳನ್ನು ತಿನ್ನಲು ಕೆಳಗೆ ಬಂದವು. ಅವುಗಳೆಲ್ಲವು ಬೀಜಗಳನ್ನು ತಿನ್ನುವದರಲ್ಲಿ ಮಗ್ನವಾಗಿದ್ದವು ಗುಬ್ಬಚ್ಚಿಗಳು ತಿಳಿಯದೆ ಬೇಟೆಗಾರನ ಬೀಸಿದ ಬಲೆಗೆ ಸಿಕ್ಕಿಕೊಂಡವು. ಅಯ್ಯೋ! ಈಗ ಏನು ಮಾಡಬೇಕು? ಅವುಗಳಿಗೆ ತಿಳಿಯಲಿಲ್ಲ. ಗುಬ್ಬಚ್ಚಿಗಳು ತಪ್ಪಿಸಿಕೊಳ್ಳಲು ಒದ್ದಾಡತೊಡಗಿದವು. ಆದರೆ ವ್ಯರ್ಥವಾಯಿತು! ಅವೆಲ್ಲವೂ ಭಯಭೀತರಾಗಿ ಒಬ್ಬರಿಗೊಬ್ಬರು ನೋಡಲಾರಂಭಿಸಿದವು.

ಗುಬ್ಬಚ್ಚಿಗಳು ಪ್ರಯತ್ನಿಸುತ್ತಲೇ ಇದ್ದವು, ಆದರೆ ಅವು ವಿಫಲವಾದವು. ಕೊನೆಗೆ ಬುದ್ಧಿವಂತ ಗುಬ್ಬಚ್ಚಿ ಎಲ್ಲರಿಗೂ, ಹೇಳಿತು, ''ನಾವೆಲ್ಲರೂ ನಮ್ಮ ಕೊಕ್ಕಿನಿಂದ ಬಲೆಯನ್ನು ಹಿಡಿದು ಒಂದೇ ಸಮಯದಲ್ಲಿ ಹಾರಿ ಹೋಗೋಣ''. ಎಲ್ಲವು ಅದರ ಮಾತುಗಳನ್ನು ಒಪ್ಪಿದವು. ಎಲ್ಲವೂ ತಮ್ಮ ಶಕ್ತಿಯನ್ನು ಒಟ್ಟುಗೂಡಿಸಿ ಬಲೆಯನ್ನು ಹಿಡಿದು ಹಾರಲಾರಂಭಿಸಿದವು.''

ಬೇಟೆಗಾರನು ಗೊಂದಲಕ್ಕೊಳಗಾದನು, ಬಲೆಯನ್ನು ಹಿಡಿಯಲು ಅವುಗಳ ಹಿಂದೆ ಓಡಲು ಪ್ರಾರಂಭಿಸಿದನು. ಆದರೆ ಅವನಿಗೆ ಯಾವುದೇ ಗುಬ್ಬಚ್ಚಿಗಳನ್ನು ಮಾತ್ರ ಹಿಡಿಯಲು ಸಾಧ್ಯವಾಗಲಿಲ್ಲ. ಅವನು ಓಡುವಾಗ ಕೆಳಗೆ ಬಿದ್ದನು. ಗುಬ್ಬಚ್ಚಿಗಳು ಸ್ವಲ್ಪ ದೂರದಲ್ಲಿದ್ದ ಇಲಿ ಅಣ್ಣನ ಬಳಿಗೆ ಹೋದವು. ಅವು ಸಹಾಯಕ್ಕಾಗಿ ಅವನನ್ನು ಕರೆಯಲು ಪ್ರಾರಂಭಿಸಿದವು. ಇಲಿ ಅಣ್ಣ

ಅವುಗಳನ್ನು ನೋಡಿ ತನ್ನ ಸ್ನೇಹಿತರೊಂದಿಗೆ ಗುಬ್ಬಚ್ಚಿಗಳ ಸಹಾಯಕ್ಕೆ ಓಡಿ ಬಂದನು. ಇಲಿಗಳು ಎಲ್ಲಾ ಬಲೆಗಳನ್ನು ಕಚ್ಚಿ ಸಂಕಟದಲ್ಲಿ ಸಿಲುಕಿದ್ದ ಗುಬ್ಬಚ್ಚಿಗಳನ್ನು ರಕ್ಷಿಸಿದವು. ಎಲ್ಲಾ ಗುಬ್ಬಚ್ಚಿಗಳು ಅವುಗಳಿಗೆ ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಹೇಳಿದವು.



**ಹೇಳಿರಿ ನೋಡೋಣ!**

ಈ ಕಥೆಯಿಂದ ನಾವು ಏನು ಕಲಿತೆವು?

**ಈ ಚಿತ್ರ ಶಿಕ್ಷಕರ ಸಹಾಯದಿಂದ ತಿಳಿದುಕೊಳ್ಳಿ.**

ಈ ಚಿತ್ರ ಕೊಲ್ಲಾಪುರದ ಬಳಿಯ ಖಿದ್ರೇಶ್ವರ ದೇವಸ್ಥಾನದಲ್ಲಿದೆ. ಎರಡು ಹಂಸಗಳು ತಮ್ಮ ಕೊಕ್ಕಿನಲ್ಲಿ ಕೋಲನ್ನು ಹಿಡಿದಿವೆ. ಒಂದು ಆಮೆಯು ಆ ಕೋಲನ್ನು ಹಿಡಿದಿದೆ. ಮೇಲಿನ ಅಂಶಗಳನ್ನು ಆಧರಿಸಿ ನೀವು ಕಥೆಯನ್ನು ಹೇಳಬಲ್ಲಿರಾ? ಶಿಕ್ಷಕರು ಮತ್ತು ಪೋಷಕರ ಸಹಾಯದಿಂದ ಕಥೆಯನ್ನು ತಯಾರಿಸಿರಿ.



ಖಿದ್ರೇಶ್ವರ ದೇವಾಲಯದಲ್ಲಿಯ ಶಿಲ್ಪ

ನಮಗೂ ಇದು ಅನ್ವಯಿಸುತ್ತದೆ. ನಮ್ಮ ದೇಶದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದರೆ, ಅಸಾಧ್ಯವಾದ ಅನೇಕ ಕೆಲಸಗಳನ್ನು ನಾವು ಸುಲಭವಾಗಿ ಮತ್ತು ತ್ವರಿತವಾಗಿ ಮಾಡಬಹುದು, ಹೌದಲ್ಲವೇ?



## ಇದು ನಿಮಗೆ ಗೊತ್ತಿದೆಯೇ?



19 ವರ್ಷದ ಕೆಳಗಿನ ವಿಶ್ವಕಪ್‌ಗೆದ್ದ ಮಹಿಳಾ ಕ್ರಿಕೇಟ್ ತಂಡ




ಭಾರತವು ಮಹಿಳಾ ವಿಶ್ವಕಪ್ ಕ್ರಿಕೇಟ್ ಚಾಂಪಿಯನ್‌ಶಿಪ್‌ನ್ನು ಗೆದ್ದುಕೊಂಡಿತು.



ವಿಶ್ವ ಅಂಧರ ವಿಶ್ವಕಪ್ ಕ್ರಿಕೇಟ್ ಸ್ಪರ್ಧೆ - ಭಾರತೀಯ ಮಹಿಳಾ ವಿಜೇತ ತಂಡ

ಈ ತಂಡಗಳು 2025 ರ ಮಹಿಳಾ ಕ್ರಿಕೇಟ್ ವಿಶ್ವಕಪ್‌ನ ವಿವಿಧ ಸ್ಪರ್ಧೆಗಳಲ್ಲಿ ಅದ್ಭುತ ಪ್ರದರ್ಶನ ನೀಡಿ ಪ್ರಶಸ್ತಿಯನ್ನು ಗೆದ್ದಿವೆ. ನಮ್ಮ ಭಾರತ ದೇಶವು ಹೆಮ್ಮೆಪಡಬೇಕಾದ ವಿಷಯ ಇದೆ. ಕ್ರಿಕೇಟ್‌ನಂತಹ ಕ್ರೀಡೆಯಲ್ಲಿ ನಾವು ಒಟ್ಟಾಗಿ ಯಶಸ್ಸನ್ನು ಸಾಧಿಸಿ ನಮ್ಮ ದೇಶದ ಹೆಮ್ಮೆಯನ್ನು ಹೆಚ್ಚಿಸಬಹುದು ಎಂಬುದಕ್ಕೆ ಇವು ಉದಾಹರಣೆಗಳಾಗಿವೆ. ಅದೇ ಸಮಯದಲ್ಲಿ ಕ್ರಿಕೇಟ್ ಆಡುವಾಗ ದೃಷ್ಟಿಹೀನ ಮಹಿಳೆಯರ ಪ್ರದರ್ಶನವು ತುಂಬಾ ಶ್ಲಾಘನೀಯವಾಗಿದೆ.

## ಸ್ವಾಧ್ಯಾಯ

**ಪ್ರ.1 ಕೆಳಗಿನ ಸಂದರ್ಭಗಳಲ್ಲಿ ನೀವು ಹೇಗೆ ವರ್ತಿಸುತ್ತೀರಿ ಎಂದು ಬರೆಯಿರಿ.**

(1) ನಿಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುವಾಗ – ..............................................................

(2) ಹಿರಿಯರು ನಿಮಗೆ ಮಾರ್ಗದರ್ಶನ ಮಾಡುವಾಗ – ..............................................................

(3) ಶಾಲೆಯಲ್ಲಿ ರಾಷ್ಟ್ರಗೀತೆ ನಡೆದಾಗ – ..............................................................

(4) ಬಿಸ್ಕಿಟ, ಚಾಕೊಲೇಟಗಳನ್ನು ತಿಂದ ನಂತರ, ಅವುಗಳ ಹೊದಿಕೆಗಳು ನಿಮ್ಮ ಹತ್ತಿರ ಇವೆ –..............................

(5) ನಿಮ್ಮೊಂದಿಗೆ ಅಂಗವಿಕಲ ವ್ಯಕ್ತಿಯು ಬಂದರೆ – ..............................................................

**ಪ್ರ.2 ಕೆಳಗಿನ ಚಿತ್ರಗಳಲ್ಲಿ ಏನು ಕಾಣುತ್ತಿದೆ ಎಂಬುದರ ಕುರಿತು ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

(1) ಹಸಿ ಕಸ ಮತ್ತು ಒಣ ಕಸದ ತೊಟ್ಟಿಗಳ ಸುತ್ತಲೂ ಕಸ ಸಂಗ್ರಹವಾಗಿದೆ.

..............................................................

..............................................................



ಕಸ

(2) ಹುಡುಗ ಸಸಿ ನೆಡುತ್ತಿದ್ದಾನೆ.

..............................................................

..............................................................


ವೃಕ್ಷಾರೋಪಣ

(3) ಅಂಗವಿಕಲ ವಿದ್ಯಾರ್ಥಿನಿಯನ್ನು ಒಬ್ಬ ಸ್ನೇಹಿತ ಗಾಲಿಕುರ್ಚಿಯಲ್ಲಿ ಶಾಲೆಯಿಂದ ಕರೆದುಕೊಂಡು ಹೋಗುತ್ತಿದ್ದಾರೆ.

..............................................................

..............................................................


ಅಂಗವಿಕಲ ವಿದ್ಯಾರ್ಥಿ

### ಉಪಕ್ರಮ

- ಭಾರತೀಯ ಮಹಿಳಾ ಆಟಗಾರ್ತಿಯರ ಚಿತ್ರಗಳನ್ನು ಸಂಗ್ರಹಿಸಿ, ಅವುಗಳನ್ನು ವಹಿಯಲ್ಲಿ ಅಂಟಿಸಿ, ಅವುಗಳ ಹೆಸರುಗಳನ್ನು ಬರೆಯಿರಿ.
- ನಿಮ್ಮ ಪೋಷಕರಿಂದ ಮತ್ತು ಶಿಕ್ಷಕರಿಂದ ಇಸೋಪನ ನೀತಿ ಕಥೆ ಮತ್ತು ಪಂಚತಂತ್ರದ ಕಥೆಗಳ ಬಗ್ಗೆ ಮಾಹಿತಿಯನ್ನು ಪಡೆಯಿರಿ. ಅವುಗಳನ್ನು ತರಗತಿಯಲ್ಲಿ ಹೇಳಿರಿ.
- 'ಮೌಲ್ಯವರ್ಧನೆ' ಉಪಕ್ರಮದಲ್ಲಿ ನಿಮಗೆ ಇಷ್ಟವಾದ ಒಂದು ಘಟನೆಯ ಬಗ್ಗೆ ಬರೆಯಿರಿ.

***

ಪ್ರಿಯ ಮಕ್ಕಳೇ!

ಯಾರಾದರೂ ನಿಮ್ಮೊಂದಿಗೆ ಅಸಭ್ಯವಾಗಿ ಸ್ಪರ್ಶಿಸುತ್ತಿದ್ದಾರೆ ಎಂಬ ಅನುಭವವಾಗಿದ್ದರೆ, ನೀವೆಂದಿಗೂ ಮೌನವಾಗಿರಬಾರದು. ನೀವು ಈ ಕೆಳಗಿನ ವಿಚಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು:

1. ನಿಮ್ಮನ್ನು ನೀವೇ ದೂಷಿಸಿಕೊಳ್ಳಬೇಡಿ.
2. ನೀವು ನಂಬಿದ ವ್ಯಕ್ತಿಗೆ ತಕ್ಷಣ ಹೇಳಿ.
3. ನೀವು POCSO e-box ಮೂಲಕ ಮಕ್ಕಳ ಹಕ್ಕು ರಕ್ಷಣಾ ರಾಷ್ಟ್ರೀಯ ಆಯೋಗ (NCPCR) ಕ್ಕೆ ಮಾಹಿತಿಯನ್ನು ತಿಳಿಸಬಹುದು.

**ನಿಮ್ಮನ್ನು ಅಸುರಕ್ಷಿತವಾಗಿ ಸ್ಪರ್ಶಿಸಿದಾಗ ನೀವು ಖಿನ್ನತೆ, ಗೊಂದಲ ಮತ್ತು ಸಹಾಯವಿಲ್ಲದಂತೆ ಎಂದು ಭಾವಿಸಬಾರದು. ಆದರೆ ಇದರಲ್ಲಿ ನಿಮ್ಮದೇನು ತಪ್ಪು ಇರುವದಿಲ್ಲ.**




**ಈ ಬಟನನ್ನುಒತ್ತಿರಿ**

POCSO e-box ಅನ್ನು NCPCR@gov.in ನಲ್ಲಿ ಸಂಪರ್ಕಿಸಬಹುದು.

**ನೀವು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾದರೆ ಮತ್ತು ನೀವು ತಪ್ಪು ಗ್ರಹಿಕೆಗಳನ್ನು ಮಾಡಿಕೊಳ್ಳುವವರಾಗಿದ್ದರೆ ಅಥವಾ ತೊಂದರೆ ಅನುಭವಿಸುತ್ತಿದ್ದರೆ ಅಥವಾ ಯಾರಾದರೂ ತೊಂದರೆಯಲ್ಲಿ ಇದ್ದಾರೆಂದು ತಿಳಿದರೆ ತಕ್ಷಣ 1098 ಕ್ಕೆ ಕರೆಮಾಡಿ.... ಏಕೆಂದರೆ ಕೆಲವೊಂದು ಕರೆಗಳು ನಿಮ್ಮ ಹಾಗೂ ನಿಮ್ಮ ಸ್ನೇಹಿತರ ಜೀವನವನ್ನೇ ಬದಲಾಯಿಬಹುದು.**




**ಚೈಲ್ಡ್‌ಲೈನ್ ೧೦೯೮ (ಹತ್ತು ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲಫ್ರೀ ರಾಷ್ಟ್ರೀಯ ಆಪತ್ಕಾಲದ ಫೋನ್ ಸೇವೆಯಾಗಿದೆ. ಇಂಡಿಯಾ ಫೌಂಡೇಶನ್‌ನ ಒಂದು ಉಪಕ್ರಮವಾಗಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಬೆಂಬಲಿತವಾಗಿದೆ.**

नए समाज की ओर
Towards a new dawn

‘‘ವಿದ್ಯಾರ್ಥಿಗಳಿಗೆ ಯೊಗ್ಯಸ್ಪರ್ಶ - ಅಯೊಗ್ಯಸ್ಪರ್ಶ ಇದರ ಬಗ್ಗೆ ಮಾಹಿತಿ ಕೊಡಿರಿ’’




ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

आपल्या सभोवतालचे जग भाग–२ इयत्ता तिसरी (कन्नड माध्यम)

₹ 65.00

